

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 17 ಮಂಗಳವಾರ 2023

ಸಂಪುಟ: 44 | ಸಂಚಿಕೆ: 182 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4



ಅದ್ದೂರಿ ಶ್ರೀರಂಗಪಟ್ಟಣ ದಸರಾ

● ಮೈಸೂರು ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಉದ್ಘಾಟನೆ ● ಚಾಮುಂಡೇಶ್ವರಿವುಳ್ಳ ಅಂಬಾರಿ ಹೊತ್ತು ಗಾಂಭೀರ್ಯದಿಂದ ಸಾಗಿದ ಮಹೇಂದ್ರ ● ಐತಿಹಾಸಿಕ ಕ್ಷಣಕ್ಕೆ ಸಹಸ್ರ ಸಹಸ್ರ ಮಂದಿ ಸಾಕ್ಷಿ




ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು.

ಶ್ರೀರಂಗಪಟ್ಟಣ, ಅ.16(ವಿನಯ್ ಕಾರೇಕುರ)–ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ 3 ದಿನಗಳ ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ಸೋಮವಾರ ಅದ್ದೂರಿ ಚಾಲನೆ ನೀಡಿದರು.

ತಾಲೂಕಿನ ಕಿರಂಗೂರಿನ ಬನ್ನಿಮಂಟಪದ ಬಳಿ ಮಧ್ಯಾಹ್ನ 3 ರಿಂದ 4 ಗಂಟೆಗೆ ಸಲ್ಲುವ ಅಭಿಜಿನ್ ಮುಹೂರ್ತದಲ್ಲಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಚಾಮುಂಡೇಶ್ವರಿ ಉತ್ಸವ ಮೂರ್ತಿ ಒಳಗೊಂಡ ಜಂಬೂಸವಾರಿ ಮೆರವಣಿಗೆಗೆ ಪುಷ್ಪಾರ್ಚನೆ ಮೂಲಕ ಚಾಲನೆ ನೀಡಿದರು. ನಂತರ ಸಾವಿರಾರು ಜನಸ್ತೋಮದ ನಡುವೆ ಅಂಬಾರಿ ಹೊತ್ತು ಮಹೇಂದ್ರ ಗಾಂಭೀರ್ಯದಿಂದ ಮೆರವಣಿಗೆಯಲ್ಲಿ ಸಾಗಿತು. ಮಹೇಂದ್ರನಿಗೆ ವಿಜಯ ಹಾಗೂ ವರಲಕ್ಷ್ಮಿ ಸಾಥ್ ನೀಡುವ ಮೂಲಕ ದಸರಾ ವೈಭವ ಮರುಕಳಿಸುವಂತಾಯಿತು. ಬನ್ನಿಮಂಟಪದಿಂದ ಹೊರಟ ಅಂಬಾರಿ ಮೆರವಣಿಗೆ ಕಿರಂಗೂರು, ಬಾಬುರಾಯನಕೊಪ್ಪಲು ಮಾರ್ಗವಾಗಿ ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ಶ್ರೀರಂಗಪಟ್ಟಣ ಮುಖ್ಯದ್ವಾರ ಪ್ರವೇಶಿಸಿತು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸೇರಿದ್ದ ಜನಸ್ತೋಮ ಅಂಬಾರಿ ಮೆರವಣಿಗೆ ಹಾಗೂ ಕಲಾ ತಂಡಗಳ ಸೊಬಗನ್ನು ಕಣ್ತುಂಬಿಕೊಂಡರು. ನಂತರ ಶ್ರೀರಂಗನಾಥಸ್ವಾಮಿ ದೇವಾಲಯದ ಬಳಿ ನಿರ್ಮಾಣಗೊಂಡಿರುವ ಶ್ರೀರಂಗ ವೇದಿಕೆ ಹತ್ತಿರ ಮೆರವಣಿಗೆ ಅಂತ್ಯಗೊಂಡಿತು. ಮೆರವಣಿಗೆಯಲ್ಲಿ ಪೊಲೀಸ್ ಬ್ಯಾಂಡ್, ಅಶ್ವದಳ, ಪೂಜಾ ಕುಣಿತ, ವೀರಗಾಸೆ, ನಾರಿ, ಜಡೆ ಕೋಲಾಟ, ಗಾರುಡಿ ಗೊಂಬೆ, ತಮಟೆ, ಕಂಸಾಳೆ, ಡೊಳ್ಳು ಕುಣಿತ, ಸೋಮನ ಕುಣಿತ, ಒನಕೆ ಕುಣಿತ, ರಂಗದ ಕುಣಿತ, ಕೋಳಿ ನೃತ್ಯ, ಕಹಳೆ, ನಾಸಿಕ್ ಡೋಲ್, ದೊಡ್ಡ ಆಂಜನೇಯ, ಪಟ್ಟದ ಕುಣಿತ, ಯಕ್ಷಗಾನ ನೃತ್ಯ, ಹುಲಿವೇಷ, ● 9ನೇ ಪುಟಕ್ಕೆ

ಇಂದು ಸರಿರಾತ್ರಿ ಕಾವೇರಿ ತೀರ್ಥೋದ್ಭವ



ಮಡಿಕೇರಿ, ಅ.16– ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ವತಿಯಿಂದ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಅ.17 ರಂದು ಸರಿರಾತ್ರಿ 1 ಗಂಟೆ 27 ನಿಮಿಷಕ್ಕೆ ಸಲ್ಲುವ ಕರ್ಕಾಟಕ ಲಗ್ನದಲ್ಲಿ ಶ್ರೀ ಮೂಲ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವದ ಪುಣ್ಯ ಕಾಲ ನೆರವೇರಲಿದೆ. ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ● 6ನೇ ಪುಟಕ್ಕೆ

ಇಲ್ಲಿಯವರೆಗೂ ಜಾತ್ಯಾತೀತವಾಗಿಯೇ ರಾಜಕೀಯ ಮಾಡಿದ್ದೇನೆ; ಮುಂದೆಯೂ ಮಾಡ್ತೇನೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ನುಡಿ ● ಕಾಗಿನೆಲೆಯಲ್ಲಿ ಸನ್ಮಾನ ಸಮಾರಂಭದಲ್ಲಿ ಭಾಗಿ ● ಕುರುಬರ ಜಾತಿಯಲ್ಲಿ ಹುಟ್ಟಿರುವುದು ಆಕಸ್ಮಿಕ ● ಆದರೆ ನಾನು ಸದಾ ಸಾಮಾಜಿಕ ನ್ಯಾಯದಿಂದ ವಂಚಿತರಾದವರ ಪರ



ಮೈಸೂರಿನ ಸಿದ್ಧಾರ್ಥನಗರದಲ್ಲಿನ ಕನಕ ಭವನದಲ್ಲಿ ಸೋಮವಾರ ನಡೆದ ಸನ್ಮಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರುಬ ಸಮುದಾಯದ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು. ಶ್ರೀ ಕಾಗಿನೆಲೆ ಕನಕಗುರು ಪೀಠದ ಶಿವಾನಂದಪುರಿ ಸ್ವಾಮೀಜಿ, ಹೊಸದುರ್ಗದ ಈಶ್ವರಾನಂದಪುರಿ ಸ್ವಾಮೀಜಿ, ಶಾಸಕ ಪುಟ್ಟರಂಗಶೆಟ್ಟಿ ಮತ್ತಿತರರಿದ್ದರು.

ಮೈಸೂರು, ಅ.16(ಎಂಕೆ)– ಸರ್ಕಾರದ ಗ್ಯಾರಂಟಿ ಯೋಜನೆಗಳು, ಇಂದಿರಾ ಕ್ಯಾಂಟಿನ್, ಕ್ಷೀರಭಾಗ್ಯ ಸೇರಿದಂತೆ ಸರ್ಕಾರದ ಎಲ್ಲಾ ಯೋಜನೆಗಳು ಎಲ್ಲಾ ಜಾತಿ–ಧರ್ಮದಲ್ಲಿ ಹಿಂದುಳಿದಿರುವ ಹಾಗೂ ಅವಕಾಶ ವಂಚಿತರಿಗೆ ನ್ಯಾಯ ಒದಗಿಸುವ ಯೋಜನೆಗಳಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ವತಿಯಿಂದ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕುರುಬರ ಜಾತಿಯಲ್ಲಿ ಹುಟ್ಟಿರುವುದು ಆಕಸ್ಮಿಕ. ನಿಮಗೆ ನಮ್ಮ ಜಾತಿಯವನೊಬ್ಬ 2ನೇ ಬಾರಿಗೆ ಮುಖ್ಯಮಂತ್ರಿಯಾದ ಎಂಬುದು ಹೆಮ್ಮೆ. ಆದರೆ, ನಾನು ರಾಜಕೀಯವನ್ನು ಜಾತ್ಯಾತೀತವಾಗಿ ಮಾಡುತ್ತಿದ್ದೇನೆ. ಯಾವುದೇ ಜಾತಿ–ಧರ್ಮವೆನ್ನದೆ ಎಲ್ಲರಿಗೂ ಗೌರವ ಕೊಡುತ್ತೇನೆ. ಸಂವಿಧಾನದಲ್ಲಿ ತಿಳಿಸಿದಂತೆ ಎಲ್ಲ ಜಾತಿ ಮತ್ತು ಧರ್ಮದವರನ್ನು ಗೌರವಿಸಿ, ಜಾತ್ಯಾತೀತವಾಗಿರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾ, ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವ ವರ್ಗಗಳ ಪರವಾಗಿ ನಿಲ್ಲುವ ಕೆಲಸವನ್ನು ಹಿಂದೆ ಮುಖ್ಯಮಂತ್ರಿಯಾಗಿದ್ದಾಗಲೂ ಮಾಡಿದ್ದೇನೆ. ಮುಂದೆಯೂ ಮಾಡುತ್ತೇನೆ. ಈಗಲೂ ಮಾಡುತ್ತಿದ್ದೇನೆ ಎಂದರು.


ಮುಖ್ಯವಾಗಿ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಮುಖ್ಯವಾಹಿನಿಗೆ ಬರಬೇಕು. ಶಕ್ತಿ ಯೋಜನೆಯಡಿ ಇವತ್ತಿನವರೆಗೆ ಸುಮಾರು 70 ಕೋಟಿಗೂ ಹೆಚ್ಚು ಮಹಿಳೆಯರು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ ಇದರಿಂದ ಪ್ರವಾಸೋದ್ಯಮ, ಆರ್ಥಿಕ ಚಟುವಟಿಕೆಗೆ ಚುರುಕುಗೊಂಡಿದೆ. ಉದ್ಯೋಗಗಳು ● 9ನೇ ಪುಟಕ್ಕೆ

ರಾಜಕೀಯಕ್ಕೆ ಬಂದು 50 ವರ್ಷ

“ ನಾನು ರಾಜಕೀಯಕ್ಕೆ ಬಂದು 50 ವರ್ಷಗಳಾಗಿದೆ. 1972–73ರಿಂದಲೂ ರಾಜಕೀಯದಲ್ಲಿದ್ದೇನೆ. ಆದರೆ 1978ರಲ್ಲಿ ತಾಲೂಕು ಬೋರ್ಡ್ ಮೆಂಬರ್ ಆದ ನಂತರದಿಂದ ಲೆಕ್ಕ ಹಾಕಿದರೆ 45 ವರ್ಷವಾಗಿದೆ. ಜನತಾ ಪಾರ್ಟಿ, ಜನತಾದಳ, ಜೆಡಿಯು ನಂತರ ಜೆಡಿಎಸ್ ಎಂದೆಲ್ಲಾ ಬದಲಾಯಿತು. 2005 ರಲ್ಲಿ ಜೆಡಿಎಸ್‌ನಿಂದ ನನ್ನನ್ನು ಉಚ್ಚಾಟನೆ ಮಾಡಿದ ನಂತರ ಅನಿವಾರ್ಯವಾಗಿ ಕಾಂಗ್ರೆಸ್ ಸೇರಬೇಕಾಗಿ ಬಂತು. ಅಹ್ಮದ್ ಪಟೇಲ್ ಸೇರಿದಂತೆ ಅಂದಿನ ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಪಕ್ಷಕ್ಕೆ ಸೇರಲು ತಿಳಿಸಿದರು. ನಂತರ ನಿಮ್ಮೆಲ್ಲರ ಆಶೀರ್ವಾದದಿಂದ ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕಿತು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಕಾವೇರಿ ಜಲ ವಿವಾದ: ನಾಳೆ ಕನ್ನಡ ಹೋರಾಟಗಾರರಿಂದ ದೆಹಲಿ ಚಲೋ



ಬೆಂಗಳೂರು: ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳು 'ದೆಹಲಿ ಚಲೋ' ಕಾರ್ಯಕ್ರಮಕ್ಕೆ ಕರೆ ನೀಡಿವೆ. ಅ.18ರಂದು ಜಂತರ್ ಮಂತರ್‌ನಲ್ಲಿ ಕನ್ನಡ ಹೋರಾಟಗಾರರು ಪ್ರತಿಭಟನೆ ನಡೆಸಲಿದ್ದಾರೆ.

ಮಂಗಳವಾರ ಕನ್ನಡಪರ ಹೋರಾಟಗಾರರು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಅವರೊಂದಿಗೆ ಬೆಂಗಳೂರಿನಿಂದ ರೈಲು ಮತ್ತು ವಿಮಾನದ ಮೂಲಕ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ದೆಹಲಿಯ ಜಂತರ್ ಮಂತರ್‌ನಲ್ಲಿ ಕನ್ನಡಪರ ಹೋರಾಟಗಾರರು ನಡೆಸಲಿರುವ ಪ್ರತಿಭಟನೆಯಲ್ಲಿ ದೆಹಲಿ ಕನ್ನಡ ಸಂಘ ಕೂಡ ಸೇರಲಿದೆ. ಕಾವೇರಿ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ಕೋರಲು ಕನ್ನಡ ಹೋರಾಟಗಾರರು ಪ್ರಧಾನಿ ನರೇಂದ್ರ ಮೋದಿಯವರ ● 9ನೇ ಪುಟಕ್ಕೆ

ಡಿಕೆಶಿ ವಿರುದ್ಧದ ಸಿಬಿಐ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ಹಿಂಪಡೆಯಲು 'ಸುಪ್ರೀಂ' ನಕಾರ



ನವದೆಹಲಿ: ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ತನಿಖೆಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಹಿಂಪಡೆಯಲು ಸುಪ್ರೀಂಕೋರ್ಟ್ ಸೋಮವಾರ ನಿರಾಕರಿಸಿದೆ. ಡಿಕೆ ಶಿವಕುಮಾರ್ ವಿರುದ್ಧದ ಭ್ರಷ್ಟಾಚಾರ ಪ್ರಕರಣದ ತನಿಖೆಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಪ್ರಶ್ನಿಸಿ ಕೇಂದ್ರೀಯ ತನಿಖಾ ದಳ (ಸಿಬಿಐ) ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿರುದ್ಧ್ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರನ್ನೊಳಗೊಂಡ ಪೀಠವು, ಸಿಬಿಐ ಮೇಲ್ಮನವಿಯ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಡಿಕೆಶಿವಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಿದೆ ಇದಕ್ಕೂ ಮುನ್ನ ಜುಲೈನಲ್ಲಿ ಡಿ.ಕೆ.ಶಿವಕುಮಾರ್ ● 9ನೇ ಪುಟಕ್ಕೆ

ಗುತ್ತಿಗೆದಾರರ ಮೇಲೆ ಐಟಿ ದಾಳಿ ಪ್ರಕರಣ

94 ಕೋಟಿ ನಗದು, 8 ಕೋಟಿ ಮೌಲ್ಯದ ಚಿನ್ನ, ವಜ್ರಾಭರಣ, ವಿದೇಶಿ ವಾಚ್‌ಗಳು ವಶಕ್ಕೆ

ಕಂಗೆಟ್ಟ ಕಾಂಗ್ರೆಸ್ ಹೈಕಮಾಂಡ್

■ ಬೆಂಗಳೂರಿಗೆ ದೌಡಾಯಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ■ ಪಕ್ಷದ ನಾಯಕರೊಂದಿಗೆ ನಿರಂತರ ರಹಸ್ಯ ಸಭೆ

ಬೆಂಗಳೂರು, ಅ.16(ಕೆಎಂಶಿ)– ಗುತ್ತಿಗೆದಾರರ ಮೇಲೆ ನಡೆದ ಆದಾಯ ತೆರಿಗೆ ಇಲಾಖೆಯ ಸರಣಿ ದಾಳಿಯಿಂದ ಕಾಂಗ್ರೆಸ್ ಹೈಕಮಾಂಡ್ ಬೆಚ್ಚಿ ಬಿದ್ದಿದೆ.


ಇನ್ನು, ರಾಜ್ಯದಲ್ಲಿ ಆದಾಯ ತೆರಿಗೆ ದಾಳಿ ಮುಗಿಯುವ ಮುನ್ನವೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ನಗರಕ್ಕೆ ಧಾವಿಸಿದ್ದಾರೆ.

ಬರು ಬರುತ್ತಿದ್ದಂತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜತೆಗೂಡಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೆ ತೆರಳಿ ರಹಸ್ಯ ಮಾತುಕತೆ ನಡೆಸಿದರು. ಈ ಮಾತುಕತೆ ಸಂದರ್ಭದಲ್ಲೇ ಆದಾಯ ತೆರಿಗೆ ಇಲಾಖೆ ಮಧ್ಯಂತರ ವರದಿಯೊಂದನ್ನು ಬಿಡುಗಡೆ ಮಾಡಿ 94 ಕೋಟಿ ರೂ. ನಗದು, 8 ಕೋಟಿ ಮೌಲ್ಯದ ಚಿನ್ನಾಭರಣ, ವಿದೇಶಿ ವಾಚ್‌ಗಳು ವಶಪಡಿಸಿಕೊಂಡಿರುವುದಾಗಿ ● 9ನೇ ಪುಟಕ್ಕೆ



ನಾಳೆ ಮೈಸೂರು ವಿಶ್ವವಿದ್ಯಾನಿಲಯದ 103ನೇ ಘಟಿಕೋತ್ಸವ

● ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್; 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ; ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ತಾರೆ ಜಾವಗಲ್ ಶ್ರೀನಾಥ್‌ಗೆ ಗೌರವ ಡಾಕ್ಟರೇಟ್ ● ಇದೆ ವೇಳೆ 32,240 ಅಭ್ಯರ್ಥಿಗಳಿಗೆ ಪಿಹೆಚ್.ಡಿ, ನಾನಾ ಪದವಿ ಪ್ರದಾನ



ಕ್ರಾಫರ್ಡ್ ಹಾಲ್‌ನಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ವಿ.ಆರ್.ಶೈಲಜಾ (ಆಡಳಿತ), ಪ್ರೊ.ಕೆ.ಎಂ.ಮಹದೇವನ್ (ಮೌಲ್ಯಮಾಪನ).

ಮೈಸೂರು,ಅ.16(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ (2022ನೇ ಸಾಲಿನ ಶೈಕ್ಷಣಿಕ ವರ್ಷ) ಅ.18ರಂದು ನಡೆಯಲಿದ್ದು, ಪಿಹೆಚ್.ಡಿ ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ಒಟ್ಟು 32,240 ಅಭ್ಯರ್ಥಿಗಳಿಗೆ ಪದವಿಗಳನ್ನು ಪ್ರದಾನ ಮಾಡಲಾಗುತ್ತಿದೆ.

ಅಲ್ಲದೆ, ಈ ಬಾರಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಹಾಗೂ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರರೂ ಆದ ಐಸಿಸಿ ಕ್ರಿಕೆಟ್ ಪಂದ್ಯಗಳ ತೀರ್ಪುಗಾರ ಜಾವಗಲ್ ಶ್ರೀನಾಥ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ.


ಮೈಸೂರು ವಿವಿಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಈ ವಿಷಯ ತಿಳಿಸಿದರು. ರಾಜ್ಯದ ರಾಜ್ಯಪಾಲರೂ ಆದ ವಿವಿ ಕುಲಾಧಿಪತಿ ಥಾವರ್‌ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸಲಿದ್ದಾರೆ. ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ ವಿಶ್ರಾಂತ ಮಹಾ ನಿರ್ದೇಶಕ ಪದ್ಮವಿಭೂಷಣ ಡಾ.ವಾಸುದೇವ ಕೆ.ಆತ್ರೆ ಘಟಿಕೋತ್ಸವ ● 6ನೇ ಪುಟಕ್ಕೆ



ಡಾ.ಪಿ.ಎಸ್.ಶಂಕರ್

ವೈದ್ಯಕೀಯ ಕ್ಷೇತ್ರದ ದಿಗ್ಗಜ

ಕೇವಲ ಇಂಗ್ಲಿಷ್ ಮಾತ್ರವಲ್ಲದೆ, ಕನ್ನಡದಲ್ಲೂ ವೈದ್ಯಕೀಯ ಸಾಹಿತ್ಯದ ಕೃಷಿ ಮಾಡುವ ಮೂಲಕ ನಾಡಿನ ಸಾಮಾನ್ಯ ಜನತೆಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದ ಕೀರ್ತಿ ನಾಡೋಜ ಡಾ.ಪಿ.ಎಸ್. ಶಂಕರ್ ಅವರಿಗೆ ಸಲ್ಲುತ್ತದೆ. ಈಗಾಗಲೇ ವಿವಿಧ ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ನಾಡೋಜ ಡಾ.ಪಿ.ಎಸ್.ಶಂಕರ್, ಇದೀಗ ಆರನೇ ಬಾರಿಗೆ ಈ ಗೌರವಕ್ಕೆ ಭಾಜನರಾಗುತ್ತಿದ್ದು, ಈ ಬಾರಿ ಮೈಸೂರು ವಿವಿ ● 6ನೇ ಪುಟಕ್ಕೆ



ಕೆ.ಬಿ.ಗಣಪತಿ

ಪತ್ರಿಕಾ ರಂಗದ ಮೌಲ್ಯ

ಪತ್ರಿಕಾ ರಂಗದ ಮೌಲ್ಯ, ಸಾಮಾಜಿಕ ಕಳಕಳಿ ಮೂಲಕ ಹಿರಿಯ ಪತ್ರಕರ್ತರಾದ ಕೆ.ಬಿ.ಗಣಪತಿ (ಕೆಬಿಜಿ) ಅವರು ಎಲ್ಲರಿಗೂ ಚಿರಪರಿಚಿತರು. 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಇವರು, ತಮ್ಮ ಬರವಣಿಗೆ ಮೂಲಕ ಅನೇಕ ಬದಲಾವಣೆಗೂ ಕಾರಣರಾಗಿದ್ದಾರೆ. ಇವರು 1978ರಲ್ಲಿ ಆರಂಭಿಸಿದ 'ಸ್ಟಾರ್ ಆಫ್ ಮೈಸೂರ್' ಆಂಗ್ಲ ದೈನಿಕ ಮೈಸೂರು ಮತ್ತು ಸುತ್ತಮುತ್ತ ಜನಪ್ರಿಯತೆ ಗಳಿಸಿದೆ. ಇವರೇ, 1980ರಲ್ಲಿ ಪ್ರಾರಂಭಿಸಿದ ● 6ನೇ ಪುಟಕ್ಕೆ



ಜಾವಗಲ್ ಶ್ರೀನಾಥ್

ಭಾರತೀಯ ಕ್ರಿಕೆಟ್ ಸಾಧಕ

ತಮ್ಮ ಮಾರಕ ಬೌಲಿಂಗ್ ದಾಳಿಯಿಂದ ಎದುರಾಳಿ ಬ್ಯಾಟ್ಸ್‌ಮನ್‌ಗಳನ್ನು ಕಂಗೆಡಿಸುತ್ತಿದ್ದ ಭಾರತ ತಂಡದ ಮಾಜಿ ಆಟಗಾರ 'ಮೈಸೂರು ಎಕ್ಸ್‌ಪ್ರೆಸ್' ಖ್ಯಾತಿಯ ಜಾವಗಲ್ ಶ್ರೀನಾಥ್ ಹಾಸನ ಮೂಲದವರು. ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಜಾವಗಲ್‌ನಲ್ಲಿ 1969ರಲ್ಲಿ ಜನಿಸಿದ ಶ್ರೀನಾಥ್ ಅವರು, ಮೈಸೂರಿನ ಮರಿಮಲ್ಲಪ್ಪ ಹೈಸ್ಕೂಲ್‌ನಲ್ಲಿ ಓದುತ್ತಿರುವಾಗಲೇ ಕ್ರಿಕೆಟ್ ಗೀಳು ಹಚ್ಚಿಸಿಕೊಂಡರು. ಇಲ್ಲಿ ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ (ಜೆಸಿ ಕಾಲೇಜು) ಇಂಜಿನಿಯರಿಂಗ್ ಪದವಿ(BE) ಪಡೆದರು. ● 6ನೇ ಪುಟಕ್ಕೆ

ಸಾರ್ವಜನಿಕವಾಗಿ ದಸರಾ ಖರ್ಚು ವೆಚ್ಚ ಪ್ರಕಟಿಸಲು ಆಗ್ರಹ



ಮೈಸೂರು, ಅ.16(ಜಿಎ)–ದಸರಾ ಮಹೋತ್ಸವದ ಖರ್ಚು ವೆಚ್ಚದ ಸಂಪೂರ್ಣ ಮಾಹಿತಿಯನ್ನು ಪಾರದರ್ಶಕವಾಗಿ ಜಿಲ್ಲಾಡಳಿತ ಸಾರ್ವಜನಿಕವಾಗಿ ಪ್ರಕಟಿಸಬೇಕೆಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾ.ಸ.ಪ್ರವೀಣ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕಾರಣಿಗಳು, ಅಧಿಕಾರಿಗಳು ದಸರಾ ಉಪಸಮಿತಿ ಜವಾಬ್ದಾರಿ ಪಡೆದುಕೊಂಡಿದ್ದು, ಸಂಭ್ರಮದ ದಸರಾ ಮಾಡುತ್ತೇವೆ ಎಂದು ಖರ್ಚು ವೆಚ್ಚದಲ್ಲಿ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ. ಸರೋದ್ ವಾದಕ ಪಂಡಿತ್ ತಾರಾನಾಥ್ ಅವರ ಬಳಿಯೇ ಕಮಿಷನ್ ಕೇಳಿರುವ ವಿಷಯ ಎಲ್ಲೆಡೆ ಭಾರಿ ಸುದ್ದಿಯಾಗಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರದ ಮೇಲೆ ಅನುಮಾನ ಮೂಡಿರುವುದರಿಂದ ದಸರಾ ವೆಚ್ಚದ ಪೂರ್ಣ ವಿವರವನ್ನು ಪಾರದರ್ಶಕವಾಗಿ ಜಿಲ್ಲಾಡಳಿತ ಸಾರ್ವಜನಿಕವಾಗಿ ಪ್ರಕಟಿಸಬೇಕೆಂದು ಆಗ್ರಹಿಸಿದರು.

ದಸರಾ ಕಾರ್ಯಕ್ರಮದ ಎಲ್ಲಾ ಟೆಂಡರ್‌ಗಳ ಮಾಹಿತಿಯನ್ನು ಸಾರ್ವಜನಿಕಗೊಳಿಸಬೇಕು. ವಿವಿಧ ಕಾರ್ಯಕ್ರಮಗಳ ಪ್ರವೇಶ ಮತ್ತು ಪಾರ್ಕಿಂಗ್ ಶುಲ್ಕದ ಮಾಹಿತಿಯನ್ನು ಸಾರ್ವಜನಿಕರಿಗೆ ಕಾಣುವ ಹಾಗೆ ಬೋರ್ಡ್ ಅಳವಡಿಸಬೇಕು. ಅಧಿಕಾರಿಗಳು ಸರ್ಕಾರಿ ವಾಹನಗಳಲ್ಲಿ ಅವರ ಕುಟುಂಬಸ್ಥರನ್ನು ಕರೆದುಕೊಂಡು ಸುತ್ತುವುದನ್ನು ತಡೆಯಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪದಾಧಿಕಾರಿಗಳಾದ ರಾಜೇಗೌಡ, ಶ್ರೀವರಿ, ರವಿಕುಮಾರ್, ಡಿಪಿಕೆ ಪರಮೇಶ್ ಉಪಸ್ಥಿತರಿದ್ದರು.

ಮಾಜಿ ಮೇಯರ್ ನಾರಾಯಣ್ ವಿರುದ್ಧದ ಹೇಳಿಕೆಗೆ ಖಂಡನೆ



ಮೈಸೂರು, ಅ.16(ಜಿಎ)–ಮೈಸೂರು ನಗರಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ್ ವಿರುದ್ಧ ನಿವೃತ್ತ ಪೌರಕಾರ್ಮಿಕರು ನೀಡುತ್ತಿರುವ ಹೇಳಿಕೆಯನ್ನು ಸಂಘದ ನಗರಾಧ್ಯಕ್ಷ ಆರ್.ಹರೀಶ್ ಖಂಡಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾರಾಯಣ್ ಅವರು ರಾಜ್ಯದಲ್ಲಿ ಪೌರಕಾರ್ಮಿಕರ ಸಂಘಟನೆ ಮಾಡಿ, ಕಳೆದ 40 ವರ್ಷಗಳಿಂದ ಅವರ ಪರವಾಗಿ ಶ್ರಮಿಸಿದ್ದಾರೆ. ಇದರ ಫಲವಾಗಿ ಗುತ್ತಿಗೆ ಪದ್ಧತಿ ರದ್ದಾಗಿದ್ದು, 11,800 ಮಂದಿ ನೇರ ನೇಮಕಾತಿಯಾಗಲು ಸಹಕಾರಿಯಾಗಿದೆ. ಹೀಗೆ ಅನೇಕ ಹೋರಾಟಗಳ ಮೂಲಕ ಪೌರಕಾರ್ಮಿಕರ ಪರವಾಗಿ ಕೆಲಸ ಮಾಡಿರುವವರ ಬಗ್ಗೆ ನಿವೃತ್ತ ಪೌರಕಾರ್ಮಿಕರಾದ ಎನ್.ಮಾರ ಮತ್ತು ಟಿ.ಶ್ರೀನಿವಾಸ್ ಅವರು ವಿನಾಕಾರಣ ಆರೋಪ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಎನ್.ಮಾರ ಮತ್ತು ಟಿ.ಶ್ರೀನಿವಾಸ್ ಅವರು ಪೌರಕಾರ್ಮಿಕರ ಬೆಳಗಿನ ಉಪಾಹಾರ ಭತ್ಯೆ ಹೆಚ್ಚುವರಿ ಹಣದಲ್ಲಿ ಪ್ರತಿ ಪೌರಕಾರ್ಮಿಕರಿಂದ 2 ಸಾವಿರ ರೂ.ಗಳಂತೆ 48 ಲಕ್ಷ ರೂ.ಗಳನ್ನು ವಸೂಲಿ ಮಾಡಿದ್ದು, ದುರುಪಯೋಗಪಡಿಸಿಕೊಂಡಿದ್ದಾರೆ. ಇದರ ಬಗ್ಗೆ ಪ್ರಶ್ನಿಸಿದ್ದಾಗ ಅವರು ನಾರಾಯಣ್ ವಿರುದ್ಧ ತಿರುಗಿ ಬಿದ್ದಿದ್ದು, ಇವರ ಅವ್ಯವಹಾರದ ಬಗ್ಗೆ ಈಗಾಗಲೇ ಕಾರ್ಮಿಕ ಇಲಾಖೆಗೂ ದೂರು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಲೋಕಾಯುಕ್ತಕ್ಕೆ ದೂರು ನೀಡುತ್ತೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಂಕರಪ್ಪ, ಪಾರ್ವತಿ, ರತ್ನಮ್ಮ, ಜಯರಾಮ್, ಗೌರಮ್ಮ ಮತ್ತು ಬನ್ನಮ್ಮ ಉಪಸ್ಥಿತರಿದ್ದರು.

ಖಾಸಗಿ ವೈದ್ಯರ ನಿರ್ಲಕ್ಷ್ಯದಿಂದ ಯುವಕ ಸಾವು ಆರೋಪ; ಕಾನೂನು ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಅ.16(ಜಿಎ)–ನಗರದ ಖಾಸಗಿ ಆಸ್ಪತ್ರೆ ವೈದ್ಯರ ನಿರ್ಲಕ್ಷ್ಯದಿಂದ ಸಾವನ್ನಪ್ಪಿದ ದಲಿತ ಯುವಕ ಎಸ್.ಸಿ.ಸ್ವಾಗತ್ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಹಾಗೂ ವೈದ್ಯರ ವಿರುದ್ಧ ಕಾನೂನು ಕ್ರಮ ವಹಿಸಬೇಕೆಂದು ಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ವತಿಯಿಂದ ಸಿದ್ಧಾರ್ಥನಗರ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ವೇದಿಕೆಯ ಹರಿಹರ ಆನಂದಸ್ವಾಮಿ, ನಾಗರತ್ನ, ಎನ್.ಎಸ್.ಚಂದ್ರಯ್ಯ, ಡಿ.ಕುಮಾರ್, ಟಿ.ಈರಯ್ಯ, ಸೀಗೂರು ವಿಜಯಕುಮಾರ್ ಹೆಚ್.ಡಿ.ರಮೇಶ್, ಭೂತನಹಳ್ಳಿ ಶಿವಣ್ಣ, ನಾರಾಯಣ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬ್ರಾಂಡೆಡ್ ಗಾರ್ಮೆಂಟ್ಸ್ ಭಾರೀ ರಿಯಾಯ್ತಿ ಮಾರಾಟ

ಮೈಸೂರು, ಅ.16– ನಗರದ ಹೋಟೆಲ್ ಪೈವಿಸ್ತಾದಲ್ಲಿ ನಡೆಯುತ್ತಿರುವ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್‌ಗಳ ಮೇಲಿನ ಭಾರಿ ರಿಯಾಯಿತಿ



ಮಾರಾಟ ಮೇಳಕ್ಕೆ ನಾಳೆ(ಅ.17) ಕಡೇ ದಿನವಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ.

ದಸರಾ ಹಿನ್ನೆಲೆಯಲ್ಲಿ 50 ಸಾವಿರ ಬಗೆಯ ಉನ್ನತ ಶ್ರೇಣಿಯ ಬ್ರಾಂಡೆಡ್ ಗಾರ್ಮೆಂಟ್ಸ್‌ಗಳ ಪ್ರದರ್ಶನ ಮತ್ತು ಮಾರಾಟ, ಬ್ರಾಂಡೆಡ್ ಫುಟ್‌ವೇರ್, ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್, ಪ್ಯಾಂಟ್ಸ್, ಟೀ–ಶರ್ಟ್, ಜಾಕೆಟ್ಸ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್‌ಗಳು ಇಲ್ಲಿ ಲಭ್ಯವಿದ್ದು, ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಟಾಪ್ಸ್, ಸ್ವೆಟರ್ಸ್, ಜಾಕೆಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸೇರಿದಂತೆ ವಿವಿಧ ಕಂಪನಿಗಳ ಪಾದರಕ್ಷೆಗಳು ಭಾರೀ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದೆ. ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಮಾರಾಟ ನಡೆಯಲಿದ್ದು, ಗ್ರಾಹಕರ ಅನುಕೂಲಕ್ಕಾಗಿ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ನಿಧನ

ಮಾತಿ ನಿರ್ಮಲಾ



ಮೈಸೂರು,ಅ.16–ನಗರದ ಒಂಟಿಕೊಪ್ಪಲಿನ ನಿವಾಸಿಯಾಗಿರುವ ಮಾತಿ ನಿರ್ಮಲಾ (63) ಅವರು ಸೋಮವಾರ ನಿಧನರಾದರು. ಮೃತರು ಪತಿ ಮರಿ ಸೋಸೆನ್, ಪುತ್ರಿಯರಾದ ಗ್ರೇಸಿ, ರೀನಾ, ಪುತ್ರ ಅರುಣ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ವಿದ್ಯಾರಣ್ಯಪುರಂನಲ್ಲಿರುವ ಕ್ರೈಸ್ತ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಂಪನಾಯಕ



ಜಯಪುರ ಗ್ರಾಪಂನ ಮಾಜಿ ಉಪಾಧ್ಯಕ್ಷ ಕೆಂಪನಾಯಕ(45) ಅವರು ಇಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದು, ನಾಳೆ (ಮಂಗಳವಾರ) ಮಧ್ಯಾಹ್ನ ಒಂದು ಗಂಟೆಗೆ ಜಯಪುರ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾ ಯುವ ಕವಿಗೋಷ್ಠಿಗೆ ಚಾಲನೆ

ಸಾಹಿತಿಗೆ ಪ್ರಕೃತಿ, ಸಮಾಜದ ಆಗು ಹೋಗುಗಳು ಮುಖ್ಯವೇ ಹೊರತು ಓದಲ್ಲ: ಡಾ.ಡಿ.ಕೆ.ರಾಜೇಂದ್ರ



ಮೈಸೂರು, ಅ.16(ಜಿಎ)–ಸಾಹಿತಿಯು ಪ್ರಕೃತಿ, ಸಮಾಜದಲ್ಲಿ ನಡೆಯುವ ಘನಘೋರ ಘಟನೆಗೆ ಹೇಗೆ ಸ್ಪಂದಿಸುತ್ತಾನೆ ಎಂಬುದು ಮುಖ್ಯವೇ ಹೊರತು ಅವನಿಗೆ ಓದು ಮುಖ್ಯವಲ್ಲ ಎಂದು ಹಿರಿಯ ಸಾಹಿತಿ ಡಾ.ಡಿ.ಕೆ.ರಾಜೇಂದ್ರ ಅಭಿಪ್ರಾಯಪಟ್ಟರು.

ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸ್ಪಂದನ ಸಾಂಸ್ಕೃತಿಕ ಪರಿಷತ್ತು ವತಿಯಿಂದ ಆಯೋಜಿಸಿದ್ದ ದಸರಾ ಯುವ ಕವಿಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು. ಇದೇ ಮೊದಲ ಬಾರಿಗೆ ದಸರಾ ಅವಿಭಾಜ್ಯ ಅಂಗವಾಗಿ ಯುವ ಕವಿಗೋಷ್ಠಿಯನ್ನು ಆಯೋಜಿಸಿರುವುದು ಸಂತಸದ ವಿಚಾರವಾಗಿದೆ. ಈ ಹಿಂದೆ ನಗರದ ಜಗನ್ಮೋಹನ ಅರಮನೆಯಲ್ಲಿ ಕವಿಗೋಷ್ಠಿ ನಡೆಯುತ್ತಿತ್ತು. ಅದರಲ್ಲಿ ಘಟಾನುಘಟಿ ಕವಿಗಳು ಭಾಗವಹಿಸುತ್ತಿದ್ದರು. ಆ ಗೋಷ್ಠಿಯನ್ನು ನಿಭಾಯಿಸುವುದೇ ಒಂದು ಸಾಹಸವಾಗಿತ್ತು ಅದರಲ್ಲಿ ಭಾಗವಹಿಸಲು ಸಾಕಷ್ಟು ಪೈಪೋಟಿ ಇರುತ್ತಿತ್ತು. ದಸರಾ ಕವಿಗೋಷ್ಠಿಯಲ್ಲಿ ವಂಚಿತರಾದವರಿಗೆ ಈ ವೇದಿಕೆ ಉತ್ತಮ ಅವಕಾಶವಾಗಲಿದೆ. ರಾಜಾಶ್ರಯದ ಆಸ್ಥಾನದಲ್ಲಿ ಕವಿಗಳನ್ನು ಪೋಷಿಸುವುದೇ ಅವರಿಗೆ ಹೆಮ್ಮೆಯ ವಿಚಾರವಾಗಿತ್ತು ಎಂದು ಸ್ಮರಿಸಿದರು.

ದಸರಾ ಕಲೆ, ಸಾಹಿತ್ಯ ಕ್ರೀಡೆ ಸೇರಿದಂತೆ ಅನೇಕ ಕಲೆಗಳ ಸಾಂಸ್ಕೃತಿಕ, ಧಾರ್ಮಿಕ ವಿಚಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಸಾಹಿತ್ಯವೂ ಒಂದು ಭಾಗವಾಗಿದೆ. ದಸರಾ ಮಹೋತ್ಸವ ಸಾಹಿತ್ಯ, ಸಂಸ್ಕೃತಿ, ಕ್ರೀಡೆಯ ಸಂಗಮವಾಗಿದ್ದು, ರಾಜರು ಕಲೆ, ಸಾಹಿತ್ಯವನ್ನು ಪೋಷಿಸಿದ ಹಿನ್ನೆಲೆಯಲ್ಲಿ ಕವಿಗೋಷ್ಠಿ ದಸರಾ ಸಂದರ್ಭದಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಪಂಪನ ಕಾಲದಿಂದಲೂ ಸಾಹಿತ್ಯವನ್ನು ನೋಡಿದಾಗ ಸಮಾಜಕ್ಕೂ ಮತ್ತು ಸಾಹಿತ್ಯಕ್ಕೂ ಸಂಬಂಧವಿದೆ ಎಂಬುದು ತಿಳಿಯುತ್ತದೆ. ಬದುಕು ವೈವಿಧ್ಯಮಯವಾಗಿದ್ದರೆ, ಸಾಹಿತ್ಯವೂ ವೈವಿಧ್ಯಮಯವಾಗಿರುತ್ತದೆ ಎಂದರು.

ಸಾಹಿತಿಗಳು ಸಮಾಜದಲ್ಲಿ ನಡೆಯುವ ಘನಘೋರ ಘಟನೆಗಳನ್ನು ನೋಡಿ ಸುಮ್ಮನೆ ಇರಬಾರದು. ಅದರ ಬಗ್ಗೆ ಪ್ರತಿಕ್ರಿಯಿಸಿದರೆ, ಇದರಿಂದ ಸಾಹಿತ್ಯ ಉಗಮವಾಗುತ್ತದೆ. ಪ್ರಕೃತಿಯ ಸೌಂದರ್ಯ ನೋಡಿದಾಗ ಹೇಗೆ ಸ್ಪಂದಿಸುತ್ತೇವೆ ಎಂಬುದು ಸಾಹಿತಿಗೆ ಮುಖ್ಯ. ಸಾಹಿತಿಗೆ ಓದು ಮುಖ್ಯವಲ್ಲ. ಅನೇಕ ಜನಪದರು ಓದದೇ ಅದ್ಭುತವಾದ ಗೀತೆಗಳನ್ನು ರಚಿಸಿದ್ದಾರೆ. ಸಾಹಿತ್ಯ ಜನರನ್ನು ಒಗ್ಗೂಡಿಸುವ ಕೆಲಸ ಮಾಡಬೇಕು. ಕವಿಯ ಮನಸು ಎಲ್ಲವನ್ನು ಕಾಣಬೇಕು ಎಂದು ಯುವ ಸಾಹಿತಿಗಳಿಗೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರಾಧ್ಯಾಪಕಿ ಡಾ.ಷಹಸೀನಾ ಬೇಗಂ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಹೆಚ್.ಎ.ಸುಮತಿ ಮತ್ತು ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಉಪಸ್ಥಿತರಿದ್ದರು.

ಕೆ.ಎಸ್.ಭಗವಾನ್ ಹೇಳಿಕೆಗೆ ಹೇಮಾ ನಂದೀಶ್ ಖಂಡನೆ



ಹೇಮಾ ನಂದೀಶ್

ಮೈಸೂರು, ಅ.16–ಒಕ್ಕಲಿಗ ಸಮಾಜ ಮತ್ತು ಸಂಸ್ಕೃತಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಪ್ರಗತಿಪರ ಚಿಂತಕ ಕೆ.ಎಸ್.ಭಗವಾನ್ ಅವರು ಕ್ಷಮೆ ಕೇಳಬೇಕು ಮತ್ತು ಈ ಕೂಡಲೇ ಹೇಳಿಕೆಯನ್ನು ವಾಪಸ್ ಪಡೆಯಬೇಕು. ಇಲ್ಲವಾದಲ್ಲಿ ಭಗವಾನ್ ಅವರ ಮನೆಗೆ ಮುತ್ತಿಗೆ ಹಾಕುವುದಾಗಿ ಒಕ್ಕಲಿಗರ ಮಹಿಳಾ ಮುಖಂಡರಾದ ಹೇಮಾ ನಂದೀಶ್ ತಿಳಿಸಿದರು.

ಈ ಕುರಿತು ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಒಕ್ಕಲಿಗ ಸಮಾಜ ಕೃಷಿಯನ್ನು ನಂಬಿ ದೇಶಕ್ಕೆ ಅನ್ನ ನೀಡುವ ಸಮಾಜವಾಗಿದೆ. ಇಂತಹ ಸಮಾಜದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವ ಮೂಲಕ ಕೆ.ಎಸ್.ಭಗವಾನ್ ಅವರು ಉದ್ಧಟತನದ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆ ಸಮಾಜದ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿದೆ. ಪದೇ ಪದೆ ಹಿಂದೂ ಸಮಾಜ, ಹಿಂದೂ ದೇವರುಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವ ಮೂಲಕ ವಿವಾದಗಳನ್ನು ಸೃಷ್ಟಿಸಿ ಪ್ರಚಾರದಲ್ಲಿರಲು ಬಯಸುವ ಅವರ ನಡೆ ಸಮಾಜದ ಶಾಂತಿಯನ್ನು ಕದಡುತ್ತದೆ. ಹಾಗಾಗಿ ಈ ಬಗ್ಗೆ ಸರ್ಕಾರ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕು ಎಂದು ಒಕ್ಕಲಿಗರ ಮಹಿಳಾ ಮುಖಂಡರಾದ ಹೇಮಾ ನಂದೀಶ್ ಒತ್ತಾಯಿಸಿದರು.



ಮೈಸೂರು ಕ್ಯಾತಮಾರನಹಳ್ಳಿಯ ಹುಲಿಯಮ್ಮ ದೇವಸ್ಥಾನದ ವತಿಯಿಂದ ವೀರ ಮದಕರಿ ನಾಯಕ ಜಯಂತಿ ಆಚರಿಸಲಾಯಿತು. ಈ ವೇಳೆ ಮೈಸೂರು ನಾಯಕ ಸಂಘದ ಕಾರ್ಯದರ್ಶಿ ಯೋಗೇಶ್, ಮಂಜುನಾಥ್, ಪ್ರದೀಪ್, ಗ್ರಾಮದ ಮುಖಂಡರು, ನಿವಾಸಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.10.2023 ಮಂಗಳವಾರ, ಮಳೆ ನಕ್ಷತ್ರ: ಚಿತ್ತ, 11.10.2023ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ ವಿಶಾಖ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಖ್ಯ ಅತಿಥಿಗಳು: ಜಿಪಂ ಉಪ ಕಾರ್ಯದರ್ಶಿ ಶ್ರೀಮತಿ ಸರಸ್ವತಿ, ಎಂ.ಜಿ.ಇ.ಪ್ರಕಾಶ್, ಶ್ರೀಮತಿ ಎಂ.ಎಸ್.ಲಿಂಗಮ್ಮಣ್ಣಿ ನಂಜುಂಡಯ್ಯ, ಡಾ.ಎ.ಪುಷ್ಪ ಅಯ್ಯಂಗಾರ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗ :** ಚಾಮರಾಜನಗರ ಲೋಕಸಭಾ ಚುನಾವಣೆ ನಿಮಿತ್ತ ಕಾರ್ಯಕರ್ತರ ಸಭೆ, ಅಧ್ಯಕ್ಷತೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಕೆಪಿಸಿಸಿ ಪರಿಶಿಷ್ಟ ಜಾತಿವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ, ಎಸ್‌ಸಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನ, ಮೈನಾರಿಟಿ ವಿಭಾಗದ ರಾಜ್ಯಾಧ್ಯಕ್ಷ ಕೆ.ರಾಜು, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಕೂಷ್ಮಾಂಡದೇವಿ, ಶ್ರೀ ವಿದ್ಯಾ ಶಬರಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30 ರಿಂದ ಶ್ರೀ ನವದುರ್ಗಾ ಹೋಮ ಮತ್ತು ಶ್ರೀ ಮಹಾ ಪ್ರತ್ಯಂಗೀರಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ಕರ್ನಾಟಕ ಸಂಗೀತ ಗಾಯನ: ವಿದ್ವಾನ್ ಜೆ.ಬಿ. ಶೃತಿ ಸಾಗರ್ ಅವರಿಂದ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ದುರ್ಗಿಲಕ್ಷ್ಮಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ– ಮಹಾಮಂಗಳಾರತಿ, ಡೋಲೋತ್ಸವ, ಸುನಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಆಶೀರ್ವಾದ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಸುಬ್ರಹ್ಮಣ್ಯ ಹೋಮ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ತದಿಗೆ ಧ್ವಜಾರೋಹಣ, ಮಂಟಪೋತ್ಸವ, ಸಂಜೆ ಭೇರಿ ತಾಡನ, ಹಂಸವಾಹನೋತ್ಸವ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಪತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ಶ್ರೀ ಗಾಯಿತ್ರಿ ಹೋಮ, ಕೌಮಾರಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಮಯೂರವಾಹನಲಂಕಾರ, ಸಂಜೆ 5 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ :** ನವರಾತ್ರಿ ಪ್ರಯುಕ್ತ ವಿದ್ವಾನ್ ಎಸ್.ಎಂ. ಪ್ರಣವಾಚಾರ್ಯ ಅವರಿಂದ 'ಶ್ರೀನಿವಾಸ ಕಲ್ಯಾಣ ಪ್ರವಚನ' ಸ್ಥಳ: ಶ್ರೀ ವ್ಯಾಸರಾಜ ಮಠ ಸೋಸಲೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ.

■ **ರಂಗಾಯಣ :** ನವರಾತ್ರಿ ರಂಗೋತ್ಸವ, ಹಾರ್ಡ್ವಿಕ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಕಿಂದರಿ ಜೋಗಿ ನಾಟಕ ಪ್ರದರ್ಶನ, ರಚನೆ : ಕುವೆಂಪು, ನಿರ್ದೇಶನ : ನೂರ್ ಅಹಮ್ಮದ್ ಶೇಖ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಸಂಕಲನ–ಎಸ್.ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ–ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀಧರ ಹೆಗಡೆ ಭದ್ರನ್, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 9.05 ಮೈಸೂರು ಮಹಲುಗಳು–ರೂಪಕ ಸರಣಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ–"ಮಧು ಕೈಟಭ ಸಂಹಾರ", ನಡೆಸಿಕೊಡುತ್ತಾರೆ ವಿ.ಮಾಲಿನಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ಕನಕ–ಜಾನಕಿ, ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ–ದಿವಾಕರ ಹೆಗಡೆ, 12.45 ವೃದ್ಧಾಶ್ರಮಗಳ ಅಗತ್ಯ ಹಾಗೂ ನಿರ್ವಹಣೆಯ ಕೌಶಲ–ಸರಸ್ವತಿ ಹಲಸಗಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ರಶ್ಮಿರಾವ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರ ಗೀತೆಗಳ ಕಾರ್ಯಕ್ರಮ, 3.00 ಡಾ.ಪದ್ಮಾಮೂರ್ತಿ ಅವರ ನಿರ್ದೇಶನದಲ್ಲಿ ದೇವಿ ಕೃತಿಗಳು, 4.00 ಕಥಾಕಾಲಕ್ಷೇಪ "ಭಕ್ತ ಸುಧಾಮ"–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50ಕೃಷಿರಂಗ–ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಕುರಿತು ಶಾಂತವೀರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಕೇಶವಮೂರ್ತಿ, 9.30 ಅದಿತಿ ಕೃಷ್ಣ ಪ್ರಕಾಶ್–ವಯೋಲಿನ್, 10.00 ಗಮಕ ವ್ಯಾಖ್ಯಾನ–ವಾಚನ–ಆರ್.ಎಸ್. ಅನ್ನಪೂರ್ಣ, ವ್ಯಾಖ್ಯಾನ–ಎ.ಎಸ್.ನಾಗರಾಜ್, 10.30 ಸವಿನೆನಪು

ಮೈಸೂರು ದಸರಾ ಕಾರ್ಯಕ್ರಮ

■ **ಅರಮನೆ ಆವರಣ**



ಸಂಜೆ 5 ರಿಂದ ಕೊಡಗಿನ ಸುನಿತ ಮತ್ತು ತಂಡ, ಗಿರಿಜನ ಸಮಗ್ರ ಅಭಿವೃದ್ಧಿ ಕಲಾ ಸಂಸ್ಥೆಯಿಂದ ಗಿರಿಜನ–ಬುಡಕಟ್ಟು ನೃತ್ಯ, ಸಂಜೆ 5.30ರಿಂದ ಉಸ್ತಾದ್ ರಫೀಕ್ ಖಾನ್–ವಿದ್ವಾನ್ ಅಂಕುಶ್ ಎನ್. ನಾಯಕ್ ಅವರಿಂದ ವಾದ್ಯ ಸಂಗೀತ–ಸಿತಾರ್ ಜುಗಲ್ ಬಂದಿ, ಸಂಜೆ 6.30ರಿಂದ ಚಿಂತನ್ ವಿಕಾಸ್ ಫೀಟ್ ಪ್ರಾಜೆಕ್ಟ್ ಎಕ್ಸಡಸ್ ಅವರಿಂದ ನಾನಾರೆಂಬುದು ನಾನಲ್ಲ (ಕನ್ನಡ ಮತ್ತು ಕಡಲಾಚೆ ಸಂಗೀತ), ಸಂಜೆ 7.30ರಿಂದ ಭೂಷಣ್ಸ್ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ಬದ್ರಿ ದಿವ್ಯಭೂಷಣ್ ಅವರಿಂದ ಭರತನಾಟ್ಯ–ಶ್ರೀ ರಾಮಾನುಜ ಧನುರ್ದಾಸ ವೈಭವಂ, ರಾ. 8.15 ರಿಂದ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂ–ವಿದ್ವಾನ್ ರಾಕೇಶ್ ಚೌರಾಸಿಯಾ ಅವರಿಂದ ಕರ್ನಾಟಕ–ಹಿಂದೂಸ್ಥಾನಿ ಜುಗಲ್‌ಬಂದಿ ವಾದ್ಯ ಸಂಗೀತ.

■ **ಜಗನ್ಮೋಹನ ಅರಮನೆ ವೇದಿಕೆ**

ಸಂಜೆ 6 ರಿಂದ ಯಾದಗಿರಿ ಹೊನ್ನಪ್ಪ ಬಿ. ಮಾನ್ವಡೆ ಅವರಿಂದ ಶಹನಾಯಿ ವಾದನ, ಸಂಜೆ 6.45 ರಿಂದ ಬೆಂಗಳೂರು ಸಂಗೀತ ನೃತ್ಯಭಾರತಿ ಅಕಾಡೆಮಿ ಕಲಾವಿದರಿಂದ ನೃತ್ಯರೂಪಕ : ಶಂಕರಿ ಶುಭಕರಿ, ಸಂಜೆ 7.30 ರಿಂದ ಮಂಡ್ಯದ ವಿದುಷಿ ಎನ್. ಶಾರದಾ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ರಾ. 8.30 ರಿಂದ ಬೆಂಗಳೂರಿನ ಆರಾಧನಾ ಭರತನಾಟ್ಯ ಕೇಂದ್ರದ ಡಾ. ಸುಧಾ ನಾಗರಾಜ್ ಅವರಿಂದ ಭರತನಾಟ್ಯ.

■ **ಕರ್ನಾಟಕ ಕಲಾಮಂದಿರ ವೇದಿಕೆ**

ಸಂಜೆ 6ರಿಂದ 6.45ರವರೆಗೆ ಸಿದ್ಧಾರ್ಥ ಮತ್ತು ತಂಡದವರಿಂದ ವೀರಗಾಸೆ, ಮಹಾಬೋಧಿ ಶಾಲೆ ಮಕ್ಕಳಿಂದ ಲಡಾಖಿ ನೃತ್ಯ, ಅಸ್ಸಾಮಿ ನೃತ್ಯ, 6.45 ರಿಂದ ಕೊಪ್ಪಳದ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಕಲಾ ತಂಡದವರಿಂದ ಜಾನಪದ ನೃತ್ಯ, ಸಂಜೆ 7.30 ರಿಂದ ಚಿಕ್ಕಮಗಳೂರು ಮಲ್ಲಿಗೆ ಸುಧೀರ್ ಮತ್ತು ತಂಡದವರಿಂದ ಗೀತಗಾಯನ : ಅಶ್ವಥ್ ಹಾಡುಗಳು, ರಾ. 8.30 ರಿಂದ ಬೆಂಗಳೂರು ಕವಿತಾ ಮತ್ತು ತಂಡದಿಂದ ಶಾಸ್ತ್ರೀಯ ನೃತ್ಯ.

■ **ಗಾನಭಾರತಿ**

ಸಂಜೆ 6ರಿಂದ ರಾಮನಗರದ ಸಿದ್ದರಾಜು ಚೆಕ್ಕೆರೆ ಅವರಿಂದ ಕಂಸಾಳೆ, ಸಂಜೆ 6.30 ರಿಂದ ಕಮಲವ್ವ ನಾರಾಯಣ ಲಮಾಣಿ ಮತ್ತು ತಂಡದಿಂದ ಲಂಬಾಣಿ ನೃತ್ಯ, ಆರ್.ಎಸ್. ಉಜ್ಜನಕೊಪ್ಪ ಅವರಿಂದ ಸುಗಮ ಸಂಗೀತ, ಸಂಜೆ 7.30 ರಿಂದ ಮೈಸೂರಿನ ಮಹೇಶ್ ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ, ರಾ. 8 ರಿಂದ ಬೆಂಗಳೂರಿನ ಸೃಜನ ಆರ್ಟ್ ಅಕಾಡೆಮಿಯಿಂದ ಕಥಕ್ ನೃತ್ಯ.

■ **ನಾದಬ್ರಹ್ಮ ಸಂಗೀತಾ ಸಭಾ**

ಸಂಜೆ 6 ಬೆಂಗಳೂರಿನ ಶ್ರೀ ವಿನಾಯಕ ಕಲಾವೃಂದದವರಿಂದ ತಾಳವಾದ್ಯ ಜುಗಲ್‌ಬಂದಿ, ಸಂಜೆ 6.45 ರಿಂದ ಧಾರವಾಡದ ಕಲಾರ್ಪಣ ಟ್ರಸ್ಟ್ ಕಲಾವಿದರಿಂದ ನೃತ್ಯರೂಪಕ : ಕನಕ ಕಂಡ ಕೇಶವ, ಸಂಜೆ 7.30 ರಿಂದ ಬಿಜಾಪುರ ಉಮೇಶ ಪತ್ತಾರ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ರಾ. 8.30 ರಿಂದ ಬೆಂಗಳೂರಿನ ಸಂಹಿತ ಮತ್ತು ತಂಡದಿಂದ ದೇವಿ ಕೃತಿಗಳ ನೃತ್ಯರೂಪಕ.

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 6ರಿಂದ ಕೊಡಗು ಕುಡಿಯರ ಗೋಪಮ್ಮ ಅವರಿಂದ ಬುಡಕಟ್ಟು ನೃತ್ಯ, ಸಂಜೆ 6.45 ರಿಂದ ಮಂಡ್ಯದ ಅರುಣೋದಯ ಕಲಾ ತಂಡದಿಂದ ಕ್ರಾಂತಿ ಗೀತೆಗಳು, ಸಂಜೆ 7.30 ರಿಂದ ಮಂಡ್ಯದ ಕೆ.ಎಂ. ನಾಗೇಶ್ ಅವರಿಂದ ಪೂಜಾಕುಣಿತ, ರಾತ್ರಿ 8.30 ರಿಂದ ರಾಮನಗರದ ಭೈರವ ಕಲಾ ತಂಡದಿಂದ ಜನಪದ ಗಾಯನ.

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ ಬೆಂಗಳೂರು ಮೀನಾಕ್ಷಿ ಕಲಾವೃಂದದವರಿಂದ ಪೌರಾಣಿಕ ನಾಟಕ : ಕುರುಕ್ಷೇತ್ರ, ಮ. 3 ರಿಂದ ಮೈಸೂರು ಮಂಟೇಸ್ವಾಮಿ ನಾಟಕ ಮಂಡಳಿಯವರಿಂದ ನಾಟಕ : ಗಿರಿಜಾ ಕಲ್ಯಾಣ, ಸಂಜೆ 6 ರಿಂದ ಮೈಸೂರು ವೃತ್ತಿ ರಂಗ ಕಲಾವಿದರ ರಕ್ಷಣಾ ವೇದಿಕೆ ವತಿಯಿಂದ ಸಾಮಾಜಿಕ ನಾಟಕ : ಮುತ್ತಾಳ ಮಾವ.

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ ಮೈಸೂರಿನ ಕೆ. ಅನನ್ಯ ಅವರಿಂದ ಭರತನಾಟ್ಯ, ಮ. 3 ರಿಂದ ಸುತ್ತೂರು ಗುರುಶಾಂತಪ್ಪ ಶಿವರಾತ್ರೀಶ್ವರ ಕಲಾಸಂಘದಿಂದ ನಾಟಕ : ಶಿವಶರಣ ಹರಳಯ್ಯ, ಸಂಜೆ 7 ರಿಂದ ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಕಿರುನಾಟಕ.

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30 ರಿಂದ ಆರ್. ರಶ್ಮಿ ಅವರಿಂದ ಜನಪದ ಗಾಯನ, ಸಂಜೆ 6.30 ರಿಂದ ಬೆಂಗಳೂರು ಕರ್ನಾಟಕ ಮಹಿಳಾ ಯಕ್ಷಗಾನ ಕಲಾವಿದರಿಂದ ಯಕ್ಷಗಾನ, ಸಂಜೆ 7.30 ರಿಂದ ಶಿವಲಿಂಗಯ್ಯ ಗೋತಮಿ ಫೌಂಡೇಷನ್ ಕಲಾವಿದರಿಂದ ದೇವನಾಂಪ್ರಿಯ ಅಶೋಕ ಸಾಮಾಜಿಕ ನಾಟಕ.

■ **ನಟನ ರಂಗಮಂದಿರ**

ಸಂಜೆ 5ರಿಂದ ಬೆಂಗಳೂರಿನ ಡಾ.ಕೆ.ಜಿ. ಪದ್ಮಾನಂದ ಅವರಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಹೊಸಕೋಟೆ ಸಾಂಸ್ಕೃತಿಕ ವೇದಿಕೆ ವತಿಯಿಂದ ಸೂಳೆ ಸಂಕವ್ವ ನಾಟಕ ಪ್ರದರ್ಶನ, ರಚನೆ : ಮುದೇನೂರು ಸಂಗಣ್ಣ, ನಿರ್ದೇಶನ : ರಾಮಕೃಷ್ಣ ಬೆಳತ್ತೂರು.

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 6ರಿಂದ ಮೈಸೂರಿನ ನಿವೇದ ಅವರಿಂದ ಮಹಿಳಾ ನಗಾರಿ, ಸಂಜೆ 6.45ರಿಂದ ಪೂರ್ಣಿಮಾ ಅಶೋಕ್ ಅವರಿಂದ ಭರತನಾಟ್ಯ–ಸಮೂಹ ನೃತ್ಯ, ಸಂಜೆ 7.30ರಿಂದ ಕೃಷ್ಣನಾಯಕ ಮತ್ತು ತಂಡದಿಂದ ಡೊಳ್ಳು ಕುಣಿತ, ಚಿರಂಜೀವಿ ಮಧುರ ಜ್ಯೋತಿ ಕಲಾ ಸಂಘದಿಂದ ವಚನ ಗಾಯನ, ಸಂಜೆ 8.30ರಿಂದ ಮಂಡ್ಯದ ಶ್ರೀ ಗಂಗಾಪರಮೇಶ್ವರಿ ನಾಟಕ ಸಂಘದಿಂದ ರಂಗಣ್ಣನ ಮದುವೆ ನಾಟಕ ಪ್ರದರ್ಶನ.

ಮಹಿಳಾ ಮತ್ತು ಮಕ್ಕಳ ದಸರಾ–2023

■ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು:** ಮ. 2.30ರಿಂದ ಗೋಪಿ ಅವರಿಂದ ಮಿಮಿಕ್ರಿ ಕಾರ್ಯಕ್ರಮ, 3ರಿಂದ ಮ್ಯೂಸಿಕಲ್ ಚೇರ್ ಸ್ಪರ್ಧೆ, ಒನ್ ಮಿನಿಟ್ ಗೇಮ್, ಸಂಜೆ 4ರಿಂದ ಕಣ್ಣಿಗೆ ಬಟ್ಟೆ ಕಟ್ಟಿ ಬಿಂದಿ ಇಡುವುದು, 4.30ರಿಂದ ಫಾಸ್ಟ್ ವಾಕಿಂಗ್ ಸ್ಪರ್ಧೆ, ಸಂಜೆ 5ರಿಂದ ಮೈಸೂರು ಸರ್ಕಾರಿ ಬಾಲಕಿಯರ ಕಾಲೇಜು ವಿದ್ಯಾರ್ಥಿಗಳಿಂದ ಜಾನಪದ ನೃತ್ಯ, ಸಂಜೆ 6ರಿಂದ ಮೈಸೂರಿನ ಚಿನ್ಮಯ ಮಿಷನ್ ವತಿಯಿಂದ ಸುಗಮ ಸಂಗೀತ, ಸ್ಥಳ: ಜೆ.ಕೆ.ಮೈದಾನ.

ನಾಡಕುಸ್ತಿ ಪಂದ್ಯಾವಳಿ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ದಸರಾ ಮಹೋತ್ಸವ ಅಂಗವಾಗಿ ನಾಡಕುಸ್ತಿ ಪಂದ್ಯಾವಳಿ, ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಿಶೋರಿ ಮತ್ತು ದಸರಾ ಕುಮಾರ್ ಪ್ರಶಸ್ತಿಗಾಗಿ ಪಂದ್ಯಾವಳಿ, ಸ್ಥಳ: ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಬೆಳಗ್ಗೆ 8 ಗಂಟೆಯಿಂದ.

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್):** ಕನ್ನಡ ಚಿತ್ರಗಳು: ಬೆಳಗ್ಗೆ 10 ಗಂಟೆಗೆ–ನಾಗರಹಾವು, ಮಧ್ಯಾಹ್ನ 1ಕ್ಕೆ–ಕ್ರಾಂತಿ, ಸಂಜೆ 4 ಗಂಟೆಗೆ–ಕೌಸಲ್ಯ ಸುಪ್ರಜಾ ರಾಮ, ಸಂಜೆ 7ಕ್ಕೆ–ಕ್ರಾಂತಿವೀರ.

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ಕಾಮಧೇನು, 1.15ಕ್ಕೆ ಸಿಫಂಗ್ ಸಂಜೆ 4.15ಕ್ಕೆ ಯದ್ಭಾವಂ ತದ್ಭವತಿ, ಸಂಜೆ 7.15ಕ್ಕೆ ಕನಕ ಮಾರ್ಗ.

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ರೆಡ್ ಬಿಯರ್ಡ್, ಮಧ್ಯಾಹ್ನ 1.30ಕ್ಕೆ ಲವ್ ಲೈಫ್, ಸಂಜೆ 4.30ಕ್ಕೆ ಲೆಸ್ ಮಿಸರಬಲ್, ಸಂಜೆ 7.30ಕ್ಕೆ ಚಿಲ್ಡ್ರನ್ ಆಫ್ ಹೆವನ್.

ಡಿಆರ್‌ಸಿ (ಬಿ.ಎಂ.ಹ್ಯಾಬಿಟೆಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ–ಬ್ಯಾಂಗ್, ಮಧ್ಯಾಹ್ನ 1 ಗಂಟೆಗೆ ದೂರದರ್ಶನ, ಸಂಜೆ 4 ಗಂಟೆಗೆ ಟ್ರಿಬಲ್ ರೈಡಿಂಗ್, ಸಂಜೆ 7 ಗಂಟೆಗೆ ರಶೊಮನ್

■ **ಕಿರು ಚಿತ್ರಗಳು:** ಸಂಜೆ 4.15ಕ್ಕೆ ಗ್ಲಾಸ್ ಉಚಿತ ಕ್ಯಾಶ್ ಖಚಿತ, ದಿ ಲಾಸ್ಟ್ ಕನ್ನಡಿಗ, ಜಲಜ, ಸಂಜೆ 7.15ಕ್ಕೆ ಎಚ್ಚರಿಕೆ, ಪರ್ಸ್ಪೆಕ್ಟಿವ್, ಅನ್ನೋನ್.

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯಮಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

■ **ಕರ್ನಾಟಕ ಕಲಾಮಂದಿರದ ಹೊರ ಆವರಣ :** ಲಲಿತಕಲೆ ಮತ್ತು ಕರಕುಶಲ ಹಾಗೂ ಮಕ್ಕಳು ಚಿತ್ರ ಬಿಡಿಸುವ ಸ್ಪರ್ಧೆ, ಉದ್ಘಾಟನೆ : ಶಾಸಕ ತನ್ವೀರ್ ಸೇಠ್, ಬೆಳಗ್ಗೆ 11ಕ್ಕೆ

■ **ಕರ್ನಾಟಕ ಕಲಾಮಂದಿರದ ಒಳ ಆವರಣ :** ಕಾವ್ಯ ಸಂಭ್ರಮ, ಹಾಸ್ಯ–ಚುಟುಕು–ಜಾನಪದ, ಉದ್ಘಾಟನೆ: ಕವಿ ಜಯಂತ್ ಕಾಯ್ಕಿಣಿ, ಬೆಳಗ್ಗೆ 11.30ಕ್ಕೆ.

ಗಣಪತಿ ಸಚ್ಚಿದಾನಂದ ಶ್ರೀಗಳು ಸೇರಿ ಆರು ಮಹನೀಯರಿಗೆ ಸಂಗೀತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಕಟ

● ನಾಳೆ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಎರಡೂ ಅವಧಿಯ ಘಟಿಕೋತ್ಸವ ಸಮಾರಂಭ ● 6 ಮಂದಿಗೆ ಡಿ.ಲಿಟ್ ಪದವಿ; 83 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಮೈಸೂರಿನ ಲಕ್ಷ್ಮೀಪುರಂನ ಸಂಗೀತ ವಿವಿ ಆವರಣದಲ್ಲಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರಭಾರ ಕುಲಸಚಿವರಾದ ವಿ.ಆರ್.ಶೈಲಜಾ ಹಾಗೂ ಪ್ರೊ.ಕೆ.ಎಂ.ಮಹದೇವನ್ ಇದ್ದರು.



ಗಣಪತಿ ಶ್ರೀ | ಡಿ.ಶಶಿಕಲಾ | ವಿನಾಯಕ ತೊರವಿ | ಮಧುಸೂದನ್ ಸಾಯಿ | ಶ್ರೀಪಾದ ಹೆಗಡೆ ಕಂಪ್ಲಿ | ಪ್ರೊ.ಎಸ್.ಸಿ.ಶರ್ಮಾ

ಮೈಸೂರು, ಅ.16 (ಎಸ್‌ಬಿಡಿ)– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ(ಸಂಗೀತ ವಿವಿ) ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸೇರಿದಂತೆ ಒಟ್ಟು ಆರು ಮಂದಿ ಸಂಗೀತ ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರಕಟಿಸಿದೆ.

ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರ ಅಧ್ಯಕ್ಷತೆಯಲ್ಲಿ ಮಾನಸ ಗಂಗೋತ್ರಿ ವಿಜ್ಞಾನಭವನದಲ್ಲಿ ಅ.18 ರಂದು ಸಂಜೆ 4 ಗಂಟೆಗೆ ನಡೆಯಲಿರುವ ಸಂಗೀತ ವಿವಿಯ ಐದು ಮತ್ತು ಆರನೇ ಘಟಿಕೋತ್ಸವ ಸಮಾರಂಭದಲ್ಲಿ ಆರು ಮಂದಿಗೆ ಗೌರವ ಡಾಕ್ಟರೇಟ್, ಆರು ಮಂದಿಗೆ ಡಿ.ಲಿಟ್ ಪದವಿ ಹಾಗೂ ಒಟ್ಟು 83 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದು, ಸಹ ಕುಲಾಧಿಪತಿಗಳೂ ಆದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು

> “ಸರ್ದಾರ್ ವಲ್ಲಭಬಾಯ್ ಪಟೇಲ್‌ನಗರದ ಬಳಿ ಆರೂವರೆ ಎಕರೆ ಜಾಗದಲ್ಲಿ ವಿವಿಯ ನೂತನ ಕಟ್ಟಡ ನಿರ್ಮಾಣ ಪ್ರಕ್ರಿಯೆ ನಡೆದಿದ್ದು, ಸದ್ಯ ಟೆಂಡರ್ ಹಂತದಲ್ಲಿದೆ. ಗುರುಕುಲ ಮಾದರಿಯ ಕೊಠಡಿಗಳ ನಿರ್ಮಾಣ ಮಾಡುವ ಯೋಜನೆ ಇದೆ. ನೂತನ ಕಟ್ಟಡವಾದ ನಂತರ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುವ ವಿಶ್ವಾಸವಿದೆ. ಬೇಡಿಕೆ ಇರುವುದರಿಂದ ವಿವಿಧ ವಿಷಯಗಳ ಅಲ್ಪಾವಧಿ ಆನ್‌ಲೈನ್ ಕೋರ್ಸ್ ಆರಂಭಿಸಲು ಸಿದ್ಧತೆ ನಡೆದಿದೆ.
>
> –ಪ್ರೊ.ನಾಗೇಶ್ ವಿ.ಬೆಟ್ಟಕೋಟೆ
> ಸಂಗೀತ ವಿವಿ ಕುಲಪತಿ

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ವಿವಿ ಆವರಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗೌರವ ಡಾಕ್ಟರೇಟ್‌ಗೆ ಭಾಜನ: ಐದನೇ ಘಟಿಕೋತ್ಸವ(2019–20)ದ ಅಂಗವಾಗಿ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಸುದೀರ್ಘ 40 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ದೃಷ್ಟಿ ವಿಶೇಷಚೇತನ, ವಿದುಷಿ ಡಿ. ಶಶಿಕಲಾ, ಹಿಂದೂಸ್ತಾನಿ ಸಂಗೀತ ಸಾಧಕ ಪಂಡಿತ್ ವಿನಾಯಕ ತೊರವಿ ಹಾಗೂ ಸಂಗೀತ, ಶಿಕ್ಷಣ ಹಾಗೂ ಸಂಶೋಧನೆಯಲ್ಲಿ ಅವಿರತ ಸೇವೆ ಸಲ್ಲಿಸುತ್ತಿರುವ ಮಧುಸೂದನ್ ಸಾಯಿ, ಆರನೇ ಘಟಿಕೋತ್ಸವ(2020–21)ದ ಅಂಗವಾಗಿ ಸಂಗೀತ ಸಂಶೋಧನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಸಾಧಕ ಪಂಡಿತ್ ಶ್ರೀಪಾದ ಹೆಗಡೆ ಕಂಪ್ಲಿ ಹಾಗೂ ಕರ್ನಾಟಕ ಸಂಗೀತ ಕ್ಷೇತ್ರದ ಸಾಧಕರಾದ ಪ್ರೊ.ಎಸ್.ಸಿ.ಶರ್ಮಾ ಅವರಿಗೆ ಗೌರವ ಡಾಕ್ಟರೇಟ್ ನೀಡಿ, ಗೌರವಿಸಲಾಗುವುದು ಎಂದರು.

ಆರು ಮಂದಿಗೆ ಡಿ.ಲಿಟ್: 'ದೇಸಿ ಸಂಗೀತ ಐದನಿ–ಸರಿಗಮಪದನಿ–ಆರಂಭ' ಅಧ್ಯಯನಕ್ಕೆ ಹಂಸಲೇಖ, 'ಕರ್ನಾಟಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಡಾ.ರಾಜ್‌ಕುಮಾರ್ ಅವರ ಪಾತ್ರ' ಅಧ್ಯಯನಕ್ಕೆ ಎಂ.ಮಂಜುನಾಥ, 'ಕೊನಾರ್ಕ್ ದೇವಾಲಯದ ವಾಸ್ತುಶಿಲ್ಪದಲ್ಲಿನ ನೃತ್ಯ ಭಂಗಿ' ಅಧ್ಯಯನಕ್ಕೆ ಎ.ಆರ್.ಶಾಲಿನಿ, 'ದಕ್ಷಿಣ ಭಾರತದ ಕರ್ನಾಟಕ ಸಂಗೀತದಲ್ಲಿ ತಂತಿ ವಾದ್ಯಗಳು' ಅಧ್ಯಯನಕ್ಕೆ ಎಸ್.ಶಾಲಿನಿ, 'ರಂಗಭೂಮಿ– ಒಂದು ವೃತ್ತಿಪರ ಅಧ್ಯಯನ'ಕ್ಕೆ ಕೆ.ಎನ್.ಹಿರಣಯ್ಯ, 'ಯೋಗಾ ಮತ್ತು ಪ್ರದರ್ಶನ ಕಲೆಗಳ ಶಿಕ್ಷಣ ಮತ್ತು ಮಾನಸಿಕ ಬದಲಾವಣೆಯ ಮೇಲಿನ ಪರಿಣಾಮ' ಅಧ್ಯಯನಕ್ಕೆ ಡಾ.ಎ.ಲೋಕೇಶ್ ಅವರಿಗೆ ಡಿ.ಲಿಟ್ ಪದವಿ ನೀಡಲಾಗುತ್ತಿದೆ ಎಂದರು.

83 ವಿದ್ಯಾರ್ಥಿಗಳಿಗೆ ಪದವಿ: 2019–20ನೇ ಸಾಲಿನ ಕರ್ನಾಟಕ ಸಂಗೀತ ಗಾಯನ ವಿಭಾಗದ 8 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಹಾಗೂ ಇಬ್ಬರಿಗೆ ಸ್ನಾತಕ, ಹಿಂದೂಸ್ತಾನಿ ಸಂಗೀತ ಗಾಯನ ವಿಭಾಗದ ನಾಲ್ವರಿಗೆ ಸ್ನಾತಕೋತ್ತರ ಹಾಗೂ ಮೂವರಿಗೆ ಸ್ನಾತಕ, ತಬಲಾ ವಿಭಾಗದ ನಾಲ್ವರಿಗೆ ಸ್ನಾತಕೋತ್ತರ, ಭರತನಾಟ್ಯ ವಿಭಾಗದ 11 ಮಂದಿಗೆ ಸ್ನಾತಕೋತ್ತರ ಹಾಗೂ ಒಬ್ಬರಿಗೆ ಸ್ನಾತಕ, ನಾಟಕ ವಿಭಾಗದ ಇಬ್ಬರಿಗೆ ಸ್ನಾತಕೋತ್ತರ ಹಾಗೂ ಮೂವರಿಗೆ ಸ್ನಾತಕ ಪದವಿ. ಹಾಗೆಯೇ 2020–21ನೇ ಸಾಲಿನ ಕರ್ನಾಟಕ ಸಂಗೀತ ಗಾಯನ ವಿಭಾಗದ 9 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ, ನಾಲ್ವರಿಗೆ ಸ್ನಾತಕ, ಹಿಂದೂಸ್ತಾನಿ ಸಂಗೀತ ಗಾಯನ ವಿಭಾಗದ ಐವರಿಗೆ ಸ್ನಾತಕೋತ್ತರ ಹಾಗೂ ಐವರಿಗೆ ಸ್ನಾತಕ, ತಬಲಾ ವಿಭಾಗದ ಇಬ್ಬರಿಗೆ ಸ್ನಾತಕೋತ್ತರ ಹಾಗೂ ಇಬ್ಬರಿಗೆ ಸ್ನಾತಕ, ಭರತನಾಟ್ಯ ವಿಭಾಗದ ಎಂಟು ವಿದ್ಯಾರ್ಥಿನಿಯರಿಗೆ ಸ್ನಾತಕೋತ್ತರ ಹಾಗೂ ಆರು ಮಂದಿಗೆ ಸ್ನಾತಕ, ನಾಟಕ ವಿಭಾಗದ ಮೂವರಿಗೆ ಸ್ನಾತಕೋತ್ತರ ಹಾಗೂ ಒಬ್ಬರಿಗೆ ಸ್ನಾತಕ ಸೇರಿದಂತೆ ಒಟ್ಟು 83 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದರು.

ಸಂಗೀತ ವಿವಿ ಪ್ರಭಾರ ಕುಲಸಚಿವರಾದ ವಿ.ಆರ್.ಶೈಲಜಾ ಹಾಗೂ ಪ್ರೊ.ಕೆ.ಎಂ.ಮಹದೇವನ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಚಿನ್ನದ ಪದಕ ಗಳಿಸಿದವರು...

ಕರ್ನಾಟಕ ಸಂಗೀತ ಗಾಯನ ವಿಭಾಗದ 2020–21ನೇ ಸಾಲಿನ ಸ್ನಾತಕೋತ್ತರ (ಎಂಪಿಎ) ವಿದ್ಯಾರ್ಥಿ ಶ್ರೀಷಾ ಜಿ.ಭಟ್ 7 ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ವಿ.ಸ್ನೇಹಾ ಮೂರು, ಕಿರಣ್ ಯಾವಗಲ್ ಹಾಗೂ ಚಿನ್ಮಯಾ ಶಂಕರ್ ಮಹಾಲಿಂಗಯ್ಯ ಮಠದ್ ತಲಾ ಎರಡು, ಎನ್.ದಿವ್ಯಾ, ಕೆ.ಎ.ಮೌಲ್ಯ, ಎಂ.ಭಾರ್ಗವಿ ತಲಾ ಒಂದು, ಸ್ನಾತಕ(ಬಿಪಿಎ) ವಿಭಾಗದಲ್ಲಿ ಸಿಂಧು ವಿ.ಆಚಾರ್ಯ ಮೂರು, ಸುವರ್ಣ ನಾಯಕ್ ಎರಡು ಹಾಗೂ ದರ್ಶನ್ ಎಂ.ಪ್ರಸಾದ್ ಒಂದು ಚಿನ್ನದ ಪದಕ ಪಡೆದಿದ್ದಾರೆ. 2019–20ನೇ ಸಾಲಿನ ಸ್ನಾತಕೋತ್ತರ(ಎಂಪಿಎ) ವಿಭಾಗದಲ್ಲಿ ದಿವ್ಯಾ ಕೇಶವನ್ ಹಾಗೂ ವಿಘ್ನೇಶ್ ದಾಮೋದರ್ ಭಾಗವತ್ ತಲಾ ನಾಲ್ಕು, ಎಸ್.ವಿ. ಕಾರ್ತಿಕ್ ಹಾಗೂ ಎಸ್.ನೇತ್ರ ತಲಾ ಎರಡು, ಎಸ್.ರಶ್ಮಿ, ಎಂ.ಎಸ್.ಸಂತೋಷ್ ತಲಾ ಒಂದು, ಸ್ನಾತಕ ವಿಭಾಗದ ಆರ್.ಸಿ.ಲಕ್ಷ್ಮೀ ಎರಡು, ಬಿ.ಜೆ.ಸುಮಿತ್ರ ಹಾಗೂ ಡಿ.ಎಂ.ದಾಕ್ಷಾಯಿನಿ ತಲಾ ಒಂದು ಪದಕ ಗಳಿಸಿದ್ದಾರೆ.

ಮೈಸೂರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಟೆಂಪಲ್ ರನ್



ಮೈಸೂರು,ಅ.16(ಬಿಎಲ್‌ಯು)–ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಇಂದು ಪತ್ನಿ ಸಮೇತ ಮೈಸೂರಿನಲ್ಲಿ ಟೆಂಪಲ್ ರನ್ ಮಾಡಿದರು.

ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದ ಕುಮಾರಸ್ವಾಮಿ ಅವರು ಸೋಮವಾರ ಬೆಳಗ್ಗೆ ದಕ್ಷಿಣ ಕಾಶಿ ಖ್ಯಾತಿಯ ನಂಜನಗೂಡು ನಂಜುಂಡೇಶ್ವರ ದೇವಸ್ಥಾನಕ್ಕೆ ಪತ್ನಿ ಅನಿತಾ ಕುಮಾರಸ್ವಾಮಿ ಸಮೇತ ಭೇಟಿ ನೀಡಿದ್ದರು.

ಈ ವೇಳೆ ಕುಮಾರಸ್ವಾಮಿ ದಂಪತಿ, ಶ್ರೀಕಂಠೇಶ್ವರ, ಚಂಡಿಕೇಶ್ವರ, ಗಣಪತಿ, ಸುಬ್ರಹ್ಮಣ್ಯ, ಪಾರ್ವತಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನದಲ್ಲಿ ಅನಿತಾ ಕುಮಾರಸ್ವಾಮಿಗೆ ಬೆಲ್ಲದ ತುಲಾಭಾರ ಸೇವೆ ಮಾಡಲಾಯಿತು. ಇದೇ ವೇಳೆ ಮಾತನಾಡಿದ ಕುಮಾರಸ್ವಾಮಿ, ನಾಡಿಗೆ ಒಳ್ಳೆಯ ದಿನಗಳನ್ನು ಕೊಡುವಂತೆ ನಂಜುಂಡೇಶ್ವರನನ್ನು ಬೇಡಿದ್ದೇನೆ ಎಂದು ತಿಳಿಸಿದರು.

ನಂಜನಗೂಡು ನಂತರ ಕುಮಾರಸ್ವಾಮಿ ದಂಪತಿ, ಚಾಮುಂಡಿಬೆಟ್ಟಕ್ಕೂ ಕೂಡ ಭೇಟಿ ನೀಡಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಶರನ್ನವ ರಾತ್ರಿ ವೇಳೆ ಕುಮಾರಸ್ವಾಮಿ ದಂಪತಿ ಪ್ರತಿ ವರ್ಷದಂತೆ ಈ ಬಾರಿ ಕೂಡ ನಂಜನಗೂಡು ಹಾಗೂ ಚಾಮುಂಡಿ ಬೆಟ್ಟದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಮೈಸೂರು ದಸರಾ ನಾಡಕುಸ್ತಿ ಪಂದ್ಯಾವಳಿ-2023

ಮದಗಜಗಳಂತೆ ಕಾದಾಡಿ; ಬಲಾಬಲ ಪ್ರದರ್ಶಿಸಿ, ದೂಳೆಬ್ಬಿಸಿದ ಜಗಮಲ್ಲರು!





ಮೈಸೂರು, ಅ.16(ಎಂಕೆ)– ಗೆಲುವಿನ ಸೆಣಸಾಟದಲ್ಲಿ ಮಟ್ಟಿಯಲ್ಲಿ ಮಿಂದೆದ್ದ ಕುಸ್ತಿ ಪಟುಗಳು... ಸಾಹಸದ ಜೊತೆಗೆ ಬಲಾಬಲ ಪ್ರದರ್ಶನ ತೋರಿದ ಪೈಲ್ವಾನರ ರೋಚಕ ಕಾಳಗ ಕಂಡು ಸಂಭ್ರಮಿಸಿದ ಕುಸ್ತಿ ಪ್ರೇಮಿಗಳು...!

ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಸರಾ ನಾಡಕುಸ್ತಿ ಪಂದ್ಯಾವಳಿಯ 2ನೇ ದಿನ ನಡೆದ 40 ಜೋಡಿ ಕುಸ್ತಿ ಪಂದ್ಯಗಳಲ್ಲಿ 10 ಪಂದ್ಯಗಳು ಸಮಬಲ ಕಂಡರೆ, 6 ಪಂದ್ಯಗಳಲ್ಲಿ ಎದುರಾಳಿ ಗೈರುಹಿನ್ನೆಲೆ ಹಾಜರಿದ್ದವರನ್ನೇ ವಿಜಯಶಾಲಿ ಎಂದು ಘೋಷಣೆ ಮಾಡಲಾಯಿತು.

ಉಳಿದ 24 ಪಂದ್ಯಗಳಲ್ಲಿ ಗೆಲುವಿನ ಪ್ರಬಲ ಪೈಪೋಟಿ ನಡೆಸಿದ ಪೈಲ್ವಾನರು ಎದುರಾಳಿಗೆ ಮಣ್ಣು ಮುಕ್ಕಿಸಿ ಗೆಲುವಿನ ನಗೆ ಬೀರಿದರು. ಕ್ಯಾತಮಾರನಹಳ್ಳಿ ಪೈ.ರಾಹುಲ್ ವಿರುದ್ಧ ಬನ್ನೂರು ಪೈ.ಚಂದ್ರಶೇಖರ್, ಕ್ಯಾತಮಾರನಹಳ್ಳಿ ಪೈ. ಮನೋಜ್ ವಿರುದ್ಧ ಕಾಳಯ್ಯ ಗರಡಿ ಪೈ.ರೋಹಿತ್, ಟಿ.ನರಸೀಪುರ ಪೈ.ನಯನ್ ಕ್ರಾಂತಿ ವಿರುದ್ಧ ಬನ್ನೂರು ಪೈ.ವರುಣ್, ಹುಣಸೂರು ಪೈ.ಚೇತನ್ ವಿರುದ್ಧ ನಗುವಿನಹಳ್ಳಿ ಪೈ.ತಿಲಕ್‌ಗೌಡ, ಮಂಡಿ ಮೊಹಲ್ಲಾ ಪೈ.ಯಕ್ಷಿತ್‌ಗೌಡ ವಿರುದ್ಧ ರಮ್ಮನಹಳ್ಳಿ ಪೈ.ಚಂದು, ಚಾಮುಂಡಿ ವಿಹಾರ ಕ್ರೀಡಾಂಗಣದ ಪೈ.ಹಷಿತ್‌ಗೌಡ ವಿರುದ್ಧ ಪೈ.ಮಹದೇವಸ್ವಾಮಿ, ಪಾಂಡವಪುರ ಪೈ.ನಿತಿನ್‌ಗೌಡ ವಿರುದ್ಧ ಪಡುವಾರಹಳ್ಳಿ ಪೈ.ಮೋಹಿತ್, ನಜರ್‌ಬಾದ್ ಪೈ.ಸೂರ್ಯ ವಿರುದ್ಧ ಇಷ್ಕಿಯಾನ್ ಗರಡಿ ಪೈ.ಮೊಹಮ್ಮದ್, ಮಳವಳ್ಳಿ ಪೈ.ವೇಣುಗೋಪಾಲ್ ವಿರುದ್ಧ ಗೊಳೂರು ಪೈ. ಯಶ್ವಂತ್, ರಮ್ಮನಹಳ್ಳಿ ಪೈ.ಸುಭಾಷ್ ವಿರುದ್ಧ ಇಷ್ಕಿಯಾನ್ ಗರಡಿ ಪೈ.ಮೊಹಮ್ಮದ್ ಕೌನೈನ್ ಸುಲ್ತಾನ್, ಕ್ಯಾತಮಾರನಹಳ್ಳಿ ಪೈ. ರಮೇಶ್ ವಿರುದ್ಧ ಕಳಸ್ತವಾಡಿ ಪೈ.ಹರೀಶ್‌ಗೌಡ, ನಗರ್ಲೆ ಗರಡಿ ಪೈ. ಭುವನ್ ನಾಯಕ್ ವಿರುದ್ಧ ಬನ್ನೂರು ಪೈ. ಅರ್ಜುನ್‌ಗೌಡ, ಬೆಳಗೊಳ ಪೈ. ಗೌತಮ್ ವಿರುದ್ಧ ಕಳಲೆ ಪೈ. ಮಾದೇಶ್ ಗೆಲುವು ಪಡೆದರು.

ಹಾಗೆಯೇ ಮೇಳಾಪುರ ಪೈ.ನಿಖಿಲ್ ವಿರುದ್ಧ ಎಸ್.ಚೆನ್ನಯ್ಯ ಕುಸ್ತಿ ಅಖಾಡದ ಪೈ.ವಿಶ್ರುತ್, ಕೈಲಾಶ್‌ಪುರಂ ಪೈ ಮೋಷೇಕ್ ವಿರುದ್ಧ ಮೆಲ್ಲಹಳ್ಳಿ ಪೈ.ಅನಿಲ್ ಕುಮಾರ್, ಇಟ್ಟಿಗೆಗೂಡು ಪೈ.ನಿತನ್ ವಿರುದ್ಧ ಲಾಲಾಮಿಯಾ ಗರಡಿ ಪೈ.ಮೆಹಬೂಬ್ ಖಾನ್, ಬೊಕ್ಕಹಳ್ಳಿ ಪೈ.ಹೇಮಂತ್ ನಾಯಕ್ ವಿರುದ್ಧ ವೀರನಗೆರೆ ಪೈ.ಭುವನ್, ಫಕೀರ್ ಅಹಮದ್ ಸಾಹೇಬರ ಗರಡಿ ಪೈ.ರಾಜು ವಿರುದ್ಧ ನಗುವಿನಹಳ್ಳಿ ಪೈ.ಮೋಹಿತ್, ಮಂಡ್ಯ ಪೈ.ನಿಖಿಲ್ ವರ್ಧನ್ ವಿರುದ್ಧ ಇಷ್ಕಿಯಾನ್ ಗರಡಿ ಪೈ.ಮೊಹಮ್ಮದ್ ಅಜಾನ್‌ಖಾನ್, ಅಂಜುಮಾನ್ ಗರಡಿ ಪೈ.ಮೊಹಮ್ಮದ್ ಅಯಾನ್ ವಿರುದ್ಧ ಮಂಡ್ಯ ಪೈ.ಹೃಷಿಕೇಶ್, ಬನ್ನೂರು ಪೈ.ವಿರುದ್ಧ ಕಳಲೆ ಪೈ.ಮಹದೇವಸ್ವಾಮಿ, ಬೆಳಗಾಂ ಪೈ.ಹನುಮಂತು ವಿರುದ್ಧ ಇಂಗಳಿಗೆ ಪೈ.ಮುಬಾರಕ್, ಬೆಳಗಾಂ ಪೈ. ರೋಹಿತ್ ಪಾಟೀಲ್ ವಿರುದ್ಧ ಭೂತಪ್ಪನವರ ಗರಡಿ ಪೈ.ದೀಕ್ಷಿತ್ ಹಾಗೂ ಕಳಲೆ ಪೈ.ಮಾಣಸ ವಿರುದ್ಧ ಚಾಮುಂಡಿವಿಹಾರ ಕ್ರೀಡಾಂಗಣದ ಪೈ.ರುಷಿ ವಿ.ಕುಮಾರ್ ಜಯ ಸಾಧಿಸಿದರು.

ಉತ್ತರ ಕರ್ನಾಟಕ ಪೈಲ್ವಾನರ ಬಲಾಬಲ ಪ್ರದರ್ಶನ...!

ದಸರಾ ನಾಡಕುಸ್ತಿ ಪಂದ್ಯಾವಳಿಯಲ್ಲಿ ಭಾರ ಎತ್ತುವ ಮೂಲಕ ಬಲಾಬಲ ಪ್ರದರ್ಶಿಸಿದ ಉತ್ತರ ಕರ್ನಾಟಕದ ಪೈಲ್ವಾನರು ನೋಡುಗರ ಗಮನ ಸೆಳೆದರು.

ಬೆನ್ನಿನ ಮೇಲೆ 300 ಕೆ.ಜಿ ತೂಕದ ಮರಳಿನ ಮೂಟೆ ಹೊತ್ತು 9 ಬಾರಿ ಎದ್ದುನಿಂತ ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಬಿದಿರು ಕುಂದರಿ ಗ್ರಾಮದ ಪೈಲ್ವಾನ್ ಮೆಲು ನಂದಪ್ಪ ಹಣ್ಣಮ ಸಾಗರ್ ಕುಸ್ತಿ ಅಭಿಮಾನಿಗಳನ್ನು ಹುಬ್ಬೇರುವಂತೆ ಮಾಡಿದರು. ಹಾಗೆಯೇ ಬೆನ್ನಿನ ಮೇಲೆ 210 ಕೆ.ಜಿ ಜೋಳದ ಮೂಟೆ ಹೊತ್ತು ಕುಸ್ತಿ ಅಖಾಡದ ಸುತ್ತಲು ರೌಂಡ್ ಹೊಡೆದ ಬೆಟ್ಟಸೂರಿನ ಪೈ.ಉಮೇಶ್ ಸುರಿಬಿ ಕುರಿ, ಕಬ್ಬಿಣದ ಎತ್ತಿನ ಗಾಡಿಯ ಮೇಲೆ 110 ಕೆಜಿ ತೂಕದ ಜೋಳದ ಮೂಟೆಯನ್ನಿಟ್ಟು ಗಾಡಿಯ ಚಕ್ರಗಳನ್ನು ಒಬ್ಬರೇ ಬಿಚ್ಚಿ ಮತ್ತು ಹಾಕುವುದು ಹಾಗೂ ಎತ್ತಿನ ಗಾಡಿನ ಚಕ್ರಗಳನ್ನು ತಿರುಗದಂತೆ ಕಟ್ಟಿ ಎಳೆಯುವ ಮೂಲಕ ಶಕ್ತಿ ಪ್ರದರ್ಶನ ನೀಡಿದರು.

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ

ದುಃಖತಪ್ತರು: ಪತಿ ಎನ್. ನಾಗರಾಜು ಕ್ಲೀನರ್(ಸಿ) ಕಾಡಾ ಇಲಾಖೆ, ಮೈಸೂರು. ಮಗಳು ಎನ್.ಪ್ರತಿಮಾ, ಮೊಮ್ಮಗಳು ವೌಲ್ಯ (ಅಮ್ಮು) ಹಾಗೂ ಬಂಧು ಮಿತ್ರರು

ಶ್ರೀಮತಿ ನಾಗಮ್ಮ
ನಿಧನ: 17.10.2016

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ಮಕ್ಕಳೇ, ಇಂದು ನಾನು ಹೇಳುವ ಪಾಠ ಬಹಳ ಮಹತ್ವದ್ದು. ಆದ್ದರಿಂದ ನೀವೆಲ್ಲರೂ ಲಕ್ಷ್ಯಕೊಟ್ಟು ಕೇಳಬೇಕು

ವಿದ್ಯಾರ್ಥಿಂಯೋರ್ವ : ಸಾರ್ ನಿಮ್ಮ ಆ ಮಹತ್ವದ ಪಾಠವನ್ನು ನಾವು 'ಲಕ್ಷ' ಕೊಟ್ಟು ಕೇಳಬೇಕೆ?

ಮೈಸೂರು ಮಿತ್ರ

ಮಂಗಳವಾರ, 17 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮನುಷ್ಯರು ಹುಟ್ಟಿನಿಂದಲೇ ಮಹಾನ್ ವ್ಯಕ್ತಿಗಳಾಗಿರುವುದಿಲ್ಲ. ತಮ್ಮ ಕರ್ಮ ಫಲದಿಂದ ಮಹಾನ್ ವ್ಯಕ್ತಿಗಳಾಗುತ್ತಾರೆ. – ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಗುಣಿತ ಬಾರದವನಿಗೆ ಕಾವ್ಯದ ಗೊಡವೆ ಏಕೆ?

ನಿಮ್ಮ ಪತ್ರಗಳು

ಕಾವೇರಿ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಅಗತ್ಯ

ಮಾನ್ಯರೆ,

ರಾಜ್ಯದಲ್ಲಿ ಮಳೆಯ ಕೊರತೆಯಿಂದಾಗಿ ನೀರು ಮತ್ತು ವಿದ್ಯುತ್ ಪೂರೈಕೆ ವಿಚಾರವಾಗಿ ಸಮಸ್ಯೆ ಬಿಗಡಾಯಿಸಿದ್ದು, ರೈತಾಪಿ ವರ್ಗ ಬೀದಿಗಿಳಿದು ಪ್ರತಿನಿತ್ಯ ಪ್ರತಿಭಟನೆ ಮಾಡುವುದು ಅನಿವಾರ್ಯವಾಗಿದೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಪರಿಹಾರ ಒದಗಿಸಬೇಕಿದೆ.

ಅರಿತು ಅಡಿ ಇಟ್ಟರೆ ದಟ್ಟಡವಿ ಸುತ್ತಿಬರಬಹುದು ಎಂಬ ಮಾತಿನಂತೆ ಸೂಕ್ಷ್ಮವಾಗಿ ಅರಿತು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಚಿಂತಿಸಬೇಕು. ರೈತರು ಬೆಳೆದಿದ್ದ ಮಳೆಯಾಶ್ರಿತ ಬೆಳೆಗಳು ಈಗಾಗಲೇ ನೆಲ ಕಚ್ಚಿವೆ. ಹಾಲಿ ಇರುವ ನೀರಾವರಿ ಬೆಳೆಗಳು ವಿದ್ಯುತ್ ಸಮಸ್ಯೆಯಿಂದ ಬಾಡುತ್ತಿವೆ. ಮತ್ತು ಕಾವೇರಿ ಕೊಳ್ಳದ ನೀರು ಖಾಲಿಯಾದರೆ ಕುಡಿಯುವ ನೀರಿಗೂ ತಾತ್ವರವಾಗುತ್ತದೆ. ಇವೆಲ್ಲದರ ಶಾಶ್ವತ ಪರಿಹಾರಕ್ಕೆ ವರುಣಾಗಮನವಾಗಬೇಕು. ಅಲ್ಲಿಯ ತನಕ ಸರ್ಕಾರ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬೇಕು.

ರಾಷ್ಟ್ರಕವಿ ಕುವೆಂಪು ಅವರ ಮಾತಿನಂತೆ ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ ಎಂಬುದು ಸತ್ಯವಾಗಿದೆ ಕಾಂಗ್ರೆಸ್ಸಿನ ಗ್ಯಾರಂಟಿ ಯೋಜನೆ ಉಳಿಯಿತು ಟೀಕೆ ಸಾಯಿತು. ಮೇಕೆದಾಟು ಜಾರಿ, ಕಾವೇರಿ ವಿವಾದ, ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಕಾಂಗ್ರೆಸ್ ಸರ್ಕಾರದ ಕೆಲಸ ಉಳಿಯಲಿ, ಟೀಕೆಗಳು ಸಾಯಲಿ ರೈತರು ಸದಾ ನಗುತಿರಲಿ. ಜನರಿಗೆ ತುತ್ತು ಅನ್ನ ಸಿಗಲಿ ಎಂಬುದೇ ನಮ್ಮ ಸದಾಶಯ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಕುಪ್ಯಾ ಗ್ರಾಮದ ಹದಗೆಟ್ಟ ರಸ್ತೆ ಸರಿಪಡಿಸಿ



ಮಾನ್ಯರೆ,

ವರುಣಾ ಕ್ಷೇತ್ರದ ಕುಪ್ಯಾ ಗ್ರಾಮ ಮಾದಯ್ಯನವರ ಜಮೀನಿನಿಂದ ಕುರುಬರಹಳ್ಳಿ ಮಿಲ್ ಕಾಳಪ್ಪನ ಜಮೀನಿನವರೆಗೆ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ನಡೆದು ಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ ಮತ್ತು ದ್ವಿಚಕ್ರ ವಾಹನದಲ್ಲಿ ಚಲಿಸಲು ಸಾಧ್ಯವಾಗುತ್ತಿಲ್ಲ. ಎಷ್ಟೋ ಸಾರಿ ದ್ವಿಚಕ್ರ ವಾಹನ, ಟ್ರ್ಯಾಕ್ಟರ್‌ಗಳು ಇಲ್ಲಿ ಕಾಲುವೆಗೆ ಉರುಳಿ ಬಿದ್ದಿವೆ ಮತ್ತು ಈ ನಮ್ಮ ಜಮೀನಿನಿಂದ 100 ಮೀಟರ್ ಮುಖ್ಯ ರಸ್ತೆ ಇದ್ದು ಅಲ್ಲಿಗೆ ಕಬ್ಬನ್ನು ಎತ್ತಿನ ಗಾಡಿಯಲ್ಲೇ ಸಾಗಿಸಬೇಕು. ಒಂದು ಟ್ರಿಪ್‌ಗೆ 400ಗಳನ್ನು ಕೊಡಬೇಕು. ವರ್ಷವೆಲ್ಲಾ ದುಡಿದ ಕಬ್ಬಿನ ಹಣ ಕಟಾವಿಗೆ, ಗಾಡಿ ಬಾಡಿಗೆಗೆ ಹೋದರೆ ಜೀವನ ನಡೆಸುವುದು ಹೇಗೆ? ಅನೇಕ ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಿಲ್ಲ. ಮುಖ್ಯಮಂತ್ರಿ ತವರು ಜಿಲ್ಲೆಯಲ್ಲೇ ಅದರಲ್ಲೂ ಅವರ ಕ್ಷೇತ್ರದಲ್ಲೇ ಹೀಗಾಗಿದೆ. ತಕ್ಷಣ ಇದಕ್ಕೆ ಪರಿಹಾರ ಕಲ್ಪಿಸಿಕೊಡಬೇಕೆಂದು ಮನವಿ.

–ನೊಂದ ರೈತಾಪಿ ವರ್ಗ, ಮೈಸೂರು.

ಎಫ್‌ಐಆರ್ ಹಾಕಿ ಕ್ರಮ ಜರುಗಿಸಿ...

ಮಾನ್ಯರೆ,

ಒಂದು ಸಮುದಾಯವನ್ನು ಜಾತಿಸೂತಕವಾಗಿ ನಿಂದಿಸಿದರೆ, ತಕ್ಷಣ ಪೊಲೀಸರು ಅಂತಹವರ ಮೇಲೆ ಎಫ್‌ಐಆರ್ ಹಾಕಿ, ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಾರೆ. ಇದೊಂದು ಸರಿಯಾದ ಕ್ರಮವೇ ಹೌದು. ಅಂತಹವರಿಗೆ ಕಾನೂನುರೀತ್ಯಾ ಶಿಕ್ಷೆ ಆಗಲೇಬೇಕು. ಕೆ.ಎಸ್.ಭಗವಾನ್, ನಿರಂತರವಾಗಿ ಬ್ರಾಹ್ಮಣ ಸಮುದಾಯವನ್ನು ನಿಂದಿಸಿದರು. ಈಗ ಒಕ್ಕಲಿಗರನ್ನು ನಿಂದಿಸಿದ್ದಾರೆ. ಜಿಲ್ಲಾಡಳಿತ ಅವರ ಮನೆಗೆ ಪೊಲೀಸ್ ಸೆಕ್ಯೂರಿಟಿ ಕೊಟ್ಟಿದೆ. ಇವರ ವೈಯಕ್ತಿಕ ಹೇಳಿಕೆಗಳಿಗೆ ಸರ್ಕಾರ ಟ್ಯಾಕ್ಸ್ ಪೇಯರ್ ಹಣವನ್ನು ಈ ರೀತಿ ಖರ್ಚು ಮಾಡುತ್ತಿರುವುದು ಅಕ್ಷಮ್ಯ. ಇಂತಹವರಿಂದ ಸಮಾಜದಲ್ಲಿ ಸಾಮರಸ್ಯ, ಶಾಂತಿ ಕದಡುವಂತಾಗಿದೆ. ಭಗವಾನ್ ಅವರ ಈ ಮಾತುಗಳನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿ ಸುಮೋಟೋ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಹೀಗೇ ಬಿಟ್ಟರೆ, ಬ್ರಾಹ್ಮಣರಾಯಿತು, ಈಗ ಒಕ್ಕಲಿಗರಾಯಿತು, ಇನ್ನು ಮುಂದೆ ಯಾವ್ಯಾವ ಸಮುದಾಯವನ್ನು ನಿಂದಿಸುತ್ತಾ ಹೋಗುತ್ತಾರೆ, ಇದೂ ಕೂಡ ಕಾನೂನುರೀತ್ಯ ಅಪರಾಧವಾಗುವುದಿಲ್ಲವೆ? ಇಂತಹವರಿಗೆ ಪೊಲೀಸ್ ಬಂದೋಬಸ್ತ್ ಕೊಟ್ಟಿರುವುದು ಎಷ್ಟರ ಮಟ್ಟಿಗೆ ಸರಿ? ಇದೇ ರೀತಿ ಬೇರೆಯವರು ಬೇರೆ–ಬೇರೆ ಸಮುದಾಯದವರನ್ನು ನಿಂದಿಸುತ್ತಾ ಹೋದರೆ ಅವರೆಲ್ಲರಿಗೂ ಪೊಲೀಸ್ ಸೆಕ್ಯೂರಿಟಿ ಕೊಡಲು ಸಾಧ್ಯವೇ? ಹಾಗಾಗಿ ಅವರಿಗೆ ಕೊಟ್ಟಿರುವ ಸೆಕ್ಯೂರಿಟಿಯನ್ನು ಪೊಲೀಸರು ತಕ್ಷಣ ವಾಪಸ್ ಪಡೆಯಬೇಕು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ನಾಲ್ಕು ನುಡಿ!

ಮಾನ್ಯರೆ,

1. **ಶೋಚನೀಯ :** ಬಹಳ ಕಡೆ 'ಶೌಚಾ'ಲಯಗಳ ಸ್ಥಿತಿ 'ಶೋಚ್'ನೀಯವಂತೆ : ಏನಿಲ್ಲವಾದರೂ, ಪ್ರಾಸಜೋಡಣೆ ಸರಿ ಹೋಯಿತು, ಬಿಡಿ! ('ಯೋಚ್'ನೆ ಬೇಕಿಲ್ಲ; 'ನಾಚ್'ಬೇಕಷ್ಟೆ).

2. **ಬವಣೆ :** '... ಪ್ಯಾರಿಸ್‌ನಲ್ಲಿ ತಿಗಣೆ ಕಾಟ' (ಮಿತ್ರ, ಅ. 6) ಎಲ್ಲಿಲ್ಲ, ಹೇಳಿ, ತಿಗಣೆ ಬವಣೆ? ಸರ್ವಾಂತರ್ಯಾಮಿ: ದೇವರಿಗೆಣೆ! (ದೇವರಾಣೆ).

3. **'ರತ್ನ':** "ಸಿದ್ದರಾಮಯ್ಯನವರಿಗೆ 'ಭಾರತರತ್ನ' ನೀಡಿ" ಎಂದು ಅಶೋಕ್ ಖೇಣಿ (ಮಿತ್ರ ಅ. 8). ತಪ್ಪು 'ವಿಶ್ವರತ್ನ' ನೀಡಬೇಕು; ಖೇಣಿಗೆ 'ಭಾರತರತ್ನ'!

4. **ವಿಪರ್ಯಾಸ :** ಹೊಟ್ಟೆಗೆ ಹಿಟ್ಟಿಲ್ಲದಿರುವಾಗ (ಕುಡಿಯುವ ನೀರಿಗೆ ತತ್ವಾರ ಬರಲಿರುವಾಗ) ಸೋಮನಾಥಪುರ ದೇವಾಲಯದ ಜುಟ್ಟಿಗೆ ಯುನೆಸ್ಕೋ ಮಲ್ಲಿಗೆ ಹೂವು!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಮೈಸೂರು ದಸರಾ ಎಷ್ಟೊಂದು ಸುಂದರ...

ಮೈಸೂರು ದಸರ ಎಷ್ಟೊಂದು ಸುಂದರ? ಕರುಳಿನ ಕರೆ ಚಿತ್ರದ ಈ ಸಾಲುಗಳು ಮತ್ತೆ ಮತ್ತೆ ಮರುಕಳಿಸುತ್ತಿವೆ. ದಸರ ಎಂದರೆ ಮೈಸೂರು, ಮೈಸೂರು ಎಂದರೆ ದಸರ, ಎನ್ನುವಷ್ಟರ ಮಟ್ಟಿಗೆ ಒಂದಕ್ಕೊಂದು ತಳುಕು ಹಾಕಿಕೊಂಡಿರುವ ನಾಡ ಹಬ್ಬ ಸಂಗೀತ ನಿರ್ದೇಶಕ ಡಾ. ಹಂಸಲೇಖ ಅವರಿಂದ ವಿಧ್ಯುಕ್ತವಾಗಿ ಚಾಲನೆಗೊಂಡಿದೆ. ಮೈಸೂರು ತನ್ನ ಬೆಳಕಿನ ಕಣ್ಣುಗಳಿಂದ ಕಂಗೊಳಿಸುತ್ತಿದೆ. ಕುಂದಾನಗರಿ ಬೆಳಗಾವಿ, ಉದ್ಯಾನ ನಗರಿ ಬೆಂಗಳೂರು, ಸಕ್ಕರೆನಗರಿ ಮಂಡ್ಯ, ಕರ್ನಾಟಕದ ನವಿಲುಗರಿ, ಸಾಂಸ್ಕೃತಿಕ ನಗರಿ ಮೈಸೂರು. ನೀವೇನೇ ಹೇಳಿ ಇಂಥಾ ಊರಿನಲ್ಲಿ ಬದುಕುವುದೇ ಒಂದು ಸುಖ ಕಣ್ರಿ. ಪ್ರಪಂಚದಲ್ಲಿ ಎಂಥೆಂಥಾ ಊರುಗಳಿವೆ ಗೊತ್ತೆ! ಬರೀ ಅರಮನೆಗಳನ್ನೇ ನೋಡಿಕೊಂಡು ಬರುವುದಕ್ಕೇ ಕೆಲವು ಊರುಗಳಿವೆ, ಸಮುದ್ರ ನೋಡಿ ಬರುವುದಕ್ಕೇ ಊರುಗಳಿವೆ, ಬೆಟ್ಟಗಳನ್ನು ನೋಡಿ ಬರುವುದಕ್ಕೇ ಊರುಗಳಿವೆ. ಜಯಪುರ, ಗೋವಾ, ಮುನಾರ್ಸ್ ಹೀಗೆ ಸೇತುವೆಗಳನ್ನು, ರಸ್ತೆಗಳನ್ನು, ಏರ್ ಪೋರ್ಟ್‌ಗಳನ್ನು, ದ್ವೀಪಗಳನ್ನು ಸುತ್ತಿಬರುವುದಕ್ಕೆ ಎಂತಲೇ ಒಂದೊಂದಕ್ಕೂ ಒಂದೊಂದು ಊರು ಪ್ರಸಿದ್ಧಿ. ಆದರೆ 'ದಸರಾ ಸಂಸ್ಕೃತಿ'ಯನ್ನು ನೋಡಿ ಬರುವುದಕ್ಕೆ ಜನ ಮೈಸೂರಿಗೇ ಬರಬೇಕು. ಹೀಗೆ ಜನಸಂಸ್ಕೃತಿಯ ಸಾಂಸ್ಕೃತಿಕ ವೈಭವವನ್ನು ಮುಡಿಗೇರಿಸಿಕೊಂಡು ತನ್ನ ಹೆಸರಿನ ಜೊತೆ 'ಸಾಂಸ್ಕೃತಿಕ ನಗರಿ' ಎಂದು ಕರೆಸಿಕೊಂಡ ಊರಿದು. ತನ್ನ ಪರಂಪರೆಯನ್ನು, ಸಂಸ್ಕೃತಿಯನ್ನು ವಿಶ್ವವಿಖ್ಯಾತ ಮಾಡಿಕೊಂಡು ಅದರ ಕುರುಹಾಗಿ ಪ್ರತಿ ವರ್ಷ ದಸರಾ ಆಚರಿಸಿಕೊಂಡು ಬಂದ ಮೈಸೂರಿನಲ್ಲಿ ಬದುಕುವ ಜನ ನಾವು.

ದೇಶ ಸುತ್ತಿ ನೋಡು, ಕೋಶ ಓದಿ ನೋಡು ಅಂತ ಗಾದೆ ಮಾತಿದೆಯಲ್ಲ ಹಾಗೆ, ತುಂಬಾ ಜನಕ್ಕೆ ಊರು ಸುತ್ತುವ ಚಟ. ಅಂಥವರು ಊರು ಸುತ್ತಿಕೊಂಡು ವಾಪಸ್ಸು ಮೈಸೂರಿಗೆ ಬರುವಾಗ ಇಲ್ಲಿನ ಗಾಳಿ ಮೈ ತಾಕಿದ ಕೂಡಲೇ ಅವರ ಮುಖದಲ್ಲಿನ ಸುಖ ನೋಡಬೇಕು ನೀವು! ಹಾಗೆಯೇ ಹಿಗ್ಗಿ ಹೀರೇಕಾಯಿ ಯಾಗಿ ಬಿಡುತ್ತಾರೆ. ಇನ್ನು ಕೆಲವರಿಗೆ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರುವುದೇ ಒಂದು ದೊಡ್ಡ ಪ್ರಯಾಸ. ಹೋದ ಮೇಲಂತೂ ಅವತ್ತು ರಾತ್ರಿಯೇ ವಾಪಸ್ಸು ಮೈಸೂರಿಗೆ ಬಂದುಬಿಡಬೇಕು. ರಾತ್ರಿ ಎಷ್ಟೊತ್ತಾದರೂ ಸರಿ ನಿದ್ದೆಗಣ್ಣಿನಲ್ಲಿಯೇ ಬಸ್ಸಿನ ಕಿಟಕಿ ತೆಗೆದು ಫೈವ್‌ಲೈಟ್ ಸರ್ಕಲ್ ನೋಡಿಬಿಡಬೇಕು. ಆಗಲೇ ಅವರಿಗೆ ಸಮಾಧಾನ. ಈ ಕೆಟಗರಿಯಲ್ಲಿ ಯಾರು ಬೇಕಾದರೂ ಇರಬಹುದು. ನಾವು ವಾಸಿಸಲು ಒಂದು ಊರು ಬೇಕು ಎಲ್ಲೋ ಇದ್ದರಾ ಯಿತು ಬಿಡು, ಹೇಗೋ ಇದ್ದರಾಯಿತು ಬಿಡು ಎನ್ನುವ ಕಾಲ ಇದಲ್ಲ. ಇದ್ದರೆ ಇಂಥಾ ಊರಿನಲ್ಲೇ ಇರಬೇಕು ಅಂತ ಅರಸಿಹೊರಡುವ ಅನ್ವೇಷಕರ ದೊಡ್ಡ ಗುಂಪೇ ಈಗ ವಿಶ್ವದಾದ್ಯಂತ ಸಿದ್ಧವಾಗಿದೆ. ಕೈಯ್ಯಲ್ಲಿ ಪಾಸ್‌ಪೋರ್ಟ್, ವೀಸಾ ಹಿಡಿದು ಹೊರಟ ನಮ್ಮ ದೇಶದ ಹುಡುಗರು ಗ್ರೀನ್ ಕಾರ್ಡಿನ ಆಸೆಯಿಂದ ವಿದೇಶಗಳಲ್ಲಿ ಮಕ್ಕಳನ್ನು ಪಡೆಯುತ್ತಾರೆ, ಅಲ್ಲಿ ನೆಲೆಯೂರಿ ಇಂಡಿಯಾದ ರಸ್ತೆಗಳನ್ನು, ಇಂಡಿಯಾದ ಕೊಳಕನ್ನು ಕುರಿತು ಥರಾವರಿ ಮಾತಾಡುತ್ತಾ ತಾವಿರುವ ಜಾಗದ ಬಗ್ಗೆ ಖುಷಿ ಪಡುತ್ತಾರೆ. ಆದರೆ ದಸರಾ ವಿಷಯಕ್ಕೆ ಬಂದಾಗ ತಮ್ಮ ಬಗ್ಗೆ ತಾವು ಹೆಮ್ಮೆಯಿಂದ ಹೇಳಿಕೊಳ್ಳೋದು ಏನು ಗೊತ್ತ? ನಾನು Mysorian ಅಂತ. ಮೈಸೂರು



Cultural Capital' ಕರ್ನಾಟಕದ ಸಾಂಸ್ಕೃತಿಕ ಹೆಬ್ಬಾಗಿಲು. ಹೀಗೆ ಊರಿನ ಹೆಸರು ಹೇಳಿಕೊಂಡರೆ ಸಾಕು ನಮ್ಮ ಸಾಂಸ್ಕೃತಿಕ ಐಡೆಂಟಿಟಿ ಗೊತ್ತಾಗುವ ಒಂದೇ ಒಂದು ಊರು ಮೈಸೂರು. ಇಂಥ ಊರಿನಲ್ಲಿ ನಾವಿದ್ದೇವಲ್ಲ ತೃಪ್ತಿಗೆ ಸಂತೃಪ್ತಿಗೆ ಇನ್ನೇನು ಬೇಕು ಹೇಳಿ.

ನಾವು ಚಿಕ್ಕವರಿದ್ದಾಗ ಕಯ್ಯಾರ ಕಿಞ್ಞಣ್ಣರೈ ಎಂಬ ಕವಿ ಬರೆದ ಪದ್ಯ 'ಒಂದಿತ್ತು ಬರಿಯ ಹಣ್ಣುಗಳನ್ನೇ ಪಟ್ಟಿ ಮಾಡಿ ಅವರು ನಮಗೆ ಕರ್ನಾಟಕವನ್ನೇ ಕಟ್ಟಿಕೊಟ್ಟಿದ್ದರು.

ನಂಜನಗೂಡಿನ ರಸಬಾಳೆ
ತಂದಿಹೆ ಕೊಡಗಿನ ಕಿತ್ತಿಳೆ
ಬೀದರ ಜಿಲ್ಲೆಯ ಸೀಬೆಯ ಹಣ್ಣು
ಬೆಂಗಳೂರಿನ ಸೇಬಿನ ಹಣ್ಣು
ಕೊಳ್ಳಿರಿ ಹಿಗ್ಗನು ಹರಿಸುವೆವು
ಕಲ್ಲುಸಕ್ಕರೆಯ ಮರೆಸುವೆವು
ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಲ ಬಯಲಿನ ಸಿಹಿಲಿಂಬೆ
ಬೆಳಗಾವಿಯ ಸವಿ ಸಪೋಟ
ದೇವನಹಳ್ಳಿಯ ಚಕ್ಕೋತ
ನಾಲಿಗೆ ಬರವನು ಕಳೆಯುವೆವು
ದೇಹದ ಬಲವನು ಬೆಳೆಸುವೆವು
ಗಂಜಾಮ್ ಅಂಜೀರ್
ತುಮಕೂರ್ ಹಲಸು
ಧಾರವಾಡದ ಆಪೂಸು
ಮಲೆನಾಡಿನ ಅನಾನಸು
ಸವಿಯಿರಿ ಬಗೆಬಗೆ ಹಣ್ಣುಗಳ
ಕನ್ನಡ ನಾಡಿನ ಹಣ್ಣುಗಳ ॥

– ಕಯ್ಯಾರ ಕಿಞ್ಞಣ್ಣರೈ

ಹೀಗೆ ಕನ್ನಡದ ಮಣ್ಣಿಗೆ ವಿವಿಧ ರುಚಿಗಳ ಹಣ್ಣು ಬೆಳೆವ ಗುಣವಿದೆ. ಹಾಗೆಯೇ ಮೈಸೂರಲ್ಲಿ ಸಂಸ್ಕೃತಿ ಕಟ್ಟಿದ ಕುಲವಿದೆ. ಕರ್ನಾಟಕದಲ್ಲಿ ಎಲ್ಲೆ ಹೋದರೂ ನಾಲಿಗೆಯಲ್ಲಿ ಮೈಸೂರಿನ ಹೆಸರು ಹೇಳಿಯೇ ಸಿಹಿ ಸುರಿಸುವ ಮೈಸೂರು ಪಾಕಿನ ಸವಿಯಿದೆ. ನೀವೆಲ್ಲಾದರೂ ನೋಡಿದ್ದೀರಾ? ಊರಿನ ಮಧ್ಯೆ ಬೆಟ್ಟ, ಅಲ್ಲೊಂದು ದೇವಾಲಯ. ರಸ್ತೆಗೆ ಅಡ್ಡ ಸಿಕ್ಕುವ ಚಿರತೆಗಳು, ಬೆಟ್ಟದ ಮೇಲೆ ಕುಳಿತು ಬಗ್ಗಿ ನೋಡಿದರೆ ಜಗಮಗಿಸುವ ಬೆಳಕು. ಅರಮನೆಯ ಅಂದ, ಪ್ರವಾಸಿಗರ ಸ್ವಚ್ಛಂದ. ಬಲಕ್ಕೆ ತಿರುಗಿದರೆ ಬಲಮುರಿ ಎಡಕ್ಕೆ ತಿರುಗಿದರೆ ಎಡಮುರಿ. ರಸ್ತೆಯಲ್ಲಿ ನಿಂತಿದ್ದರೂ ಜಿರಾಫೆಯ ತಲೆಕಾಣಿಸುವ ಮೃಗಾಲಯ, ಮಕ್ಕಳ ಉಡಾಫೆಗೆ ಗುದ್ದು ಕೊಟ್ಟು ನಕ್ಕು ನಲಿಸುವ ಚಿಂಪಾಜಿ, ಪ್ರಾಣಿ ಸಂಗ್ರಹಾಲಯ. ಎಡಬಲ ತಿರುಗಿ ಕತ್ತು ನೋವಾಗಿದ್ದರೆ ಸ್ವಲ್ಪ ಮುಂದಕ್ಕೆ ಹೋಗಿ ನಿಮ್ಮ ಬೆನ್ನ ಹಿಂದೆ ರಕ್ಷಣೆಗೆ ನಿಂತಿದ್ದಾಳೆ ಕಾವೇರಿ. ಕುವೆಂಪು ಹೇಳುವ ಹಾಗೆ ನೀನ್ ಕುಡಿಯುವ ನೀರ್ ಕಾವೇರಿ. ಕನ್ನಂಬಾಡಿಗೆ ಕುಡಿನೋಟವೊಂದಿದ್ದರೆ ಅದು ನಮ್ಮೂರು ಮೈಸೂರು. ಆದರೆ ಈ ಬಾರಿ ಕನ್ನಂಬಾಡಿ ಸೊರಗಿದೆ. ತಾಯಿ ಕಾವೇರಿ ಮತ್ತೆ ಮೈತುಂಬಿ ಹರಿಯಬೇಕು ಎಂಬುದು ಕನ್ನಡಿಗರೆಲ್ಲರ ಅಪೇಕ್ಷೆ.

ಈ ದಸರಾ ಸಂದರ್ಭದಲ್ಲಿ ತಾಯಿ ಚಾಮುಂಡೇಶ್ವರಿಯ ಶ್ರೀರಕ್ಷೆ ಕಾವೇರಿಯನ್ನು ಮತ್ತೆ ಮೈತುಂಬಿದ ಸೊಗಸಿಗೆ ಕಣ್ತೆರೆಯುವಂತೆ ಮಾಡಲಿ ಎಂಬುದು ಕರುನಾಡಿನ ಅಪೇಕ್ಷೆ. ಮೈಸೂರಿನ ಬಗ್ಗೆ ಬರೆಯುವ ಬರಹಗಾರರೆಲ್ಲರಿಗೂ ಮೈತುಂಬಾ ಪದವೇ. ಯಾವುದನ್ನು ಬರೆಯುವುದು? ಯಾವುದನ್ನು ಬಿಡುವುದೆಂಬ ಗೊಂದಲ. ಇಷ್ಟು ಸಂಭ್ರಮ ಕೊಟ್ಟ ಊರಲ್ಲೀಗ ಎಂದಿನಂತೆ ಮತ್ತೆ ದಸರಾದ ಹರವು. ಊರಹಬ್ಬವೊಂದು ನಾಡಹಬ್ಬವಾಗಿ ಆಚರಿಸಲ್ಪಡುತ್ತಿರುವ ಇದು ಪ್ರಾರಂಭವಾಗಿದ್ದು 1910ರಲ್ಲಿ, ಹೀಗೆ ಮೈಸೂರಿನಲ್ಲಿ ಶುರುವಾದ ಈ ದಸರಾ ಇವತ್ತು ದೇಶದಾದ್ಯಂತ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸಲ್ಪಡುತ್ತಿದೆ.

ಧರ್ಮ, ಸಂಸ್ಕೃತಿ, ಪುರಾಣ, ಪರಂಪರೆಗಳನ್ನು ಬೆರೆಸಿಕೊಂಡು ರೂಪುಗೊಂಡದ್ದು ದಸರ. ದಶಹರ ಎಂಬುದರ ತದ್ಭವ ರೂಪವೇ ಈ ದಸರಾ. ನವರಾತ್ರಿಯ ಈ ಕಾಲದಲ್ಲಿ ದೇಶದ ನಾನಾ ರಾಜ್ಯದ ಕಡೆ ದಸರಾ ಉತ್ಸವಗಳನ್ನು ಆಯೋಜಿಸಲಾಗುತ್ತಿದೆ. ಆದರೆ ಮೈಸೂರು ಮತ್ತು ದಸರಾ ಎಂಬ ಪದಗಳು ಒಟ್ಟೊಟ್ಟಿಗೆ ಪ್ರಯೋಗಗೊಳ್ಳುತ್ತಿರುವ ಮಟ್ಟಿಗೆ ಅವು ಒಂದಕ್ಕೊಂದು ಬೆರೆತು ಹೋಗಿವೆ. ಹೀಗೆ ಶ್ರೀಮಂತ ದೇಸೀ ಪರಂಪರೆಯೊಂದು ತನ್ನ ಆಚರಣೆಗಳಿಂದಲೇ ವಿಶ್ವವಿಖ್ಯಾತವಾಗಿ ಹೊಂದಿದ್ದು ಮಾತ್ರ ಇತಿಹಾಸ! ಕರ್ನಾಟಕದ ರಾಜಮನೆತನಗಳು ಶರನ್ನವರಾತ್ರಿಯನ್ನು ನಿರಂತರವಾಗಿ ಆಚರಿಸಿಕೊಂಡು ಬಂದರು. ಇದನ್ನು ತುಂಬಾ ಪ್ರಸಿದ್ಧಿಗೆ ತಂದವರು ವಿಜಯನಗರದ ಅರಸರು. ಇವರನ್ನೇ ಅನುಸರಿಸಿದ ಮೈಸೂರು ಅರಸರು ದಸರಾ ಆಚರಣೆಯನ್ನು ಇನ್ನೂ ಹೆಚ್ಚು ವೈಭವೀಕರಿಸಿದರು. ತನ್ನ 50 ವರ್ಷಗಳ ಆಳ್ವಿಕೆಯ ನಂತರ ಮೈಸೂರು ಸಂಸ್ಥಾನದ ಅಧಿಕಾರವನ್ನು 1881ರಲ್ಲಿ ಬ್ರಿಟೀಷ್ ಚಕ್ರಾಧಿಪತ್ಯ ರಾಜವಂಶಸ್ಥರಿಗೆ ಬಿಟ್ಟುಕೊಟ್ಟರು. ಆಗ 10ನೇ ಚಾಮರಾಜ ಒಡೆಯರ್ ಇದ್ದರು. ಆಗಲೂ ಯಾವ ರಾಜಕೀಯ ಪಲ್ಲಟಗಳೇ ನಡೆಯಲಿ, ಯಾರೇ ಅಧಿಕಾರದಲ್ಲಿರಲಿ, ನವರಾತ್ರಿಯ ಸಾಂಸ್ಕೃತಿಕ ವಿನ್ಯಾಸಗಳು ಬದಲಾಗಲಿಲ್ಲ. ಮೈಸೂರಿನ ಜನ ತಮ್ಮ ಜೀವನ ವಿಧಾನದ ಕ್ಯಾಲೆಂಡರುಗಳಲ್ಲಿ ದಸರಾವನ್ನು ಅಧಿಕೃತವಾಗಿ ಘೋಷಿಸಿಕೊಂಡು ಬಿಟ್ಟರು. ವರ್ಷಕ್ಕೊಮ್ಮೆ ನಡೆಯುವ ಉತ್ಸವದಲ್ಲಿ ಅವರು ಪಾಲ್ಗೊಂಡರು, ಹಾಡಿದರು, ಹರಸಿಕೊಂಡರು, ನಡೆಸಿಕೊಂಡು ಬಂದರು. ಹೀಗೆ ಇದು ಮೈಸೂರಿನ ಪರಂಪರೆಯಾಗಿ ಹೋಯಿತು. ಶ್ರೀರಂಗಪಟ್ಟಣದ ಕಾವೇರಿ ನದಿಯ ಪಕ್ಕದ ಗೌರಿ ಕಡುವೆಯ ಎಂಬ ಸ್ಥಳದಲ್ಲಿ 9ನೇ ಮಹಾರಾಜ ರಾಜ ಒಡೆಯರ್ 1610ರಲ್ಲಿ ಇದನ್ನು ಪ್ರಾರಂಭಿಸಿದರೂ 25 ಮಂದಿ ಅರಸರ ಪೈಕಿ ಎಂಟು ಜನ ಅರಸರು ಈ ದಸರೆಯನ್ನು ನೋಡಲೇ ಇಲ್ಲ. ಇದೊಂದು ಮನುಷ್ಯ ಲೋಕದ ಸುಗ್ಗಿಯ ಕಾಲ. ಗಜಪಡೆಗಳ ಗಾಂಭೀರ್ಯ ಪ್ರದರ್ಶನ, ಸ್ತಬ್ಧ ಚಿತ್ರಗಳು ಮೆರವಣಿಗೆ, ಜನಪದ ಕಲಾ ತಂಡಗಳ ಕಾಲ್ನಡಿಗೆ, ಅವುಗಳ ಪಟ್ಟಿ ಒಂದೇ ಎರಡೇ, ಬರೆದರೇ ಒಂದು ದೊಡ್ಡಪುಸ್ತಕವೇ ಆದೀತು. ಡೊಳ್ಳು ಕುಣಿತ, ಜೇಡರ ಕುಣಿತ, ವೀರಗಾಸೆ, ಕಂಸಾಳೆ, ಗಾರುಡಿ ಗೊಂಬೆ, ಪೂಜಾ ಕುಣಿತ – ಹೀಗೆ ದೇಸಿ ಕಲೆಗಳ ಸಾಲು ಸಾಲು ಕರ್ನಾಟಕದ ಕಣ್ಮನ ಸೆಳೆದಿವೆ. ಸಾರ್ವಜನಿಕರ ಸಹಭಾಗಿತ್ವವನ್ನು ಕೇಳುವ ಹಬ್ಬ ನಾಡ ದಸರಾ. ನಮ್ಮ ನಾಡಿನ ಕಲಾವಿದರು ತಮ್ಮ ಪ್ರತಿಭೆ, ಕೈಚಳಕ, ಕಸರತ್ತುಗಳನ್ನು ತೋರಿಸಲು ಇರುವ ಒಂದೇ ಒಂದು ಸಾರ್ವಜನಿಕ ಸದಾವಕಾಶ ಎಂದರೆ ಮೈಸೂರು ದಸರಾ. ಈಗ 413 ನೇ ದಸರಾ ಗಜಪಡೆಯ ತಾಲೀಮಿಗೆ ಹೆಜ್ಜೆ ಹಾಕಲು ನಿಂತಿದ್ದಾನೆ. ಇದು ಮೈಸೂರಲ್ಲಿ ಮಾತ್ರವಲ್ಲ ಪಕ್ಕದ ಮಡಿಕೇರಿಯಲ್ಲಿ, ಮಂಗಳೂರಿನ ಕುಡ್ಲದ ಮಾರ್ನೆಮಿಯಲ್ಲಿ, ಧಾರವಾಡದ ಗೆಳೆಯರ ಬಳಗದಲ್ಲಿ, ಚಿತ್ರದುರ್ಗದಲ್ಲಿ, ಕುದ್ರೋಳಿಯಲ್ಲಿ ಹೀಗೆ ಎಲ್ಲ ಕಡೆ ಇಂಥ ಸಾಂಸ್ಕೃತಿಕ ಉತ್ಸವಗಳು ತಮ್ಮ ತಮ್ಮ ದೇಸೀ ಕಲೆಯ ಮಾದರಿಗಳಿಗೆ ಜೀವ ತುಂಬಿವೆ.

ಮಾತೃಪ್ರಧಾನ ಸಂಸ್ಕೃತಿಯ ನೆರಳಲ್ಲೇ ನಡೆಯುವ ಈ ಹಬ್ಬ, ದೆಹಲಿಯಲ್ಲಿ ಬಹುರೂಪಿಯಾಗಿ, ಉತ್ತರ ಕನ್ನಡದಲ್ಲಿ ದಸರಾ ಆಗಿ, ಬೆಳಗಾವಿಯಲ್ಲಿ ನವರಾತ್ರಿಯ ಆಚರಣೆಯಾಗಿ, ಗುಲ್ಬರ್ಗಾ, ವಿಜಾಪುರಗಳಲ್ಲಿ ದಸರವಾಗಿ – ಎಲ್ಲ ಕಡೆ ನಡೆಯುತ್ತಿದೆ. ಇದಕ್ಕೊಂದು ಸಾಂಸ್ಕೃತಿಕ ಒಗ್ಗಟ್ಟಿದೆ. ಇರಲಿ ಇಂಥಾ ಸಾಂಸ್ಕೃತಿಕ ಒಗ್ಗಟ್ಟುಗಳೇ ನಮ್ಮನ್ನು ಕಾಯುವುದು ನಿಮಗೆ ನೆನಪಿರಬೇಕು.

ಹಿರಿಯ ವಿಜ್ಞಾನಿ ಸಿ.ಎನ್.ಆರ್. ರಾವ್ ಈ ಹಿಂದೆ ಒಮ್ಮೆ ದಸರಾ ಉದ್ಘಾಟಿಸಿ ಒಂದು ಮಾತು ಹೇಳಿದ್ದರು. "ಮೈಸೂರು ಬೆಂಗಳೂರಿನಂತಲ್ಲ ಈ ಊರಿಗೆ ತನ್ನದೇ ಆದ ಆತ್ಮವಿದೆ" ಅಂತ. ಬೆಂಗಳೂರಿನಲ್ಲಿ ಎಲ್ಲವೂ ಇದೆ, ದುಡ್ಡಿದೆ, ಶ್ರೀಮಂತಿಕೆಯಿದೆ, ಐಷಾರಾಮಿ ಜೀವನವಿದೆ, ನಿಮಗೆ ಗೊತ್ತಿರಲಿ ಪಕ್ಕದಲ್ಲೇ ಕೊಳಗೇರಿಯಿದೆ. ಇದೆಲ್ಲಾ ಭೌತಿಕವಾಗಿ ಕಣ್ಣಿಗೆ ಕಾಣುವ ವಸ್ತು, ವಿವರಗಳು ಅಷ್ಟೇ. ಆದರೆ ಕಣ್ಣಿಗೆ ಕಾಣದ ಆತ್ಮಸುಖ ಈ ಊರಿನಲ್ಲಿದೆ. ಬದುಕಿನ ದುಡಿಮೆ ಮುಗಿಸಿ ಮಕ್ಕಳಿಗೆ ಮದುವೆ ಮುಂಜಿ ಮಾಡಿ ತಮ್ಮ ಬದುಕಿನ ಸಂಧ್ಯಾ ಕಾಲದ ಜೀವನವನ್ನು ಮೈಸೂರಿನಲ್ಲಿ ಕಳೆಯಲು ಜನಕ್ಕೆ ಏನಿಷ್ಟವೋ ಏನೋ ! ಸಯ್ಯಾಜಿರಾವ್ ರೋಡಿನ ಹೋಟೆಲಿನಲ್ಲಿ ಮಸಾಲೆ ದೋಸೆ ತಿಂದು, ಕಾಫಿ ಕುಡಿದು ಈಚೆಗೆ ಬರುವ ನಿವೃತ್ತರಾದವರನ್ನು ನೋಡಬೇಕು ನೀವು ! ಮೈಸೂರಿನ ಸಂಜೆಗಳಲ್ಲಿ ಬಾಯಿ ಚಪ್ಪರಿಸಿಕೊಂಡು ಇಡ್ಲಿ ಚಟ್ನಿ ತಿನ್ನುವ ವಯಸ್ಸಾದವರನ್ನು ನೋಡಿಯೇ ಮೈಸೂರನ್ನು 'ನಿವೃತ್ತರ ಸ್ವರ್ಗ' ಅಂತ ಕರೆದಿರುವ ಸತ್ಯ ಗೊತ್ತಾಗುತ್ತದೆ. ಇವತ್ತಿಗೂ ಕೇವಲ ನೂರು ರೂಗಳಲ್ಲಿ ದಿನ ಕಳೆಯುವ ವ್ಯವಸ್ಥೆ ಇರುವ ಊರು ಮೈಸೂರು. ದಿನಕ್ಕೆ ಲಕ್ಷಗಟ್ಟಲೆ ಖರ್ಚು ಮಾಡುವ ಮೋಜು ಮಸ್ತಿಯೂ ಇಲ್ಲಿದೆ. ಮೊದಲನೇ ಆಯ್ಕೆಯ ಜನರೇ ಇಲ್ಲಿ ಜಾಸ್ತಿ ಇರುವ ಕಾರಣ ಮೈಸೂರಿನ ಪರಂಪರೆಗೆ ಅಡ್ಡಿಯಿಲ್ಲ.

ಆದರೆ ಪರಂಪರೆಯನ್ನು ಉಳಿಸಿಕೊಂಡೇ ಮೈಸೂರನ್ನು ಅಭಿವೃದ್ಧಿಪಡಿಸಲು ಕಳೆದ ವರ್ಷಗಳಲ್ಲಿ ಸುಮಾರು 2,000 ಕೋಟಿಗಿಂತ ಹೆಚ್ಚು ಹಣ ಇಲ್ಲಿಗೆ ಬಂದಿದೆ. ಜೆ.ಎನ್. ನರ್ಮ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಮುಖ್ಯಮಂತ್ರಿಗಳ ನಿಧಿ ಹೀಗೆ–ಹಲವಾರು ಬಾಬ್ತುಗಳಲ್ಲಿ ಇಲ್ಲಿಗೆ ದುಡ್ಡು ಬಂದಿದೆ. ನಿವೃತ್ತಿಯಾದ ಮೇಲೆ ತಾವು ಕೂಡ ನಿವೃತ್ತರ ಸ್ವರ್ಗಕ್ಕೆ ಸೇರಿಕೊಳ್ಳಬಯಸುವ ಅಧಿಕಾರಿಗಳು ಅಭಿವೃದ್ಧಿಗಾಗಿ ಮನಸ್ಸು ಮಾಡಬೇಕು. 250 ಚದರ ಕಿ.ಮೀ.ವರೆಗೆ ವಿಸ್ತಾರವಾಗಿ ಹರಡಿಕೊಂಡಿರುವ ಮೈಸೂರಿಗೆ ಮಹಾನಗರಪಾಲಿಕೆಯಿದೆ. 65 ವಾರ್ಡ್‌ಗಳಿವೆ. ಲಕ್ಷಾಂತರ ಜನ ಇಲ್ಲಿ ವಾಸ್ತವ್ಯ ಹೂಡಿದ್ದಾರೆ. ಇಲ್ಲಿ ಸಮಸ್ಯೆಗಳಿವೆ,ಹಾಗೆಯೇ ಅದರ ಜೊತೆಜೊತೆಗೆ ಪರಂಪರೆಯ ಸ್ವಚ್ಛ ಸುಂದರ ಮೈಸೂರನ್ನು ನಿರ್ಮಿಸಬೇಕಿದೆ. ತುಮಕೂರಿಗೆ ಫುಡ್‌ಪಾರ್ಕ್ ಬಂದಂತೆ. ಮೈಸೂರಿಗೆ ಟೆಕ್ಸ್‌ಟೈಲ್ ಪಾರ್ಕ್ ಬರಬೇಕು. ಹೆಚ್ಚಿದ ಜನಸಂಖ್ಯೆಯ ಒತ್ತಡದಿಂದ ಹಳ್ಳಿಗಳಿಂದ ಮೊದಲ್ಗೊಂಡು ಮೈಸೂರಿನ ಕಡೆಗೆ ಜನರ ವಲಸೆ ಶುರುವಾಗಿದೆ. ಮಾರ್ವಾಡಿಗಳು, ರಾಜಸ್ಥಾನಿಗಳು, ಬಿಹಾರಿಗಳು, ವ್ಯಾಪಾರದ ಉದ್ದೇಶದಿಂದ ಇಲ್ಲಿಗೆ ಬಂದವರು ಇಲ್ಲೇ ನೆಲೆಯೂರಿ ಎಲ್ಲ ಕಡೆ ವ್ಯಾಪಿಸಿದ್ದಾರೆ. ಸ್ಥಳೀಯರ ಕೈಗೆ ನಿವೇಶನಗಳು ಗಗನಕುಸುಮವಾಗಿವೆ. ಶಾಲಾ–ಕಾಲೇಜುಗಳಲ್ಲಿ ಸೀಟಿಲ್ಲ. ಕೈಗಾರಿಕೆಯ ಅಭಿವೃದ್ಧಿ ಹೆಸರಲ್ಲಿ ಪಡೆದುಕೊಂಡ ದೊಡ್ಡ ದೊಡ್ಡ ನಿವೇಶನಗಳು ನಿಯೋಜಿತ ಕಾರ್ಯಕ್ಕೆ ಬಳಕೆಯಾಗುತ್ತಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರದ ಗ್ರೇಟರ್ ಮೈಸೂರು– 2030ರ ನಿರೀಕ್ಷೆಗಳು ಫಲಪ್ರದವಾಗಬೇಕು. ಕಾಂಕ್ರೀಟ್ ಕಟ್ಟಡಗಳ ಐಷಾರಾಮಿ ನಿರ್ಮಾಣಗಳು ಮೈಸೂರನ್ನು ಬದಲಿಸಿವೆ. ಇಲ್ಲಿರುವ ಖಾಲಿ ನಿವೇಶನಗಳಲ್ಲಿ ಅರ್ಧದಷ್ಟು ಹೊರ ಊರಿನವರದು. ಮುಂದೆ ಮೈಸೂರು ಬೆಳೆಯುತ್ತದೆ, ಯಾವುದಕ್ಕೂ ಮೈಸೂರಿನಲ್ಲೊಂದು ಪ್ರಾಪರ್ಟಿ ಇರಲಿ, ಎಂಬ ಲೆಕ್ಕಾಚಾರದಲ್ಲಿಯೇ ನಿವೇಶನ ತೆಗೆದಿಟ್ಟ ಮಂದಿ ಮೈಸೂರಿನ ಬಗ್ಗೆ ಒಂದು ಆಸಕ್ತಿ ಇಟ್ಟುಕೊಂಡೇ ಆಸ್ತಿ ಮಾಡಿದ್ದಾರೆ. ಸಮಸ್ಯೆಗಳಿಲ್ಲದ ನಗರ, ಪಟ್ಟಣಗಳು ಎಲ್ಲಿವೆ ಹೇಳಿ? 'ನಿವೃತ್ತರ ಸ್ವರ್ಗಕ್ಕೆ' ಜೀವಂತಿಕೆ ತರುವಂತೆ, ಸಣ್ಣ ಸಣ್ಣ ಉದ್ಯೋಗಗಳಲ್ಲಿದ್ದುಕೊಂಡು ಜೀವನ ಮಾಡುತ್ತಿರುವವರು, ಚಿಕ್ಕ ಚಿಕ್ಕ ವೃತ್ತಿಗಳಿಂದ ಬದುಕುತ್ತಿರುವವರು, ಕಷ್ಟಪಟ್ಟು ಸಾಲಸೋಲ ಮಾಡಿ ಒಂದು ಮನೆ ಕಟ್ಟಿಕೊಂಡ ಮಧ್ಯಮ ವರ್ಗದವರು, ಭೂಮಿ ಮಾರಿಕೊಂಡು ಹಳ್ಳಿ ಬಿಟ್ಟು ಇಲ್ಲಿಗೆ ಬಂದು ಮಕ್ಕಳನ್ನು ಓದಿಸುತ್ತಿರುವವರು, ಕಡ್ಲೇಕಾಯಿ ಮಾರುತ್ತಲೇ ಮರಗಾಲು ಕುಣಿತವನ್ನು ಬೆರಗುಗಣ್ಣಿನಿಂದ ನೋಡುತ್ತಾ ನಾನೂ ದಸರಾ ನೋಡಿದೆ ಅಂತ ಎದೆ ತಟ್ಟಿಕೊಳ್ಳುವ ಕಡ್ಲೆಕಾಯಿ ಮಾರುವ ಹುಡುಗನಿಂದ ಹಿಡಿದು ಬಂಗಲೆಗಳಲ್ಲಿ ಬಾಳುತ್ತಿರುವವರವರೆಗೆ ಎಲ್ಲರಿಗೂ ಇಲ್ಲಿ ವಾಸಕ್ಕೆ ಬೇರೆ ಬೇರೆ ಸೂರುಗಳಿವೆ. ಆದರೆ ಊರು ಮಾತ್ರ ಒಂದೇ ಅದು ಮೈಸೂರು. ಇಷ್ಟೆಲ್ಲದರ ನಡುವೆಯೂ ನಾಲಿಗೆಗೆ ಮೈಸೂರು ಪಾಕು. ತೃಪ್ತಿಗೆ ಮೈಸೂರು ಸಾಕು.

ಶತಮಾನಗಳ ಸಂಭ್ರಮವನ್ನೂ ಆಚರಿಸಿಕೊಂಡ ಗಂಗೋತ್ರಿಗೆ, ಕನ್ನಡ ಸಾಹಿತ್ಯ ಪರಿಷತ್‌ಗೆ, ಮೈಸೂರು ರೇಷ್ಮೆಗೆ, ಹೀಗೆ ನೂರು ತುಂಬಿದ ಅನೇಕ ವಿಷಯಗಳು ಇಲ್ಲಿವೆ. ನಾನೂರು ತುಂಬಿದ ರಾಜಪಥದ ಟಾಂಗಾ ಗಾಡಿಗೆ ವೀರನಗೆರೆ ಬದನೆಗೆ, ಮೈಸೂರು ಮಲ್ಲಿಗೆಗೆ, ಮೈಸೂರು ಪೇಟಕ್ಕೆ, ಕುಸ್ತಿಯ ಆಟಕ್ಕೆ, ವಿಚಾರವಂತರ ಅಗ್ರಹಕ್ಕೆ ಆಚಾರವಂತರ ಬಿನ್ನಹಕ್ಕೆ ಸಾಕ್ಷಿಯಾಗಿ, ಪರಂಪರೆಯೊಂದಿಗೆ ಬದುಕಿ ಬಿಡೋಣ ಏನಂತೀರಿ?


ಬದಲಾವಣೆ ಎಲ್ಲಿಂದ...!!!

ಪ್ರಯಾಣಿಕನೊಬ್ಬ ಬಸ್ಸಿಗಾಗಿ ನಿಲ್ದಾಣದಲ್ಲಿ ಕಾಯುತ್ತಿರುತ್ತಾನೆ. ಅರ್ಧಗಂಟೆ ಲೇಟಾಗಿ ಬಂದ ಬಸ್ಸು ಎಂದಿನಂತೆ ನಿಲ್ದಾಣದಲ್ಲಿ ನಿಲ್ಲದೆ ಸುಮಾರು ದೂರ ಹೋಗಿ ನಿಲ್ಲುತ್ತದೆ. ಬಸ್ಸು ಹತ್ತಲು ಓಡಿದ ಪ್ರಯಾಣಿಕ ಇನ್ನೇನು ಬಸ್ಸು ಹತ್ತಬೇಕೆನ್ನುವಷ್ಟರಲ್ಲಿ ಮುಂದೆ ಚಲಿಸುತ್ತದೆ. ಈತ ಬಸ್ಸಿನ ಬಾಗಿಲ ಕಂಬಿ ಹಿಡಿದವನು ಕೈಜಾರಿ ಧುಪ್ಪನೆ ಕೆಳಗೆ ಬೀಳುತ್ತಾನೆ. ಕಾಲಿಗೆ ಬಲವಾದ ಪೆಟ್ಟಾಗುತ್ತದೆ. ಡ್ರೈವರ್ ಅನ್ನು ಶಪಿಸುತ್ತಾ ಮತ್ತೆ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿರುತ್ತಾನೆ.

ಅದೇ ಬಸ್ಸಿನ ಡ್ರೈವರ್ ತನ್ನ ಮಗನನ್ನು ಸೇರಿಸಲು ಒಂದು ಖಾಸಗಿ ಶಾಲೆಗೆ ಹೋಗುತ್ತಾನೆ. ಅಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಿ ಹಿಂಸಿಸಿದ ಪ್ರಿನ್ಸಿಪಾಲರು ಕೊನೆಗೆ ಹೆಚ್ಚಿನ ಡೊನೇಷನ್ ಕಟ್ಟಿಸಿಕೊಂಡು ಶಾಲೆಗೆ ಸೇರಿಸಿಕೊಳ್ಳುತ್ತಾರೆ. ಪ್ರವೇಶ ಪ್ರಕ್ರಿಯೆ ಮುಗಿಸಿ ಹೊರಬಂದ ಡ್ರೈವರ್ ಸುಲಿಗೆ ಮಾಡಿದ್ದಕ್ಕಾಗಿ ಶಾಲೆಯನ್ನು ಬಯ್ಯುತ್ತಾ ಮನೆ ಕಡೆ ಹೊರಡುತ್ತಾನೆ.

ಅದೇ ಶಾಲೆಯ ಪ್ರಿನ್ಸಿಪಾಲರು ಜ್ವರದ ಕಾರಣಕ್ಕಾಗಿ ಒಂದು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಆಸ್ಪತ್ರೆಯ ಸಿಬ್ಬಂದಿ ಅನೇಕ ಪರೀಕ್ಷೆ ಮಾಡಿ, ತಜ್ಞ ವೈದ್ಯರ ಸಂಪರ್ಕ ಮಾಡಿಸಿ, ಏನೂ ತೊಂದರೆ ಇಲ್ಲ ಎಂದು ಹೇಳಿ ದೊಡ್ಡ ಮೊತ್ತದ ಹಣ ಕಟ್ಟಿಸಿಕೊಂಡು ಕಳಿಸುತ್ತಾರೆ. ಆ ಪ್ರಿನ್ಸಿಪಾಲರು ಅನವಶ್ಯಕವಾಗಿ ದುಬಾರಿ ಹಣ ತೆತ್ತಿದ್ದಕ್ಕಾಗಿ ಆಸ್ಪತ್ರೆಯನ್ನು ಶಪಿಸುತ್ತಾ ಶಾಲೆಯ ಕಡೆ ಹೊರಡುತ್ತಾರೆ.

ಅದೇ ಆಸ್ಪತ್ರೆಯ ಡಾಕ್ಟರ್ ತಮ್ಮ ಒಂದು ಹೊಸ ಮನೆಯ ರಿಜಿಸ್ಟ್ರೇಷನ್‌ಗಾಗಿ ಸಬ್ ರಿಜಿಸ್ಟರ್ ಆಫೀಸಿಗೆ ಬರುತ್ತಾರೆ. ಬೆಳಗಿನಿಂದ ಸಂಜೆವರೆಗೂ ಕಾದು ಸಾವಿರಾರು ರೂಪಾಯಿ ಲಂಚ, ಕಮಿಷನ್ ಕೊಟ್ಟು, ಇಡೀ ದಿನ ಸಮಯ ವ್ಯರ್ಥ ಮಾಡಿಕೊಂಡು ಕೊನೆಗೆ ರಿಜಿಸ್ಟ್ರೇಷನ್ ಮುಗಿಸಿ ಆಚೆ ಬರುವಾಗ ಮನಸ್ಸಿನಲ್ಲೇ ಸಬ್ ರಿಜಿಸ್ಟ್ರಾರ್ ಅನ್ನು ಬಾಯಿಗೆ ಬಂದಂತೆ ಬಯ್ಯುತ್ತಾ ಆಸ್ಪತ್ರೆಯ ಕಡೆ ಹೊರಡುತ್ತಾನೆ.



ಅದೇ ಸಬ್ ರಿಜಿಸ್ಟ್ರಾರ್ ಒಂದು ಮನೆ ಕಟ್ಟಿಸುತ್ತಿರುತ್ತಾನೆ. ಆ ಜಾಗದ ಬಗ್ಗೆ ಗಲಾಟೆಯಾಗಿ ರೌಡಿಗಳ ಪ್ರವೇಶವಾಗಿ ತೀವ್ರ ರೀತಿಯ ಕಿರಿಕಿರಿ ಆಗುತ್ತಿರುತ್ತದೆ. ಆ ಬಗ್ಗೆ ಪೊಲೀಸ್ ಸ್ಟೇಷನ್‌ನಲ್ಲಿ ದೂರು ದಾಖಲಿಸಿ, Sub Registrar ಆ ಜಾಗವನ್ನು ಮತ್ತೆ ತನ್ನ ತೆಕ್ಕೆಗೆ ತೆಗೆದುಕೊಂಡು ರೌಡಿಗಳನ್ನು ಹೊರಹಾಕಿ ಸಮಸ್ಯೆ ಪರಿಹರಿಸಿಕೊಳ್ಳಲು ಪೊಲೀಸ್ ಅಧಿಕಾರಿಗೆ ಅಪಾರ ಲಂಚ ಕೊಟ್ಟು ಹೈರಾಣಾಗುತ್ತಾನೆ. ಕೊನೆಗೆ ಹೇಗೋ ಸಮಸ್ಯೆ ಬಗೆಹರಿಸಿಕೊಂಡು ತನ್ನ ಬಳಿಯೇ ಲಂಚ ತಿಂದಿದ್ದಕ್ಕೆ ಪೊಲೀಸರಿಗೆ ಹಿಡಿಶಾಪ ಹಾಕುತ್ತಾ ಕಚೇರಿ ಕಡೆ ಹೊರಡುತ್ತಾನೆ.

ಅದೇ ಪೊಲೀಸ್ ಅಧಿಕಾರಿಯ ಮಗ ಪೋಲಿ ಬಿದ್ದು, ಯಾವುದೋ ಡ್ರಗ್ ಕೇಸಲ್ಲಿ ಸಿಕ್ಕಿ ಬೀಳುತ್ತಾನೆ. ಅವನನ್ನು ಬಿಡಿಸಿಕೊಳ್ಳಲು ಪ್ರಖ್ಯಾತ ಕ್ರಿಮಿನಲ್ ಲಾಯರ್ ಸಂಪರ್ಕ ಮಾಡುವ ಅಧಿಕಾರಿ ಅಪಾರ ದುಡ್ಡು ತನ್ನ contacts ಉಪಯೋಗ ಮಾಡಿ ಕೊನೆಗೆ ಹೇಗೋ ಜಾಮೀನಿನ ಮೇಲೆ ಮಗನನ್ನು ಬಿಡಿಸಿಕೊಳ್ಳುತ್ತಾನೆ. ಈ ಅಧಿಕಾರಿ ಬಗ್ಗೆ ಗೊತ್ತಿದ್ದ ಲಾಯರ್ ದೊಡ್ಡ ಮೊತ್ತದ ಹಣ ಕೀಳುತ್ತಾನೆ. ಮಗನನ್ನು ಕೋರ್ಟಿನಿಂದ ಕರೆದುಕೊಂಡು ಸ್ಟೇಷನ್ ಕಡೆ ಹೊರಡುವ ಅಧಿಕಾರಿ ತನ್ನ ಬಳಿಯೇ ಅಪಾರ ಹಣ ಕಿತ್ತ ಲಾಯರ್ ಅನ್ನು ಶಪಿಸುತ್ತಾನೆ.

ಇದೇ ಲಾಯರ್ ಸರ್ಕಾರದ ಯಾವುದೋ ಬೋರ್ಡ್‌ನ ಛೇರ್ಮನ್ ಆಗಲು ಪರಿಚಿತ ರಾಜಕಾರಣಿಯ ಬಳಿ ಬರುತ್ತಾನೆ. ಆತ ದೆಹಲಿ, ಹೈಕಮಾಂಡ್, ಅದು–ಇದು ಎಂದು ಸುತ್ತಾಡಿಸಿ ಚೆನ್ನಾಗಿ ದುಡ್ಡು ಕಿತ್ತು ಕೊನೆಗೆ ಒಂದು ಕೆಲಸಕ್ಕೆ ಬಾರದ ಬೋರ್ಡ್ ಸದಸ್ಯತ್ವ ಕೊಡಿಸುತ್ತಾನೆ. ಅಧಿಕಾರ ಸಿಕ್ಕರೂ ಅಪಾರ ಹಣ ತೆತ್ತಿದ್ದಕ್ಕಾಗಿ ಲಾಯರ್ ರಾಜಕಾರಣಿಯನ್ನು ಶಪಿಸುತ್ತಲೇ ಇರುತ್ತಾನೆ. ಇದೇ ರಾಜಕಾರಣಿ ಅಪಾರ ಹಣ ಖರ್ಚು ಮಾಡಿ ಪಕ್ಷದ ಟಿಕೆಟ್ ಗಿಟ್ಟಿಸುವಾಗ ಹೈರಾಣಾಗುತ್ತಾನೆ. ಕೊನೆಗೆ ಒಂದು ಕ್ಷೇತ್ರದ ಟಿಕೆಟ್ ಗಿಟ್ಟಿಸಿ ಚುನಾವಣೆಗೂ ನಿಲ್ಲುತ್ತಾನೆ. ಜನರ ಬಳಿ ಮತಯಾಚನೆಗೆ ಹೋಗುತ್ತಾನೆ. ಆ ಮತದಾರರು ಸಹಜವಾಗಿ ಎಂದಿನಂತೆ ಯಾವ ಪಕ್ಷದವರು ಹೆಚ್ಚು ಹಣ ಕೊಡುತ್ತಾರೋ ಅವರಿಗೆ ನಮ್ಮ ಓಟು ಎನ್ನುತ್ತಾರೆ. ಕೊನೆಗೆ ಈ ರಾಜಕಾರಣಿ ಮತದಾರರಿಗೆ ಅಪಾರ ಹಣ ಕೊಡುತ್ತಾನೆ. ಮನಸ್ಸಿನಲ್ಲಿ ಮತದಾರರನ್ನು ಶಪಿಸುತ್ತಾನೆ. ಅದೇ ಮತದಾರ ಆದೇ ರಾಜಕಾರಣಿಯಿಂದ ಪಡೆದ ಹಣದೊಂದಿಗೆ ತಾನು ಬ್ಯಾಂಕ್‌ನಿಂದ ಪಡೆದ ಸಾಲದ ಕಂತು ತುಂಬಲು ಬಸ್ ನಿಲ್ದಾಣದಲ್ಲಿ ಕಾಯುತ್ತಾ ಈಗ ಗಾಯಗೊಂಡು ನಿಂತಿರುವ ಪ್ರಯಾಣಿಕ. ಆ ಪ್ರಯಾಣಿಕ ಬೇರೆ ಯಾರೂ ಅಲ್ಲಾ.....ಆ ಮೂರ್ಖರು ನಾವೇ......... ಬದಲಾವಣೆ ಎಲ್ಲಿಂದ ಪ್ರಾರಂಭಿಸುವುದು. ಯೋಚಿಸುತ್ತಲೇ ಇದ್ದೇನೆ..... ನೀವು ಒಮ್ಮೆ ಯೋಚಿಸಿ ನೋಡಿ!!

– ವಾಟ್ಸಾಪ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಳೆಗಟ್ಟುತ್ತಿರುವ ದಸರಾ; ಎಲ್ಲಾ ಕಾರ್ಯಕ್ರಮಗಳಲ್ಲೂ ಜನವೋ ಜನ

● ಮೈಸೂರಿನತ್ತ ಮುಖ ಮಾಡಿರುವ ಪ್ರವಾಸಿಗರು ● ದಿನಕಳೆದಂತೆ ಹೆಚ್ಚುತ್ತಿದೆ ವಾಹನ ದಟ್ಟಣೆ





ಮೈಸೂರು,ಅ.16(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಮೊದಲ ದಿನದ ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮೃಗಾಲಯ, ಫಲಪುಷ್ಪ ಪ್ರದರ್ಶನ, ವಸ್ತು ಪ್ರದರ್ಶನ, ಆಹಾರ ಮೇಳವನ್ನು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಿಸಿದ್ದಾರೆ.

ವಿದ್ಯುತ್ ದೀಪಾಲಂಕಾರದಿಂದ ನವವಧುವಿನಂತೆ ಕಂಗೊಳಿಸುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು, ಇದರೊಂದಿಗೆ ಸ್ಥಳೀಯರು ಕುಟುಂಬ ಸದಸ್ಯರೊಂದಿಗೆ ದೀಪಾಲಂಕಾರ ವೀಕ್ಷಣೆಗೆ ಆಗಮಿಸುತ್ತಿರುವುದರಿಂದ ಸಂಜೆ ವೇಳೆ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ನವರಾತ್ರಿ ಮೊದಲ ದಿನ ನಡೆದ ಬಹುತೇಕ ಎಲ್ಲಾ ಕಾರ್ಯಕ್ರಮಗಳಿಗೂ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಎಲ್ಲಾ ಕಾರ್ಯಕ್ರಮದಲ್ಲೂ ಜನಜಂಗುಳಿ ಹೆಚ್ಚಾಗಿರುವುದು ಕಂಡು ಬಂದಿತು.

ದಸರಾ ಫಲಪುಷ್ಪ ಪ್ರದರ್ಶನಕ್ಕೆ ಮೊದಲ ದಿನವೇ 27,500 ಮಂದಿ ಭೇಟಿ ನೀಡಿದ್ದಾರೆ. ಹೂವುಗಳಿಂದ ತಲೆ ಎತ್ತಿರುವ ವಿವಿಧ ಆಕೃತಿ ವೀಕ್ಷಣೆಗೆ ಹಾಗೂ ಗಾಜಿನ ಮನೆಯಲ್ಲಿ ಹೂವಿನಿಂದಲೇ ನಿರ್ಮಾಣವಾಗಿರುವ ಚಂದ್ರಯಾನ–3 ಕಣ್ತುಂಬಿಕೊಳ್ಳಲು ಜನ ಫಲಪುಷ್ಪ ಪ್ರದರ್ಶನಕ್ಕೆ ತಂಡೋಪತಂಡವಾಗಿ ಆಗಮಿಸುತ್ತಿದ್ದು, ಅಲ್ಲಿರುವ ಆಟಿಕೆಗಳಲ್ಲಿ ಮಕ್ಕಳ ಆಟ ಆಡಿಸಿ ಸಂಭ್ರಮಿಸುವುದರೊಂದಿಗೆ ಆಹಾರ ಮಳಿಗೆಗಳಲ್ಲಿ ರುಚಿಕರವಾದ ತಿನಿಸು ಸವಿಯಲು ಫಲಪುಷ್ಪ ಪ್ರದರ್ಶನಕ್ಕೆ ಆಗಮಿಸುತ್ತಿದ್ದಾರೆ. ಪ್ರತಿದಿನ ಬೆಳಗ್ಗೆ 9ರಿಂದ ರಾತ್ರಿ 9.30ರವರೆಗೂ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡಬಹುದಾಗಿದ್ದು, ವಯಸ್ಕರಿಗೆ 40 ರೂ, ಮಕ್ಕಳಿಗೆ 20 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ.

ಪ್ರವಾಸಿಗರ ನಿರೀಕ್ಷೆಯಲ್ಲಿದ್ದೇವೆ

"ದಸರಾ ಮಹೋತ್ಸವ ಅಂಗವಾಗಿ ಮೈಸೂರಿಗೆ ಆಗಮಿಸುತ್ತಿರುವ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿದೆ. ನಿನ್ನೆವರೆಗೂ ಮೈಸೂರಿನ ವಸತಿ ಗೃಹಗಳಲ್ಲಿ ಶೇ.30ರಷ್ಟು ರೂಮ್ ಬುಕ್ ಆಗಿವೆ. ಕೆಲವೆಡೆ ಶಾಲಾ–ಕಾಲೇಜಿಗೆ ಈಗಷ್ಟೆ ರಜೆ ನೀಡಿರುವುದರಿಂದ ಮಂಗಳವಾರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಾರೆಂಬ ನಿರೀಕ್ಷೆ ಇದೆ. ರಾಜ್ಯ ಸರ್ಕಾರ ಅಕ್ಟೋಬರ್ 16ರಿಂದ 24ರವರೆಗೆ ಮೈಸೂರು, ಶ್ರೀರಂಗಪಟ್ಟಣ, ಕೆಆರ್‌ಎಸ್ ವೀಕ್ಷಣೆಗೆ ಬರುವ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡಿರುವುದು ಶ್ಲಾಘನೀಯ. ಇದರಿಂದ ಹೊರ ರಾಜ್ಯದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸುವ ನಿರೀಕ್ಷೆ ಇದೆ.

–ಸಿ.ನಾರಾಯಣಗೌಡ, ಅಧ್ಯಕ್ಷ, ಹೋಟೆಲ್ ಮಾಲೀಕರ ಸಂಘ

ಮೈಸೂರಿನ ಮೃಗಾಲಯಕ್ಕೂ ಪ್ರವಾಸಿಗರ ದಂಡು ಆಗಮಿಸುತ್ತಿದ್ದು, ಭಾನುವಾರ ಮೃಗಾಲಯಕ್ಕೆ 16,600, ಕಾರಂಜಿಕೆರೆಗೆ 2534 ಮಂದಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ದೇಶದಲ್ಲೇ ಮುಂಚೂಣಿ ಮೃಗಾಲಯಗಳಲ್ಲಿ ಅಗ್ರಸ್ಥಾನ ಪಡೆದಿರುವ ಮೈಸೂರು ಮೃಗಾಲಯದಲ್ಲಿ ವಿದೇಶಿ ಪ್ರಾಣಿ ಮಾತ್ರವಲ್ಲದೆ, ಅಳಿವಿನಂಚಿನಲ್ಲಿರುವ ಅನೇಕ ಪ್ರಾಣಿ–ಪಕ್ಷಿಗಳನ್ನು ಪಾಲನೆ ಮಾಡುತ್ತಿರುವುದರಿಂದ ಪ್ರವಾಸಿಗರು ಮೃಗಾಲಯಕ್ಕೆ ಭೇಟಿ ನೀಡಲು ಮುಂದಾಗುತ್ತಿದ್ದಾರೆ. ನವರಾತ್ರಿ ವೇಳೆ ಮೈಸೂರಿಗೆ ಬರುವ ಬಹುತೇಕ ಪ್ರವಾಸಿಗರು ಮೃಗಾಲಯ ವೀಕ್ಷಣೆಗೆ ಮುಂದಾಗುತ್ತಿರುವುದರಿಂದ ಮೊದಲ ದಿನ ಉತ್ತಮವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ.

ದಸರಾ ಮಹೋತ್ಸವದ ಕಾರ್ಯಕ್ರಮಗಳಲ್ಲಿ ಸುದೀರ್ಘ ಅವಧಿಯ ಕಾರ್ಯಕ್ರಮವಾದ ದಸರಾ ವಸ್ತು ಪ್ರದರ್ಶನಕ್ಕೆ ನವರಾತ್ರಿ ಮೊದಲ ದಿನ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ಮಧ್ಯಾಹ್ನ 3ರಿಂದ ರಾತ್ರಿ 9.30ರವರೆಗೂ ವಸ್ತುಪ್ರದರ್ಶನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದ್ದು, ಭಾನುವಾರ 18 ಸಾವಿರ ಪ್ರವಾಸಿಗರು ದಸರಾ ವಸ್ತು ಪ್ರದರ್ಶನ ವೀಕ್ಷಿಸಿದ್ದಾರೆ. ಮೈಸೂರು ಅರಮನೆಯಲ್ಲಿ ರಾಜವಂಶಸ್ಥರಿಂದ ಖಾಸಗಿ ದರ್ಬಾರ್ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಭಾನುವಾರ ಅರಮನೆ ವೀಕ್ಷಣೆಗೆ ಪ್ರವಾಸಿಗರಿಗೆ ನಿರ್ಬಂಧ ಹೇರಲಾಗಿತ್ತು. ಇದರಿಂದ ಅರಮನೆಗೆ ನವರಾತ್ರಿ ಮೊದಲ ದಿನ ಭೇಟಿ ನೀಡಿದರ ಸಂಖ್ಯೆ ಶೂನ್ಯವಿದೆ.

ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತ ಕೆ.ಬಿ.ಗಣಪತಿ ಅವರಿಗೆ ಎಂಡಿಜೆಎ ಅಭಿನಂದನೆ

ಮೈಸೂರು,ಅ.16(ಆರ್‌ಕೆ)– ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ (ಕೆಬಿಜಿ) ಅವರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ (ಎಂಡಿಜೆಎ)ವು ಅಭಿನಂದಿಸಿದೆ.



ಕೆ.ಬಿ. ಗಣಪತಿ

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ಮೈಸೂರಿನ ಪತ್ರಿಕೋದ್ಯಮದಲ್ಲಿ ದಿಗ್ಗಜರೆನಿಸಿಕೊಂಡಿರುವ ಕೆಬಿಜಿ ಅವರು, 5 ದಶಕಗಳ ಕಾಲ ಸೇವೆ ಸಲ್ಲಿಸಿ ಪತ್ರಿಕಾ ರಂಗ ಹಾಗೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಘನತೆಯನ್ನು ಮೇಲೆತ್ತಿಕ್ಕೊಂಡೊಯ್ದಿದ್ದಾರೆ ಎಂದು ತಿಳಿಸಿದ್ದಾರೆ.

ಶ್ರೀಯುತರ ಗಣನೀಯ ಸೇವಾ ಸಾಧನೆಯನ್ನು ಪರಿಗಣಿಸಿ ಇದೇ ಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾನಿಲಯವು ಹಿರಿಯ ಪತ್ರಕರ್ತರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಅದಕ್ಕಾಗಿ ಎಲ್ಲಾ ಗೌರವಾನ್ವಿತ ಸದಸ್ಯರ ಪರವಾಗಿ ವಿಶ್ವವಿದ್ಯಾನಿಲಯದ ಕುಲಪತಿಗಳು, ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿ ಸದಸ್ಯರು, ಘನತೆವೆತ್ತ ರಾಜ್ಯಪಾಲರು ಹಾಗೂ ಉನ್ನತ ಶಿಕ್ಷಣ ಇಲಾಖೆಗೆ ಸಂಘವು ಕೃತಜ್ಞತೆ ಸಲ್ಲಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅದೇ ರೀತಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ಮೈಸೂರಿನವರೇ ಆದ ಅಂತರರಾಷ್ಟ್ರೀಯ ಖ್ಯಾತಿಯ ಮಾಜಿ ಕ್ರಿಕೆಟ್ ತಾರೆ ಜಾವಗಲ್ ಶ್ರೀನಾಥ್ ಅವರನ್ನೂ ಎಂಡಿಜೆಎ ಅಭಿನಂದಿಸಿದೆ.

ಹೋಟೆಲ್ ಮಾಲೀಕರು: ಹೋಟೆಲ್ ಮಾಲೀಕರ ಸಂಘ, ಪತ್ತಿನ ಸಹಕಾರ ಸಂಘ ಹಾಗೂ ದತ್ತಿ ಅಧ್ಯಕ್ಷರಾದ ಸಿ.ನಾರಾಯಣಗೌಡ, ನಾರಾಯಣ ವಿ.ಹೆಗಡೆ ಮತ್ತು ರವಿಶಾಸ್ತ್ರಿ ಸಹ ಕೆ.ಬಿ.ಗಣಪತಿ ಮತ್ತು ಜಾವಗಲ್ ಶ್ರೀನಾಥ್ ಅವರನ್ನು ಸಂಘಗಳ ಸದಸ್ಯರ ಪರವಾಗಿ ಅಭಿನಂದಿಸಿದ್ದಾರೆ.

ಹೆಚ್.ಡಿ.ದೇವೇಗೌಡ, ಎಸ್.ಸೋಮನಾಥ್‌ಗೆ ಬೆಂಗಳೂರು ವಿವಿಯಿಂದ ಗೌರವ ಡಾಕ್ಟರೇಟ್





ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 58ನೇ ವಾರ್ಷಿಕ ಘಟಿಕೋತ್ಸವವು ಮಂಗಳವಾರ ನಡೆಯಲಿದ್ದು, ಈ ಬಾರಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಇಸ್ರೋ ಅಧ್ಯಕ್ಷ ಹಾಗೂ ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆ ಕಾರ್ಯದರ್ಶಿ ಎಸ್.ಸೋಮನಾಥ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ ತಿಳಿಸಿದರು.

ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ನಾಳೆ ಬೆಳಗ್ಗೆ 10.30ಕ್ಕೆ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ವಿಶ್ವವಿದ್ಯಾಲಯದ ಕುಲಾಧಿಪತಿ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಭಾಗವಹಿಸಲಿದ್ದಾರೆ. ಯುವ ಉದ್ಯಮಿ, ಝಿರೋದಾ ಸಂಸ್ಥೆಯ ಸಹ ಸಂಸ್ಥಾಪಕ ನಿಖಿಲ್ ಕಾಮತ್ ಹಾಗೂ ಪ್ರಮುಖರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಅ.19ಕ್ಕೆ ಪಾರಂಪರಿಕ ಸೈಕಲ್, ಅ.20ಕ್ಕೆ ಪಾರಂಪರಿಕ ಟಾಂಗಾ ಸವಾರಿ

ಮೈಸೂರು,ಅ.16(ಎಂಕೆ)– ಮೈಸೂರು ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ಅ.19ರಂದು 'ಪಾರಂಪರಿಕ ಸೈಕಲ್ ಸವಾರಿ(ಟ್ರಿಣ್ ಟ್ರಿಣ್'), ಅ.20ರಂದು ಪಾರಂಪರಿಕ ಟಾಂಗಾ ಸವಾರಿ ಹಾಗೂ ಅ.21ರಂದು ಪಾರಂಪರಿಕ ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪಾರಂಪರಿಕ ಸೈಕಲ್ ಸವಾರಿ ಕಾರ್ಯಕ್ರಮವು ಅ.19ರಂದು ಟೌನ್‌ನಿಂದ ಆರಂಭವಾಗಲಿದ್ದು, 15ರಿಂದ 50 ವರ್ಷದೊಳಗಿನ ವಿದ್ಯಾರ್ಥಿಗಳು, ಪುರುಷರು ಹಾಗೂ ಮಹಿಳೆಯರು ಭಾಗವಹಿಸಬಹುದು. ಮೊದಲು ನೋಂದಣಿ ಮಾಡಿಕೊಂಡ 100 ಜನರಿಗೆ ಮಾತ್ರ ಭಾಗವಹಿಸುವ ಅವಕಾಶ ದೊರೆಯಲಿದೆ. ಅ.20ರಂದು ಸಂಜೆ 7 ಗಂಟೆಗೆ ಪಾರಂಪರಿಕ ಟಾಂಗಾ ಸವಾರಿ ನಡೆಯಲಿದ್ದು, 25ರಿಂದ 50 ವರ್ಷದೊಳಗಿನ ದಂಪತಿಗಳು ಭಾಗವಹಿಸಬಹುದು. ಮೊದಲು ನೋಂದಣಿ ಮಾಡಿಸಿದ 50 ದಂಪತಿಗಳಿಗೆ ಅವಕಾಶ ನೀಡಲಾಗುವುದು. ಹಾಗೆಯೇ ಅ.21ರಂದು ಬೆಳಗ್ಗೆ 7 ಗಂಟೆಗೆ ನಡೆಯುವ ಪಾರಂಪರಿಕ ನಡಿಗೆ ಕಾರ್ಯಕ್ರಮದಲ್ಲಿ 18ರಿಂದ 50 ವರ್ಷದೊಳಗಿನ ವಿದ್ಯಾರ್ಥಿಗಳು, ಪುರುಷರು ಹಾಗೂ ಮಹಿಳೆಯರು ಭಾಗವಹಿಸಬಹುದು. ಮೊದಲು ನೋಂದಣಿ ಮಾಡಿಸಿದ 100 ಜನರಿಗೆ ಮಾತ್ರ ಅವಕಾಶ. ವಸ್ತುಪ್ರದರ್ಶನ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಗೆ ನೇರವಾಗಿ, ದೂರವಾಣಿ ಮೂಲಕ ಹಾಗೂ ಇ–ಮೇಲ್ commr_amh@jahoo.in & ddheritagemysore@gamil.com ಮೂಲಕ ಹೆಸರುಗಳನ್ನು ನೋಂದಣಿ ಮಾಡಿಕೊಳ್ಳುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಕೊಲ್ಲಾಪುರದಮ್ಮ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ, ನೂತನ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡ ನಗರಪಾಲಿಕೆ ಸದಸ್ಯ ಜೆ.ಗೋಪಿ, ಕೊಲ್ಲಾಪುರದಮ್ಮ ದೇವಸ್ಥಾನ ಸಮಿತಿಯ ಅಧ್ಯಕ್ಷ ನಾಗಣ್ಣ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ರಾಜ್ಯ ಉಪಾಧ್ಯಕ್ಷ ಚಂದ್ರಕುಮಾರ್, ಜಿಲ್ಲಾಧ್ಯಕ್ಷ ದೊಳ್ಳೇಗೌಡ, ಕಾರ್ಯಾಧ್ಯಕ್ಷ ಎಂ.ಎನ್.ನವೀನ್‌ಕುಮಾರ್, ಉಪಾಧ್ಯಕ್ಷರಾದ ರಾಮಕೃಷ್ಣ ಮತ್ತು ತಮ್ಮಣ್ಣ, ಪ್ರಧಾನ ಕಾರ್ಯದರ್ಶಿ ಪವನ್ ಸಿದ್ದರಾಮು, ಸಾಮಾಜಿಕ ಜಾಲತಾಣದ ಅಧ್ಯಕ್ಷ ಮದನ್, ಕಾರ್ಯದರ್ಶಿ ಮರಿಯಪ್ಪ, ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರಾದ ಅಭಿ, ಯುವ ಘಟಕದ ಪದಾಧಿಕಾರಿಗಳಾದ ಬೀರಪ್ಪ, ವಿವನ್, ಮುಖಂಡರಾದ ಮಂಜುನಾಥ, ಮಹಾದೇವ, ರವಿಚಂದ್ರ, ಲೋಕೇಶ್, ಮಂಜುನಾಥ್, ಚನ್ನಯ್ಯ, ಮಹಿಳಾ ಮುಖಂಡರಾದ ಶೋಭಾ, ಶಾಂತ, ಭವ್ಯ, ರಶ್ಮಿ ಮತ್ತಿತರರು ಉಪಸ್ಥಿತರಿದ್ದರು.

ಯಮುನಾದೇವಿಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಆರ್.ಎಲ್.ಜಗದೀಶ್ ಅವರ ಮಾರ್ಗದರ್ಶನದಲ್ಲಿ ಎಸ್.ಯಮುನಾದೇವಿ ಅವರು ಪಾಲಿಮರ್ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪ್ರೊ.ಭಗವಾನ್ ವಿರುದ್ಧ ಪ್ರಕರಣ ದಾಖಲು

ಕ್ಷಮೆ ಕೇಳಲು ಒಕ್ಕಲಿಗ ಸಮುದಾಯದಿಂದ ಎರಡು ದಿನಗಳ ಗಡುವು

● ಕರ್ನಾಟಕದ 31 ಜಿಲ್ಲೆಗಳಲ್ಲೂ ಪ್ರಕರಣ ದಾಖಲು
● ಪ್ರೊ.ಭಗವಾನ್‌ಗೆ ಘೇರಾವ್ ಹಾಕಲು ತೀರ್ಮಾನ
● ಅವರ ಮನೆಗೆ ಮತ್ತಷ್ಟು ಪೊಲೀಸ್ ಭದ್ರತೆ

ಮೈಸೂರು, ಅ.16(ಬಿಎಲ್‌ಯು)– ಒಕ್ಕಲಿಗರು ಸಂಸ್ಕೃತಿಹೀನರು ಎಂಬ ಹೇಳಿಕೆ ನೀಡಿರುವ ಲೇಖಕ ಪ್ರೊ.ಕೆ.ಎಸ್. ಭಗವಾನ್ ವಿರುದ್ಧ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದವರು ಇಂದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಒಕ್ಕಲಿಗ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದರ ವಿರುದ್ಧ ಸದರಿ ಸಮಾಜದವರು ಸಿಡಿದೆದ್ದಿದ್ದಾರೆ. ಪ್ರೊ.ಭಗವಾನ್ ಮನೆಗೆ ಮುತ್ತಿಗೆ ಹಾಕಿದ ನಂತರ ಈಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿ ಪ್ರೊ.ಭಗವಾನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದವರು ಇಂದು ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ ಆಗಮಿಸಿ ಪ್ರೊ.ಭಗವಾನ್ ವಿರುದ್ಧ ದೂರು ದಾಖಲಿಸಿದರು. ದುರುದ್ದೇಶದಿಂದ ಪ್ರಚೋದನಾಕಾರಿ ಭಾಷಣ ಮಾಡುತ್ತಿರುವ ಪ್ರೊ.ಭಗವಾನ್ ಧರ್ಮ ಹಾಗೂ ಸಮುದಾಯಗಳ ನಡುವೆ ಒಡಕು ಮೂಡಿಸುತ್ತಿದ್ದಾರೆ. ಒಕ್ಕಲಿಗರು ಸಂಸ್ಕೃತಿಹೀನರು ಎಂದು ಅ.13ರಂದು ಹೇಳಿಕೆ ನೀಡಿ ಸಮುದಾಯದ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಮಾನಹಾನಿ ಹಾಗೂ ದೇಶದ್ರೋಹಿ ಪ್ರಕರಣ ದಾಖಲಿಸಬೇಕು. ಆ ಮೂಲಕ ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಶಿವಕುಮಾರ್‌ಗೆ ದೂರು ಸಲ್ಲಿಸಿದರು.



ದೂರಿನ ಅಂಶಗಳ ಬಗ್ಗೆ ಪರಿಶೀಲನೆ ಮಾಡಿ, ಮೇಲಾಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ ನಂತರ ಎಫ್‌ಐಆರ್ ದಾಖಲಿಸಬೇಕೆ ಅಥವಾ ಎನ್‌ಸಿಆರ್ ನೀಡಬೇಕೇ ಎಂಬ ಬಗ್ಗೆ ನಿರ್ಧಾರ ಮಾಡಲಾಗುವುದು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಶಿವಕುಮಾರ್ ತಿಳಿಸಿದರು.

ತರುವಾಯ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಒಕ್ಕಲಿಗ ಸಮಾಜದ ವತಿಯಿಂದ ಕರ್ನಾಟಕದ 31 ಜಿಲ್ಲೆಗಳಲ್ಲಿ ಪ್ರೊ.ಭಗವಾನ್ ವಿರುದ್ಧ ದೂರು ದಾಖಲಿಸಲಾಗುವುದು. ಇನ್ನೆರಡು ದಿನದಲ್ಲಿ ಪ್ರೊ.ಭಗವಾನ್ ಒಕ್ಕಲಿಗ ಸಮುದಾಯದ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಪ್ರೊ.ಭಗವಾನ್ ಯಾವುದೇ ಕಾರ್ಯಕ್ರಮಕ್ಕೆ ಹೋಗದಂತೆ ಘೇರಾವ್ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಒಕ್ಕಲಿಗರು ಸಂಸ್ಕೃತಿಹೀನರು ಎಂಬ ಹೇಳಿಕೆ ನೀಡಿರುವ ಪ್ರೊ.ಭಗವಾನ್ ವಿರುದ್ಧ ದಿನ ಕಳೆದಂತೆ ಪ್ರತಿಭಟನೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆ ಮೈಸೂರಿನ ಕುವೆಂಪುನಗರದಲ್ಲಿರುವ ಪ್ರೊ.ಭಗವಾನ್ ಮನೆಗೆ ಪೊಲೀಸ್ ಬಿಗಿ ಬಂದೋಬಸ್ತ್ ಅನ್ನು ಹೆಚ್ಚು ಮಾಡಲಾಗಿದೆ.

ಗೂಡ್ಸ್ ವಾಹನ ಡಿಕ್ಕಿ: ಕೂಲಿ ಕಾರ್ಮಿಕ ಸಾವು

ಹುಣಸೂರು, ಅ.16– ಗೂಡ್ಸ್ ವಾಹನ ಹಾಗೂ ಬೈಕ್ ನಡುವೆ ಮುಖಾಮುಖಿ ಡಿಕ್ಕಿಯಾಗಿ ಕೂಲಿ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಹುಣಸೂರು–ಕೆ.ಆರ್. ನಗರ ಮುಖ್ಯ ರಸ್ತೆಯ ಬಿಳಿಗೆರೆ ಸಮೀಪದ ರೈಸ್ ಮಿಲ್ ಬಳಿ ಸೋಮವಾರ ನಡೆದಿದೆ.



ನಗರದ ಕಲ್ಕುಣಿಕೆಯ ರಂಗನಾಥ ಬಡಾವಣೆಯ ಆನಂದ ಅವರ ಪುತ್ರ ಹೇಮಂತ್(26) ಮೃತಪಟ್ಟ ಯುವಕ. ಈತ ಬೈಕ್‌ನಲ್ಲಿ ಕೆ.ಆರ್.ನಗರದಿಂದ ಹುಣಸೂರಿಗೆ ಬರುತ್ತಿದ್ದಾಗ ಹುಣಸೂರಿನಿಂದ ಕಳ್ಳಿಕೊಪ್ಪಲು ಕಡೆಗೆ ಹೋಗುತ್ತಿದ್ದ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಈತನ ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತ್ಯೇಕ ಪ್ರಕರಣಗಳಲ್ಲಿ ಗೃಹಿಣಿ, ಕೂಲಿ ಕಾರ್ಮಿಕನ ಹತ್ಯೆ

ಮೈಸೂರು, ಅ. 16– ಮೈಸೂರು ನಗರದಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಗೃಹಿಣಿ ಮತ್ತು ಕೂಲಿ ಕಾರ್ಮಿಕನನ್ನು ಹತ್ಯೆ ಮಾಡಲಾಗಿದೆ.

ಟೈಲರಿಂಗ್ ವೃತ್ತಿ ಮಾಡುತ್ತಿರುವ ಗೃಹಿಣಿ ಶ್ರೀಮತಿ ಪುಷ್ಪ(43) ಅವರನ್ನು ಕುಂಬಾರಕೊಪ್ಪಲು 1ನೇ ಮುಖ್ಯ ರಸ್ತೆಯಲ್ಲಿ ಅವರು ವಾಸವಿದ್ದ ಮನೆಯಲ್ಲೇ ಹತ್ಯೆ ಮಾಡಿದ್ದರೆ, ಕೂಲಿ ಕಾರ್ಮಿಕ ರಮೇಶ್(35) ಎಂಬಾತನನ್ನು ಮೈಸೂರಿನ ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಾರ್ಡ್‌ನ ಕೊಠಡಿಯೊಂದರಲ್ಲಿ ಹತ್ಯೆಗೈಯ್ಯಲಾಗಿದೆ.

ಮೊದಲ ಪ್ರಕರಣ: ಕುಂಬಾರಕೊಪ್ಪಲು ನಿವಾಸಿ ಪುಷ್ಪ ಅವರು ಕೌಟುಂಬಿಕ ಕಲಹದಿಂದಾಗಿ ಕಳೆದ ಒಂದು ವರ್ಷದಿಂದ ಪತಿ ಕುಮಾರ್ ಅವರಿಂದ ದೂರವಿದ್ದು, ಟೈಲರಿಂಗ್ ವೃತ್ತಿ ಮಾಡುತ್ತಿದ್ದರು. ಅ.11ರಂದು ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ತಮ್ಮ ಪುತ್ರಿ ಕೆ.ಆಶಾ ಅವರ ಮೊಬೈಲ್‌ಗೆ ಕರೆ ಮಾಡಿದ ನಂತರ ಪುಷ್ಪ ಅವರ ಮೊಬೈಲ್ ಸ್ವಿಚ್‌ಆಫ್ ಆಗಿತ್ತು. ಹಲವಾರು ಬಾರಿ ಕರೆ ಮಾಡಿದರೂ ಮೊಬೈಲ್ ಸ್ವಿಚ್‌ಆಫ್ ಆಗಿದ್ದರಿಂದ ಸಂಶಯಗೊಂಡು ಪುಷ್ಪ ಅವರ ಪುತ್ರಿಯರಾದ ಆಶಾ ಮತ್ತು ಉಷಾ ಅವರುಗಳು ಅ.15ರಂದು ಬೆಳಗ್ಗೆ ಪುಷ್ಪ ವಾಸವಿದ್ದ ಮನೆಗೆ ತೆರಳಿ ನೋಡಿದಾಗ, ಮನೆ ಲಾಕ್ ಆಗಿತ್ತು ಆದರೆ, ಮನೆಯೊಳಗಿಂದ ದುರ್ವಾಸನೆ ಬೀರುತ್ತಿದ್ದ ಕಾರಣ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಲಾಗಿ, ಅ.12ರಂದು ರಾತ್ರಿ ಮಂಜೇಶ್ ಎಂಬಾತ ಪುಷ್ಪಳ ಮನೆಗೆ ಬಂದಿದ್ದ. ಆ ಸಂದರ್ಭದಲ್ಲಿ ಮನೆಯೊಳಗೆ ಗಲಾಟೆ ನಡೆಯುತ್ತಿತ್ತು ಎಂದು ತಿಳಿಸಿದ್ದಾರೆ.

ನಂತರ ಮೇಟಗಳ್ಳಿ ಠಾಣೆ ಪೊಲೀಸರಿಗೆ ಮಾಹಿತಿ ನೀಡಿ ಪೊಲೀಸರ ಸಮ್ಮುಖದಲ್ಲಿ ಮನೆಯ ಬೀಗ ಒಡೆದು ಒಳಪ್ರವೇಶಿಸಿ ನೋಡಿದಾಗ, ಪುಷ್ಪ ಅರೆನಗ್ನಳಾಗಿ ಬಿದ್ದಿದ್ದು, ದೇಹದ ಮೇಲೆ ಬೆಡ್‌ಶೀಟ್ ಹೊದಿಸಲಾಗಿತ್ತು. ಮಂಜೇಶ್ ಎಂಬಾತನೊಂದಿಗೆ ತಾಯಿ ಪುಷ್ಪಳಿಗೆ ಸಂಬಂಧವಿತ್ತು ಎಂದು ಆಕೆಯ ಪುತ್ರಿ ಉಷಾ ತಿಳಿಸಿದ್ದು, ಪುಷ್ಪಳನ್ನು ಮಂಜೇಶನೇ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮೇಟಗಳ್ಳಿ ಠಾಣೆ ಪೊಲೀಸರು, ತಲೆಮರೆಸಿಕೊಂಡಿರುವ ಮಂಜೇಶ್‌ಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಎರಡನೇ ಪ್ರಕರಣ: ಮತ್ತೊಂದು ಪ್ರಕರಣದಲ್ಲಿ ಕೂಲಿ ಕಾರ್ಮಿಕ ರಮೇಶ್ ಎಂಬಾತನನ್ನು ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಾರ್ಡ್‌ನ ಕೊಠಡಿಯೊಂದರಲ್ಲಿ ಹತ್ಯೆ ಮಾಡಲಾಗಿದೆ. ರಮೇಶ್ ಎಂಬಾತನ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಾರ್ಡ್‌ನ ನವೀಕರಣ ಕಾಮಗಾರಿಯನ್ನು ದಿಶಾರ ಕಂಟ್ರೋಲ್ಸ್ ಎಂಬ ಕನ್‌ಸ್ಟ್ರಕ್ಷನ್ ಕಂಪನಿ ನಡೆಸುತ್ತಿದ್ದು, ಕಂಪನಿಯ ಸೂಪರ್‌ವೈಸರ್ ಅರುಣ್‌ಕುಮಾರ್ ಎಂಬುವರ ಬಳಿ ರಮೇಶ್ ಕೆಲಸಕ್ಕೆ ಸೇರಿಕೊಂಡಿದ್ದಾನೆ. ಆತನಿಗೆ ಮನೆ ಇಲ್ಲದ ಕಾರಣ ಕೆಲಸ ಮುಗಿದ ನಂತರ ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಾರ್ಡ್‌ನ ಕೊಠಡಿಯೊಂದರಲ್ಲೇ ಉಳಿದುಕೊಳ್ಳುತ್ತಿದ್ದ. ಅಕ್ಟೋಬರ್ 15ರಂದು ಮಧ್ಯಾಹ್ನ ಕೊಠಡಿಯಲ್ಲಿ ಈತನ ಮೃತದೇಹ ಪತ್ತೆಯಾಗಿದ್ದು, ಈತನ ತಲೆ ಮೇಲೆ ಯಾವುದೋ ಆಯುಧದಿಂದ ಹೊಡೆದು ಹತ್ಯೆ ಮಾಡಲಾಗಿದೆ. ಈ ಸಂಬಂಧ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಅಪೆ ಆಟೋದಲ್ಲಿ ಸಾಗಿಸುತ್ತಿದ್ದ 314 ಕೆಜಿ ಪಡಿತರ ಅಕ್ಕಿ, 287 ಕೆಜಿ ರಾಗಿ ವಶಕ್ಕೆ

ಆಟೋ ಚಾಲಕನ ಬಂಧನ; ಮತ್ತೋರ್ವನಿಗೆ ಶೋಧ

ಮೈಸೂರು, ಅ. 16– ಅಕ್ರಮವಾಗಿ ಸಾಗಿಸುತ್ತಿದ್ದ 314 ಕೆಜಿ ಪಡಿತರ ಅಕ್ಕಿ ಹಾಗೂ 287 ಕೆಜಿ ರಾಗಿ ವಶಪಡಿಸಿಕೊಂಡಿರುವ ಅಶೋಕಪುರಂ ಠಾಣೆ ಪೊಲೀಸರು, ಅಪೆ ಆಟೋ ಚಾಲಕನನ್ನು ಬಂಧಿಸಿ, ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ಸುಣ್ಣದಕೇರಿ ನಿವಾಸಿ ಅಪೇ ಆಟೋ ಚಾಲಕ ಕಾಶಿಪ್ ಪಾಷ (33) ಬಂಧಿತನಾಗಿದ್ದು, ಮಂಡಿಮೊಹಲ್ಲಾದ ಇರ್ಫಾನ್ ಎಂಬಾತ ತಲೆಮರೆಸಿಕೊಂಡಿದ್ದಾನೆ.

ವಿವರ: ಅಶೋಕಪುರಂ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ವೈಶಾಲಿಯವರು ತಮ್ಮ ಸಿಬ್ಬಂದಿಯೊಡಗೂಡಿ, ಜಯನಗರ ರೈಲ್ವೇ ಗೇಟ್ ಬಳಿ ಅಕ್ಟೋಬರ್ 15ರಂದು ಮಧ್ಯಾಹ್ನ 2.30ರ ಸುಮಾರಿನಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಆ ಮಾರ್ಗವಾಗಿ ಬಂದ ಅಪೇ ಗೂಡ್ಸ್ ಆಟೋ (ಕೆಎ 09–ಬಿ0345) ಅನ್ನು ತಡೆದು ಪರಿಶೀಲನೆ ನಡೆಸಿದಾಗ ಅದರಲ್ಲಿ 314 ಕೆಜಿ ಅಕ್ಕಿ ಹಾಗೂ 287 ಕೆಜಿ ರಾಗಿ ಪತ್ತೆಯಾಗಿದೆ. ಇದು ನ್ಯಾಯ ಬೆಲೆಯಲ್ಲಿ ಬಡವರಿಗೆ ವಿತರಿಸಬೇಕಾಗಿರುವ ಪಡಿತರ ಪದಾರ್ಥಗಳಾಗಿದ್ದು, ವೈಶಾಲಿಯವರು ಈ ಸಂಬಂಧ ಖಿಲ್ಲೆ ಮೊಹಲ್ಲಾ ವಿಭಾಗದ ಆಹಾರ ಇಲಾಖೆ ಇನ್ಸ್‌ಪೆಕ್ಟರ್ ಜಿ.ರತ್ನಮ್ಮ ಅವರಿಗೆ ಮಾಹಿತಿ ನೀಡಿದ್ದಾರೆ. ರತ್ನಮ್ಮ ಅವರು ಸ್ಥಳಕ್ಕೆ ಭೇಟಿ ನೀಡಿ ಅಕ್ಕಿ ಮತ್ತು ರಾಗಿ ಪಡಿತರ ಪದಾರ್ಥಗಳೆಂದು ಖಚಿತಪಡಿಸಿದ್ದಲ್ಲದೇ ಅಪೇ ಆಟೋ ಚಾಲಕನನ್ನು ವಿಚಾರಣೆಗೊಳಪಡಿಸಿದಾಗ ಆತ ಅಕ್ಕಿ ಮತ್ತು ರಾಗಿ ಮಂಡಿ ಮೊಹಲ್ಲಾದ ಇರ್ಫಾನ್ ಎಂಬುವರಿಗೆ ಸೇರಿದ್ದಾಗಿದ್ದು, ತಾನು ಬಾಡಿಗೆಗಾಗಿ ಈ ಪದಾರ್ಥಗಳನ್ನು ಜಯನಗರಕ್ಕೆ ಕೊಂಡೊಯ್ಯುತ್ತಿದ್ದಾಗಿ ತಿಳಿಸಿದ್ದಾನೆ. ರತ್ನಮ್ಮ ನೀಡಿದ ದೂರಿನನ್ವಯ ಆಟೋ ಚಾಲಕ ಕಾಶಿಪ್ ಪಾಷಾನನ್ನು ಬಂಧಿಸಿ, ಅಪೇ ಆಟೋ ಮತ್ತು ಪಡಿತರ ಪದಾರ್ಥಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿರುವ ಅಶೋಕಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಿಗದಿತ ಪ್ರಮಾಣಕ್ಕಿಂತ ಅಧಿಕ ಪಟಾಕಿ ಜಪ್ತಿ; ಇಬ್ಬರ ಬಂಧನ



ಮೈಸೂರು,ಅ.16–ಆನೇಕಲ್ ತಾಲೂಕಿನ ಅತ್ತಿಬೆಲೆ ಪಟಾಕಿ ಗೋಡೌನ್‌ನಲ್ಲಿ ನಡೆದ ಅಗ್ನಿ ದುರಂತದಲ್ಲಿ 18 ಮಂದಿ ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸರು ಪಟಾಕಿ ಗೋಡೌನ್‌ಗಳ ಮೇಲೆ ನಿಗಾ ವಹಿಸಿದ್ದು, ಬಂಡೀಪಾಳ್ಯ ಬಳಿ ಗೋಡೌನ್‌ವೊಂದರಲ್ಲಿ ಸಂಗ್ರಹಿಸಿದ್ದ 20 ಲಕ್ಷ ರೂ. ಮೌಲ್ಯದ 4 ಸಾವಿರ ಕೆಜಿಯಷ್ಟು ಪಟಾಕಿಗಳನ್ನು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಂಡೀಪಾಳ್ಯ ಬಳಿ ಉತ್ತನಹಳ್ಳಿ ರಸ್ತೆಯಲ್ಲಿ ಗೋಡೌನ್ ಹೊಂದಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಕ್ರಾಕರ್ಸ್ ಮಾಲೀಕ ಸಂತೋಷ್(46) ಮತ್ತು ಅಲ್ಲಿನ ಉದ್ಯೋಗಿ ರಮ್ಮನಹಳ್ಳಿಯ ಮನೋಜ್(26) ಬಂಧಿತರಾಗಿದ್ದು, ಈ ಗೋಡೌನ್‌ನಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಪಟಾಕಿ ಸಂಗ್ರಹಿಸಲಾಗಿದೆ ಎಂದು ಬಾತ್ಮೀದಾರರಿಂದ ದೊರೆತ ಮಾಹಿತಿಯನ್ವಯ ಕೆ.ಆರ್. ಠಾಣೆ ಇನ್ಸ್‌ಪೆಕ್ಟರ್ ಎನ್.ಸಿ.ನಾಗೇಗೌಡ, ಸಿಬ್ಬಂದಿಯೊಂದಿಗೆ ಅ.12ರಂದು ಮಧ್ಯಾಹ್ನ ಗೋಡೌನ್ ಮೇಲೆ ದಾಳಿ ನಡೆಸಿದ್ದಾರೆ. ಈ ಗೋಡೌನ್‌ನಲ್ಲಿ 600 ಕೆಜಿಯಷ್ಟು ಪಟಾಕಿ ಮಾತ್ರ ಸಂಗ್ರಹಿಸಲು ಅನುಮತಿ ಪಡೆದಿದ್ದು, 4 ಸಾವಿರ ಕೆಜಿಯಷ್ಟು ಪಟಾಕಿ ಸಂಗ್ರಹಿಸಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಸಂತೋಷ್ ಮತ್ತು ಮನೋಜ್‌ನನ್ನು ಬಂಧಿಸಿ, ಪಟಾಕಿಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೂರು ಪ್ರಕರಣದಲ್ಲಿ ಲಾಭದ ಆಸೆ ತೋರಿಸಿ ಆನ್‌ಲೈನ್‌ನಲ್ಲಿ ಲಕ್ಷಾಂತರ ರೂ. ದೋಖಾ

ಮೈಸೂರು, ಅ. 16– ಸಾಫ್ಟ್‌ವೇರ್ ಇಂಜಿನಿಯರ್ ಸೇರಿದಂತೆ ಮೂವರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ರೂಪಾನಗರದಲ್ಲಿ ವಾಸವಿರುವ ಸಾಫ್ಟ್‌ವೇರ್ ಇಂಜಿನಿಯರ್ ಮಲ್ಲಮ್ಮ ಗಣಿಗಿ(40) ಎಂಬುವರಿಗೆ ವಾಟ್ಸಾಪ್ ಸಂಖ್ಯೆ 9362610449ನಿಂದ ಸಂದೇಶ ಕಳುಹಿಸಿ, ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಿ ಬ್ಯುಸಿನೆಸ್ ಟಾಸ್ಕ್ ತೆಗೆದುಕೊಂಡರೆ ಹೆಚ್ಚಿನ ಲಾಭ ದೊರೆಯುತ್ತದೆ ಎಂದು ನಂಬಿಸಲಾಗಿದೆ. ಪ್ರಾರಂಭದಲ್ಲಿ ಅವರ ಖಾತೆಗೆ 160 ರೂ. ಲಾಭಾಂಶವನ್ನು ಜಮೆ ಮಾಡಿದ್ದು, ನಂತರ ಹಂತಹಂತವಾಗಿ 19,26,300 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.



ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ರಾಮಕೃಷ್ಣನಗರದಲ್ಲಿ ವಾಸವಿರುವ ಪ್ರೊ.ಪಿ.ಎಸ್. ಸೌಜನ್ಯ (36) ಅವರನ್ನು ವಾಟ್ಸಾಪ್ ನಂಬರ್ 9546168851 ಮೂಲಕ ಸಂಪರ್ಕಿಸಿ ಟಾಸ್ಕ್ ಪೂರೈಸಿದರೆ ಹೆಚ್ಚಿನ ಹಣ ಬರುತ್ತದೆ ಎಂದು ನಂಬಿಸಿ 81,500 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಕೆ.ಎಂ.ಪುರಂನಲ್ಲಿ ವಾಸವಿರುವ ಸರ್ಕಾರಿ ಅಧಿಕಾರಿ ಎಂ.ಎ. ಆಳ್ವಾರ್(51) ಅವರಿಗೆ 9121628613 ಸಂಖ್ಯೆಯಿಂದ ಕರೆ ಮಾಡಿದ ವಂಚಕ ತನ್ನನ್ನು ಕೆನರಾ ಬ್ಯಾಂಕ್ ಪ್ರತಿನಿಧಿ ಎಂದು ಪರಿಚಯಿಸಿಕೊಂಡು "ನಿಮ್ಮ ಕಸ್ಟಮರ್ ಐಡಿ ಸರಿ ಇಲ್ಲದ ಕಾರಣ ನೀವು ನೆಟ್ ಬ್ಯಾಂಕಿಂಗ್ ಬಳಸಲು ಸಾಧ್ಯವಿಲ್ಲ" ಎಂದು ತಿಳಿಸಿದ್ದಲ್ಲದೇ ಅವರಿಂದ ಎಟಿಎಂ ಕಾರ್ಡ್‌ನ ವಿವರ ಹಾಗೂ ಓಟಿಪಿ ಪಡೆದುಕೊಂಡು 1.99 ಲಕ್ಷ ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಈ ಮೂರು ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಬಸ್‌ನಲ್ಲಿ ವೃದ್ಧೆಯ ಚಿನ್ನದ ಸರ ಕಳವು



ಮೈಸೂರು, ಅ.16– ಬಸ್‌ನಿಂದ ಇಳಿಯುವಾಗ ನೂಕುನುಗ್ಗಲಿನಲ್ಲಿ ವೃದ್ಧೆಯ ಚಿನ್ನದ ಸರ ಕಳವು ಮಾಡಿರುವ ಘಟನೆ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ. ನಂಜನಗೂಡಿನ ಒಕ್ಕಲಗೇರಿ ನಿವಾಸಿ ಹೆಚ್. ನಾಗರತ್ನ(82) ಸರ ಕಳೆದುಕೊಂಡವರಾಗಿದ್ದು, ಮೈಸೂರಿನಲ್ಲಿರುವ ಮಗಳ ಮನೆಗೆ ಹೋಗಲು ಅಕ್ಟೋಬರ್ 14ರಂದು ಬೆಳಗ್ಗೆ ನಂಜನಗೂಡಿನಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮೈಸೂರಿಗೆ ಆಗಮಿಸಿದ್ದಾರೆ.

ಬಸ್ ನಿಲ್ದಾಣದಲ್ಲಿ ಬಸ್‌ನಿಂದ ಇಳಿಯುವ ವೇಳೆ ನೂಕುನುಗ್ಗಲಿನಲ್ಲಿ ಇವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಸರವನ್ನು ಕಳವು ಮಾಡಲಾಗಿದೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವಣ್ಣನವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿದವರ ಬಂಧನಕ್ಕೆ ಆಗ್ರಹ



ಕೆ.ಆರ್.ಪೇಟೆ, ಅ.16– ಕಲ್ಬುರ್ಗಿಯಲ್ಲಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಬೆಂಕಿ ಹಚ್ಚಿರುವ ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಪದಾಧಿಕಾರಿಗಳು ಹಾಗೂ ಸದಸ್ಯರು ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಮಹಾಸಭಾ ತಾಲೂಕು ಅಧ್ಯಕ್ಷ ಹಾಗೂ ವಕೀಲ ವಿ.ಎಸ್.ಧನಂಜಯ ಕುಮಾರ್ ಮಾತನಾಡಿ, ಬಸವೇಶ್ವರರನ್ನು ಎಲ್ಲಾ ಸಮುದಾಯದವರು ಆರಾಧಿಸುತ್ತಾರೆ. ಕಲ್ಬುರ್ಗಿಯಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಘಟನೆ ನಡೆದು ನಾಲ್ಕೈದು ದಿನಗಳಾದರೂ ಅಲ್ಲಿನ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ. 12ನೇ ಶತಮಾನದಲ್ಲೇ ಸಮಾನತೆಯ ಸಾರ ತಿಳಿಸಿದ ಬಸವಣ್ಣನವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿರುವುದು ನಾಚಿಕೆಗೇಡಿನ ಸಂಗತಿಯಾಗಿದ್ದು, ಇದು ಇಡೀ ನಾಗರಿಕ ಸಮಾಜಕ್ಕೆ ಮಾಡಿದ ಅಪಮಾನವಾಗಿದೆ. ಈ ಘಟನೆಯನ್ನು ನಮ್ಮ ಮಹಾಸಭಾ ತೀವ್ರವಾಗಿ ಖಂಡಿಸುತ್ತದೆ. ಇದೇ ವೇಳೆ ಕಲ್ಬುರ್ಗಿ ಜಿಲ್ಲಾಡಳಿತ ಆದಷ್ಟು ಬೇಗ ಬಸವಣ್ಣನವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿದ ಕಿಡಿಗೇಡಿಗಳನ್ನು ಪತ್ತೆಹಚ್ಚಿ ಬಂಧಿಸಿ ಮುಂದಿನ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ ಮನವಿಯನ್ನು ಕಲ್ಬುರ್ಗಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗೂ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ತಹಸೀಲ್ದಾರ್‌ಗೆ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ನಿಸರ್ಗಪ್ರಿಯ, ಆದಷ್ಟು ಬೇಗ ಕಲ್ಬುರ್ಗಿ ಜಿಲ್ಲಾಡಳಿತ, ಅಲ್ಲಿನ ಪೊಲೀಸ್ ಇಲಾಖೆ ಹಾಗೂ ರಾಜ್ಯ ಸರ್ಕಾರಕ್ಕೆ ನಿಮ್ಮ ಮನವಿ ಪತ್ರವನ್ನು ಕಳುಹಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಮಹಾಸಭಾ ತಾಲೂಕು ಕಾರ್ಯದರ್ಶಿ ವೀರಪ್ಪ ಉಪಾಧ್ಯಕ್ಷ ಎಂ.ಪಿ.ಪ್ರಕಾಶ್, ಜಯನಂದಿನಿ, ನಂಜುಂಡಪ್ಪ, ಮಹದೇವ್, ಮೀನಾಕ್ಷಿ, ರಾಣಿ, ಕೋಶಾಧ್ಯಕ್ಷ ಮಹೇಶ್ ಕುಮಾರ್, ನಿರ್ದೇಶಕರಾದ ರಾಜಪ್ಪ, ಎಲ್.ಪಿ.ನಂಜಪ್ಪ, ಶಿವಕುಮಾರ್, ವಿಜಯಕುಮಾರ್, ಮೋಹನಮೂರ್ತಿ, ಡಿ.ಸಿ.ಕುಮಾರ್, ಅಪ್ಪಾಜಿ, ಎ.ಎಂ.ರಾಜು, ಮಹದೇವಮ್ಮ, ಈರಾಜಮ್ಮ, ಜ್ಯೋತಿ, ಪುಷ್ಪಾ, ಸೌಮ್ಯ, ಕೇಬಲ್ ಗುಂಡ, ವಿರೂಪಾಕ್ಷ, ಮಹೇಶ್, ದಿಲೀಪ್ ಕುಮಾರ್, ಶಿವಕುಮಾರ್, ನಾಗೇಶ್, ಎಲ್‌ಐಸಿ ಶಿವಪ್ಪ, ಹರೀಶ್, ತಮ್ಮಣ್ಣ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಶ್ರೀರಂಗಪಟ್ಟಣ ದಸರಾಕ್ಕೆ ತನ್ನದೇ ಇತಿಹಾಸವಿದೆ

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್





ಶ್ರೀರಂಗಪಟ್ಟಣ, ಅ.16– ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ತನ್ನದೇ ಆದ ಇತಿಹಾಸವಿದೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದರು.

ಇಲ್ಲಿನ ಕಿರಂಗೂರು ಬನ್ನಿಮಂಟಪದ ಬಳಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ಅಂಬಾರಿ ಮೆರವಣಿಗೆಗೆ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ತನ್ನದೇ ಆದ ಇತಿಹಾಸವಿದೆ. ನಾನು ಹೊಸದಾಗಿ ಹೇಳುವ ಅವಶ್ಯಕತೆ ಇಲ್ಲ. ಇಂದಿನಿಂದ ನವರಾತ್ರಿ ಬನ್ನಿಮಂಟಪದಲ್ಲಿ ವಿಜಯೋತ್ಸವ ನಡೆಯುತ್ತಿದೆ.

ಈ ಬಾರಿ ದಸರಾ ಉದ್ಘಾಟನೆಗೆ ನನಗೆ ಆಹ್ವಾನ ನೀಡಿರುವುದು ಸಂತಸ ತಂದಿದೆ. ಶ್ರೀರಂಗಪಟ್ಟಣ ಸೇರಿದಂತೆ ರಾಜ್ಯದ ಜನತೆಗೆ ನೀರಿನ ಅವಶ್ಯಕತೆ ಇದೆ. ಹೀಗಾಗಿ ಶ್ರೀಚಾಮುಂಡೇಶ್ವರಿ ಹಾಗೂ ಶ್ರೀರಂಗನಾಥ ಸ್ವಾಮಿಗೆ ಮಳೆ ಬಂದು ಕನ್ನಂಬಾಡಿ ಕಟ್ಟೆ ಭರ್ತಿಯಾಗಿ ನಾಡಿನ ಜನತೆಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಜಿಲ್ಲಾಡಳಿತ ಹಾಗೂ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಈ ಬಾರಿಯ ಶ್ರೀರಂಗಪಟ್ಟಣ ದಸರಾ ಅಂಬಾರಿ ಮೆರವಣಿಗೆ ಯಶಸ್ವಿಯಾಗಿ ನಡೆದಿದೆ. ಬರಗಾಲ ಇದ್ದರೂ ಸಹ ಸರಳವಾಗಿ ದಸರಾ ಆಚರಣೆ ಮಾಡಲಾಗುತ್ತಿದೆ. ಆ ಮೂಲಕ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ ಮಳೆಗಾಗಿ ಪ್ರಾರ್ಥನೆ ಮಾಡಲಾಗಿದೆ. ಈ ನಾಡಿನ ಜನತೆಗಾಗಿ ದಸರಾ ಆಚರಣೆ ಮಾಡಿದ್ದೇವೆ. ಯಾವುದೇ ಆಡಂಬರದ ದಸರಾ ಆಚರಣೆ ಮಾಡಿಲ್ಲ ಎಂದರು.

ಉತ್ತಮ ಮಳೆಯಾಗಿ ಕೆಆರ್‌ಎಸ್ ತುಂಬಿ ಜನರಿಗೆ ಒಳ್ಳೆಯದಾಗಲಿ. ನಮ್ಮ ನಾಡಿನ ರಾಜರ ಮನೆತನದಲ್ಲಿ ದಸರಾ ಪ್ರಾರಂಭವಾಗಿದೆ. ಅವರ ಕುಟುಂಬದಿಂದ ಯಾರೂ ಉದ್ಘಾಟನೆ ಮಾಡಿರಲಿಲ್ಲ ಈ ಬಾರಿ ಜಿಲ್ಲಾಡಳಿತ ರಾಜಮಾತೆ ಅವರ ಮೂಲಕ ದಸರಾ ಉದ್ಘಾಟಿಸಿದ್ದು, ನಮ್ಮ ಹಳೆಯ ಮೈಸೂರು ಭಾಗಕ್ಕೆ ರಾಜಮಾತೆ ಬಂದಿರುವುದು ಸಂತೋಷ ತಂದಿದೆ ಎಂದರು.

ಜೆಡಿಎಸ್‌ನ ಸಿಎಂ ಇಬ್ರಾಹಿಂ ಕಾಂಗ್ರೆಸ್ ಪರ ಬ್ಯಾಟಿಂಗ್ ಮಾಡುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಜಾತ್ಯಾತೀತ ಪಕ್ಷವೆಂದು ಹೇಳಿಕೊಂಡು ಜೆಡಿಎಸ್ ಇದೀಗ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಕೋಮುವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿರುವುದರಿಂದ ಇಬ್ರಾಹಿಂ ಅಸಮಾಧಾನಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಆ ಪಕ್ಷದ ಮತ್ತಷ್ಟು ಮಂದಿ ನಮ್ಮ ಪಕ್ಷಕ್ಕೆ ಬೆಂಬಲ ನೀಡಲಿದ್ದಾರೆ ಎಂದರು.

ಐಟಿ ದಾಳಿಯಲ್ಲಿ ಗುತ್ತಿಗೆದಾರರ ಬಳಿ ದೊರೆತ ಕೋಟಿ, ಕೋಟಿ ಹಣ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದು ಎನ್ನುವ ಆರೋಪ ಸರಿಯಲ್ಲ ಐಟಿ, ಇಡಿ ಅಧಿಕಾರಿಗಳು ಕೇಂದ್ರ ಸರ್ಕಾರದ ಅಧೀನದಲ್ಲಿರುತ್ತವೆ. ಅವರೇ ತನಿಖೆ ನಡೆಸಲಿ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬೇಕಿದ್ದರೆ ತನಿಖಾ ಸಂಸ್ಥೆ ಚೇರ್ಮನ್ ಮಾಡಿಕೊಳ್ಳಲಿ ಎಂದು ಹೇಡಿಕೆಗೆ ಟಾಂಗ್ ನೀಡಿದರು.

ಶಾಸಕ ರಮೇಶ್‌ಬಾಬು ಮಾತನಾಡಿ, ಈ ಬಾರಿ ಶ್ರೀರಂಗಪಟ್ಟಣ ದಸರಾವನ್ನು ಅರ್ಥಪೂರ್ಣವಾಗಿ ಆಚರಿಸಿದ್ದೇವೆ. ತಾಯಿ ಚಾಮುಂಡೇಶ್ವರಿ ಹಾಗೂ ಶ್ರೀರಂಗನಾಥ ಸ್ವಾಮಿಯವರು ಎಲ್ಲರ ಮೇಲಿರಲಿ ಎಂದು ಪ್ರಾರ್ಥನೆ ಸಲ್ಲಿಸಿರುವುದಾಗಿ ಹೇಳಿದರು.

ಮಂಡ್ಯದಲ್ಲಿ ತೀವ್ರಗೊಂಡ ಕಾವೇರಿ ಚಳವಳಿ

ಹೋರಾಟಗಾರರಿಂದ ಬೈಕ್ ರ್ಯಾಲಿ, ರಸ್ತೆ ತಡೆದು ಧರಣಿ



ಮಂಡ್ಯ, ಅ.16– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೋರಾಟ ತೀವ್ರಗೊಳಿಸಿದ್ದು, ಸೋಮವಾರ ಧರಣಿ, ಹೆದ್ದಾರಿ ತಡೆ ಜೊತೆಗೆ ನಗರದಾದ್ಯಂತ ಹೋರಾಟಗಾರರು ಬೈಕ್ ರ್ಯಾಲಿ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿಯಿಂದ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ರೈತರು, ಕನ್ನಡ, ಪ್ರಗತಿಪರ ಹೋರಾಟಗಾರರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಬೈಕ್ ರ್ಯಾಲಿ ಹೊರಟು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಧರಣಿಗೆ ಬೆಂಬಲ ಸೂಚಿಸಿ ಮಾತನಾಡಿದ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು, ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ಮೋಸ ಆಗುತ್ತಿದೆ. ಮೊದಲು ಸಂಬಂಧಪಟ್ಟವರು ಕುಡಿಯುವ ನೀರಿಗೆ ಬೆಲೆ ಕೊಡಬೇಕು. ಅದನ್ನು ಬಿಟ್ಟು ಮೂರನೇ ಬೆಳೆ ಬೆಳೆಯಲು ತಮಿಳುನಾಡಿಗೆ ನೀರು ಬಿಡುವುದು ಸರಿಯಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಬೇಕು. ಎಲ್ಲರೂ ಹೋರಾಟದಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸುತ್ತಿದ್ದಾರೆ. ಆದರೂ ಸಹ ನ್ಯಾಯ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನೆರೆ ರಾಜ್ಯಕ್ಕೆ ಹರಿಸುತ್ತಿರುವ ನೀರು ಸ್ಥಗಿತ ಮಾಡುವಂತೆ ನಿರಂತರ ಹೋರಾಟ ಮಾಡುತ್ತಿದ್ದರೂ ರಾಜ್ಯ ಸರ್ಕಾರ ಸ್ಪಂದಿಸದೆ ಹಠಮಾರಿ ಧೋರಣೆಯಿಂದ ನೀರು ಹರಿಸುತ್ತಿದೆ. ನೀರು ಇಲ್ಲದ ಹಿನ್ನೆಲೆಯಲ್ಲಿ ರೈತರಿಗೆ ಹೊಸ ಬೆಳೆ ಹಾಕಲು ನಿರ್ಬಂಧ ಹಾಕಿದ ಸರ್ಕಾರ ತಮಿಳುನಾಡಿನ ರೈತರಿಗೆ ಬೆಳೆ ಬೆಳೆಯಲು ನೀರು ಬಿಟ್ಟಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡಿ, ಸರ್ಕಾರಕ್ಕೆ ರೈತರ ಬಗ್ಗೆ ಇಷ್ಟೊಂದು ಪ್ರಮಾಣದಲ್ಲಿ ಉದಾಸೀನತೆ ಇರಬಾರದು. ನೀರು ಉಳಿಸಿಕೊಳ್ಳುವ ಮೂಲಕ ರೈತರ ಹಿತ ಕಾಪಾಡಲು ಮುಂದಾಗಬೇಕು. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಲು ಮೀನಾಮೇಷ ಎಣಿಸುತ್ತಿರುವುದು ಸರಿಯಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ 2 ರಾಜ್ಯಗಳ ನಡುವೆ ಸಂಘರ್ಷದ ವಾತಾವರಣ ಸೃಷ್ಟಿಯಾದಾಗ ಪರಿಹಾರ ರೂಪಿಸಬೇಕಾದುದು ಆಳುವ ಸರ್ಕಾರದ ಕರ್ತವ್ಯ ಎಂಬುದನ್ನು ಮರೆತಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ದಸರಾ ಮಹೋತ್ಸವದಲ್ಲಿ ರೈತರನ್ನು ಮರೆತಿದ್ದರೆ ಕೇಂದ್ರ ಸರ್ಕಾರ ಕಂಡೂ ಕಾಣದಂತೆ ಸುಮ್ಮನಿದೆ. ಮುಂದಿನ ದಿನಗಳಲ್ಲಿ ಕಾವೇರಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಧರಣಿಯಲ್ಲಿ ಮುಖಂಡರಾದ ಚಂದ್ರಶೇಖರ್, ಮುದ್ದೇಗೌಡ, ಕನ್ನಡ ಸೇನೆ ಮಂಜು, ಮೀರಾ ಶಿವಲಿಂಗಯ್ಯ, ಬೇಕರಿ ರಮೇಶ್, ದಸಂಸ ಕೃಷ್ಣ, ಶಿವಶಂಕರ್, ಘಂಟಾಜ್, ಬಸವರಾಜು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ಹರಿಹರಪುರ ಡಿಸಿಸಿ ಬ್ಯಾಂಕ್ ದರೋಡೆಗೆ ಯತ್ನ

ಚಾಕುವಿನಿಂದ ಸೆಕ್ಯೂರಿಟಿ ಗಾರ್ಡ್‌ಗೆ ಇರಿದ ದುಷ್ಕರ್ಮಿಗಳು

ಕೆ.ಆರ್.ಪೇಟೆ, ಅ.16– ಬ್ಯಾಂಕ್ ದರೋಡೆಗೆ ಯತ್ನಿಸಿದ ದುಷ್ಕರ್ಮಿಗಳನ್ನು ತಡೆದ ಸೆಕ್ಯೂರಿಟಿ ಗಾರ್ಡ್ ಅನ್ನು ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ಭಾನುವಾರ ಮಧ್ಯರಾತ್ರಿ ತಾಲೂಕಿನ ಹರಿಹರಪುರದಲ್ಲಿ ನಡೆದಿದೆ. ಬ್ಯಾಂಕ್ ಸೆಕ್ಯೂರಿಟಿ ಗಾರ್ಡ್ ಮನು(30) ಚಾಕು ಇರಿತದಿಂದ ಗಾಯಗೊಂಡವರು.

ವಿವರ: ಭಾನುವಾರ ರಾತ್ರಿ ಮೂವರು ಮುಸುಕುಧಾರಿ ದರೋಡೆಕೋರರು ಗ್ರಾಮದ ಡಿಸಿಸಿ ಬ್ಯಾಂಕ್‌ಗೆ ನುಗ್ಗಲು ಯತ್ನಿಸಿದ್ದಾರೆ. ಈ ವೇಳೆ ಕರ್ತವ್ಯದಲ್ಲಿದ್ದ ಬ್ಯಾಂಕ್ ಸೆಕ್ಯೂರಿಟಿ ಗಾರ್ಡ್ ಮನು ದರೋಡೆಕೋರರನ್ನು ತಡೆದು, ಕಿರುಚಿಕೊಂಡಿದ್ದಾರೆ. ಇದರಿಂದ ವಿಚಲಿತರಾದ ದರೋಡೆಕೋರರು ಬ್ಯಾಂಕ್ ಬೀಗ ಒಡೆಯಲು ಸಾಧ್ಯವಾಗದೇ ಇದ್ದಾಗ ಸೆಕ್ಯೂರಿಟಿ ಗಾರ್ಡ್ ಮನು ಹೊಟ್ಟೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ.

ಚಾಕು ಇರಿತದಿಂದ ತೀವ್ರ ಅಸ್ವಸ್ಥಗೊಂಡಿದ್ದ ಮನು ಅವರನ್ನು ಗ್ರಾಮಸ್ಥರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ವಿಷಯ ತಿಳಿದು ಮನು ಅವರನ್ನು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಹರಿಹರಪುರ ಪಿಎಸಿಎಸ್ ಅಧ್ಯಕ್ಷ ಹರೀಶ್, ಸಿಇಓ ಕಾಂತರಾಜು, ಮಾಜಿ ಅಧ್ಯಕ್ಷ ನಿಂಗರಾಜು, ಕೃಷ್ಣೇಗೌಡ, ಬಾಲಗಂಗಾಧರತಿಲಕ್, ರೇವಣ್ಣ, ಡೇರಿ ಅಧ್ಯಕ್ಷ ನಾಗೇಶ್ ಮತ್ತಿತರರು ಭೇಟಿ ಮಾಡಿ ಸಾಂತ್ವನ ಹೇಳಿದರು. ಈ ಸಂಬಂಧ ಕೆಆರ್.ಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಕ್ಕಹನುಮೇಗೌಡ ನಿಧನ



ಭಾರತೀನಗರ, ಅ.16– ಇಲ್ಲಿಗೆ ಸಮೀಪದ ಬಿದರಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಚಿಕ್ಕಹನುಮೇಗೌಡ (46) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ ಪದ್ಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಶೀಲಮ್ಮ



ಕಿಕ್ಕೇರಿ, ಅ.16– ಇಲ್ಲಿನ ಊಗಿನಹಳ್ಳಿ ಗ್ರಾಮದ ನಿವಾಸಿ ಸುಶೀಲಮ್ಮ (76) ಭಾನುವಾರ ನಿಧನರಾದರು. ಮೃತರು ಪತಿ ವಿದ್ಯುತ್ ಇಲಾಖೆ ನಿವೃತ್ತ ಕಾರ್ಯಪಾಲಕ ಅಭಿಯಂತರ ತಿಮ್ಮಶೆಟ್ಟಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಚನ್ನರಾಯಪಟ್ಟಣದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ವಿಶ್ವವಿದ್ಯಾನಿಲಯದ 103ನೇ ಘಟಿಕೋತ್ಸವ

ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವರೂ ಆದ ವಿವಿ ಸಮಕುಲಾಧಿಪತಿ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರುವರು ಎಂದು ತಿಳಿಸಿದರು.

> **ನಾಡೋಜ ಡಾ.ಪಿ.ಎಸ್.ಶಂಕರ್ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್ (ಡಿಎಸ್‌ಸಿ), ಕೆ.ಬಿಗಣಪತಿ ಹಾಗೂ ಜಾವಗಲ್ ಶ್ರೀನಾಥ್ ಅವರಿಗೆ 'ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್)' ಪದವಿ ಪ್ರದಾನ ಮಾಡಲಾಗುತ್ತಿದೆ. ಈ ಮೂವರು ತಮ್ಮ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಗಾಗಿ ಈ ಗೌರವ ಸಂದಿದೆ.** –ಪ್ರೊ.ಎನ್.ಕೆ.ಲೋಕನಾಥ್

ಪದವಿ ಪಡೆಯುತ್ತಿರುವ ಒಟ್ಟು 32,240 ಅಭ್ಯರ್ಥಿಗಳ ಪೈಕಿ 12,051 (ಶೇ.37.37) ಪುರುಷ ಅಭ್ಯರ್ಥಿಗಳಾಗಿದ್ದರೆ, 20,189 (ಶೇ.62.62) ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಈ ಘಟಿಕೋತ್ಸವದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಪದವಿ ಪಡೆಯುತ್ತಿದ್ದಾರೆ. ವಿವಿಧ ವಿಷಯಗಳಲ್ಲಿ 539 ಅಭ್ಯರ್ಥಿಗಳು ಪಿಹೆಚ್‌ಡಿ ಪದವಿ ಪಡೆಯುತ್ತಿದ್ದಾರೆ. ಈ ಪೈಕಿ 248 (ಶೇ.46.01) ಮಹಿಳಾ ಅಭ್ಯರ್ಥಿಗಳಾದರೆ, 291 (ಶೇ.53.98) ಪುರುಷ ಅಭ್ಯರ್ಥಿಗಳಾಗಿದ್ದಾರೆ. ಇದರಲ್ಲಿ 40 ಮಂದಿ ವಿದೇಶಿ ಅಭ್ಯರ್ಥಿಗಳಾಗಿದ್ದಾರೆ. ಹಾಗೆಯೇ 420 ಚಿನ್ನದ ಪದಕ, 275 ನಗದು ಬಹುಮಾನಗಳನ್ನು 249 (ಯುಜಿ, ಪಿಜಿ ಮತ್ತು ಪಿ.ಹೆಚ್‌ಡಿ ಸೇರಿದಂತೆ) ಅಭ್ಯರ್ಥಿಗಳು ಪಡೆದುಕೊಳ್ಳಲಿದ್ದಾರೆ. ಅವರಲ್ಲಿ 180 ಮಹಿಳಾ ಅಭ್ಯರ್ಥಿಗಳಾಗಿದ್ದಾರೆ ಎಂದರು.

ಒಟ್ಟಾರೆ 5,627 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಗುತ್ತಿದ್ದು, ಈ ಪೈಕಿ 3,799 (67.51) ಮಂದಿ ಮಹಿಳೆಯರಾಗಿದ್ದಾರೆ. ಅಂತೆಯೇ 26,074 ಅಭ್ಯರ್ಥಿಗಳಿಗೆ ಸ್ನಾತಕ ಪದವಿ (ಯುಜಿ) ಪ್ರದಾನ ಮಾಡಲಾಗುವುದು. ಈ ಪೈಕಿ 16,142 (61.90) ಮಂದಿ ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಯುಜಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಹಲವು ಅಭ್ಯರ್ಥಿಗಳಿದ್ದು, ಅಂತೆಯೇ ಕಲಾ ವಿಭಾಗದಲ್ಲಿ ಡಿ.ಪವಿತ್ರ 3 ಪದಕ, 5 ನಗದು ಬಹುಮಾನ, ವಾಣಿಜ್ಯ ವಿಭಾಗದಲ್ಲಿ ಚಂದನ 3 ಪದಕ, 3 ನಗದು ಬಹುಮಾನ, ಶಿಕ್ಷಣ ವಿಭಾಗದಲ್ಲಿ ಎಂ.ಜೆ.ಸುಮಾ 2 ಪದಕ, 2 ನಗದು ಬಹುಮಾನ, ಕಾನೂನು ವಿಭಾಗದಲ್ಲಿ ಆರ್.ಅಜಯ್ 1 ಪದಕ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಸುನೈನ್ ಸಾಬಾ 5 ಪದಕ, 7 ನಗದು ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ವಿವರಿಸಿದರು.

ಅದೇ ರೀತಿ ಸ್ನಾತಕೋತ್ತರ ಪದವಿಯಲ್ಲಿ ಕಲಾ ವಿಭಾಗದಲ್ಲಿ ಶ್ರೀವಿದ್ಯಾ 15 ಪದಕ, 4 ನಗದು ಬಹುಮಾನ, ವಾಣಿಜ್ಯ ವಿಭಾಗದಲ್ಲಿ ಸಿ.ಎಂ.ಚೈತನ್ಯ 3 ಪದಕ, 2 ನಗದು ಬಹುಮಾನ, ಶಿಕ್ಷಣ ವಿಭಾಗದಲ್ಲಿ ಸ್ಮಿತಾ ರಾಜೇಂದ್ರ 5 ಪದಕ, 1 ನಗದು ಬಹುಮಾನ, ಕಾನೂನು ವಿಭಾಗದಲ್ಲಿ ಜೋಯಾ ಫರ್ಹೀನ್ 3 ಪದಕ, 3 ನಗದು ಬಹುಮಾನ, ವಿಜ್ಞಾನ ತಂತ್ರಜ್ಞಾನ ವಿಭಾಗದಲ್ಲಿ ಎಸ್.ಪೂಜಾ 4 ಪದಕ, 2 ನಗದು ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದರು.

ಪಿಹೆಚ್‌ಡಿ, ಪಿಜಿ ಮತ್ತು ಯುಜಿಯಲ್ಲಿ ಒಟ್ಟು 6,378 ಮಂದಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಪ್ರದವಿ ಪಡೆಯುತ್ತಿದ್ದಾರೆ. ಈ ಪೈಕಿ 3,815 ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಅಂತೆಯೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು 1930 ಅಭ್ಯರ್ಥಿಗಳು ಪದವಿ ಪಡೆಯುತ್ತಿದ್ದು, ಈ ಪೈಕಿ 1069 ಮಹಿಳಾ ಅಭ್ಯರ್ಥಿಗಳಾಗಿದ್ದಾರೆ ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಬೆಳಗ್ಗೆ ಮಾತ್ರ ಕೆಲವೇ ಮಂದಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಉಳಿದಂತೆ ಮಧ್ಯಾಹ್ನ 2.30ಕ್ಕೆ ಉಳಿದ ಎಲ್ಲರಿಗೂ ಪದವಿ ಪ್ರದಾನ ಮಾಡಲಾಗುವುದು. ಇದರಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ (ಆಡಳಿತ), ಪ್ರೊ.ಕೆ.ಎಂ.ಮಹದೇವನ್ (ಮೌಲ್ಯಮಾಪನ) ಗೋಷ್ಠಿಯಲ್ಲಿದ್ದರು.

ವೈದ್ಯಕೀಯ ಕ್ಷೇತ್ರದ ದಿಗ್ಗಜ

ಈ ಗೌರವ ಪ್ರದಾನ ಮಾಡುತ್ತಿದೆ. ಈ ಹಿಂದೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಆಂಧ್ರ ಪ್ರದೇಶದ ಎನ್‌ಟಿಆರ್ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಗುಲ್ಬರ್ಗ ವಿವಿ, ತುಮಕೂರು ವಿವಿ, ಹಂಪಿ ಕನ್ನಡ ವಿವಿ ಇವರಿಗೆ ಗೌರವ ಡಾಕ್ಟರೇಟ್ ನೀಡಿದ್ದವು.

ಇಂಗ್ಲಿಷ್ ಮತ್ತು ಕನ್ನಡದಲ್ಲಿ ವೈದ್ಯಕೀಯದ ಬಗ್ಗೆ ಸಮೃದ್ಧ ಬರವಣಿಗೆ ಮಾಡಿರುವ ಇವರು, 250ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಅಲ್ಲದೆ, ಹಂಪಿ ಕನ್ನಡ ವಿಶ್ವವಿದ್ಯಾನಿಲಯವು ಹೊರತಂದ ಕನ್ನಡದ ಮೊಟ್ಟಮೊದಲ ವೈದ್ಯಕೀಯ ವಿಶ್ವಕೋಶವನ್ನು ಸಂಕಲಿಸಿದ ಗೌರವಕ್ಕೂ ಡಾ.ಶಂಕರ್ ಭಾಜನರು.

ವೃತ್ತಿಯಲ್ಲಿ ವೈದ್ಯರಾದ ಇವರು 1936ರ ಜ.1ರಂದು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಹಲಗೇರಿಯಲ್ಲಿ ಜನಿಸಿದರು. ಹುಟ್ಟೂರು ಹಾಗೂ ಚಿತ್ರದುರ್ಗದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಇವರು, ಮೈಸೂರು ಮತ್ತು ದೆಹಲಿಯಲ್ಲಿ ವೈದ್ಯಕೀಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕಲಬುರ್ಗಿಯ ಎಂಆರ್ ಮೆಡಿಕಲ್ ಕಾಲೇಜಿನಲ್ಲಿ ಅಧ್ಯಾಪಕರು ಹಾಗೂ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ, ನಿವೃತ್ತರಾಗಿದ್ದಾರೆ.

ವೃದ್ಧಾಪ್ಯದಲ್ಲಿನ ಕಾಯಿಲೆಗಳು, ಹೃದಯ ಜೋಪಾನ, ಕ್ಯಾನ್ಸರ್, ಹೃದಯ ರೋಗ ತಡೆಗಟ್ಟಿ, ಡಾ.ವಿಕ್ರಂ ಸಾರಾಭಾಯ್ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ರಾಕ್ ಫೆಲ್ಲರ್ ಸ್ಕಾಲರ್ ಇನ್ ರೆಸಿಡೆನ್ಸ್ ಗೌರವ, ಭಾರತ ಸರ್ಕಾರದ ವಿಜ್ಞಾನ ತಂತ್ರಜ್ಞಾನ ಇಲಾಖೆಯ 'ಶ್ರೇಷ್ಠ ವಿಜ್ಞಾನ ಸಂವಹನಕಾರ' ಎಂಬ ಗೌರವ, ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ, ಮೈಸೂರಿನ ವಿಶ್ವಮಾನವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ನುಡಿಸಿರಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ. ಕನ್ನಡ ವಿಶ್ವವಿದ್ಯಾಲಯವು ಪ್ರತಿಷ್ಠಿತ ನಾಡೋಜ ಗೌರವ ಪದವಿ ಪ್ರದಾನ ಮಾಡಿ ಇವರನ್ನು ಗೌರವಿಸಿದೆ.

ಪತ್ರಿಕಾ ರಂಗದ ಮೌಲ್ಯ

'ಮೈಸೂರು ಮಿತ್ರ' ಕನ್ನಡ ಬೆಳಗಿನ ದಿನಪತ್ರಿಕೆ ಪ್ರಾದೇಶಿಕ ಪತ್ರಿಕೆಯಾಗಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಅತೀ ಹೆಚ್ಚು ಪ್ರಸರಣ ಹೊಂದಿದೆ. 1939ರಲ್ಲಿ ಜನಿಸಿದ ಗಣಪತಿಯವರು ಬ್ಯಾಚುಲರ್ ಆಫ್ ಆರ್ಟ್ಸ್ ಮತ್ತು ಕಾನೂನು ಪದವೀ ಧರರಾಗಿದ್ದು, ಮುಂಬೈನ ಭಾರತೀಯ ವಿದ್ಯಾಭವನದಿಂದ 'ಡಿಪ್ಲೋಮಾ ಇನ್ ಜರ್ನಲಿಸಂ' ಪದವಿ ಗಳಿಸಿದ್ದಾರೆ. ಬೆಂಗಳೂರು ಕರ್ನಾಟಕ ಹೈಕೋರ್ಟ್ ಮತ್ತು ಸಿವಿಲ್ ಕೋರ್ಟ್‌ಗಳಲ್ಲಿ 1961ರಿಂದ 1964ರವರೆಗೆ ವಕೀಲರಾಗಿದ್ದರು. ಇವರು ಫ್ರೀ–ಪ್ರೆಸ್ ಜರ್ನಲ್, ಇಂಡಿಯನ್ ಎಕ್ಸ್‌ಪ್ರೆಸ್, ಮುಂಬೈನಲ್ಲಿ ಪತ್ರಕರ್ತರಾಗಿ (ವರದಿಗಾರರು ಮತ್ತು ಉಪ ಸಂಪಾದಕರು) ಕಾರ್ಯನಿರ್ವಹಿಸಿದ್ದಾರೆ. 1970ರಿಂದ 1977ರವರೆಗೆ ಪುಣೆಯ ಸನ್‌ಬೀಂ ಅಡ್ವೈರ್ಟೈಸಿಂಗ್ ಸಂಸ್ಥೆಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. ಸೆ.1, 2021ರಿಂದ ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರದ ಅಧ್ಯಕ್ಷರಾಗಿದ್ದಾರೆ.

ಕೆಬಿಜಿಯವರ ಇಂಗ್ಲೀಷ್ ಪುಸ್ತಕಗಳು: **America An Area of Light**-A travelogue (1993), **The Cross and The coorgs**-A Christian conversion saga (1993), **Abracadabra**-A collection of Abracadabra columns published in Star of Mysore (2003), **Gandhi`s Epistle to Obama**-The journey of a communist towards capitalism (2009), **Star of Mysore**-Story of a unique eveing English newspaper (2018), **Sword of Shivaji**-History of Chhatrapati Shivaji (2021), **Life and Times** (2023).

ಕೆಬಿಜಿಯವರ ಕನ್ನಡ ಪುಸ್ತಕಗಳು: **'ಆದರ್ಶವಾದಿ'** (1992) ಕಾದಂಬರಿ, **'ಕೊಡಗಿನ ಮೇಲೆ ಶಿಲುಬೆಯ ನೆರಳು** (2005–ಕ್ರಿಶ್ಚಿಯನ್ ಮತಾಂತರ ಕುರಿತು), 'ಮೈಸೂರು ಮಿತ್ರ'ದಲ್ಲಿ ಪ್ರಕಟಗೊಂಡ ಭೂಮಂತ್ರ ಅಂಕಣದ ಲೇಖನಗಳ ಕೃತಿ **'ಭೂಮಂತ್ರ'** (2005), **'ಶಿವಾಜಿಯ ಖಡ್ಗ'** (2023).

ಸಂದ ಪ್ರಶಸ್ತಿಗಳು: ಇವರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ–2001, ಹೆಚ್.ಕೆ.ವೀರಣ್ಣಗೌಡ ಪತ್ರಿಕೋದ್ಯಮ ಪ್ರಶಸ್ತಿ–2005, ಕೆಯುಡಬ್ಲ್ಯುಜೆಯ ಪಿ.ಆರ್.ರಾಮಯ್ಯ ಪ್ರಶಸ್ತಿ–2005, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ–2008, ಮೊಹರೆ ಹನುಮಂತರಾಯ ಪ್ರಶಸ್ತಿ–2015, 2023ರಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 'ಜೀವಮಾನ ಸಾಧನೆ ಪ್ರಶಸ್ತಿ'ಯೂ ಕೆಬಿಜಿ ಅವರಿಗೆ ಲಭಿಸಿದೆ.

ಭಾರತೀಯ ಕ್ರಿಕೆಟ್ ಸಾಧಕ

ಬೆಂಗಳೂರಿನಲ್ಲಿ ಕ್ಲಬ್ ಪಂದ್ಯಗಳನ್ನು ಆಡುತ್ತಿದ್ದಾಗ, ರಾಜ್ಯ ರಣಜಿ ತಂಡದ ಆಯ್ಕೆದಾರರಾಗಿ ಭಾರತ ತಂಡದ ಮಾಜಿ ಟೆಸ್ಟ್ ಆಟಗಾರ ಗುಂಡಪ್ಪ ವಿಶ್ವನಾಥ್ ಅವರ ಕಣ್ಣಿಗೆ ಬಿದ್ದರು. 1989ರಲ್ಲಿ ರಣಜಿ ಆಡಿದ್ದ ಅವರು, ತಮ್ಮ ಪ್ರಥಮ ಇನ್ನಿಂಗ್ಸ್‌ನಲ್ಲೇ ಹ್ಯಾಟ್ರಿಕ್ ಗಳಿಸಿ ವಿಶ್ವದ ಗಮನ ಸೆಳೆದಿದ್ದರು. ರಣಜಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಅವರು 1991ರಲ್ಲಿ ರಾಷ್ಟ್ರೀಯ ತಂಡವನ್ನು ಸೇರಿಕೊಂಡರು.

ಯಶಸ್ವಿ ವೇಗದ ಬೌಲರ್: ತಮ್ಮ ಕ್ರಿಕೆಟ್ ಜೀವನದ ಕೊನೆ ವರ್ಷಗಳಲ್ಲಿ ರಿವರ್ಸ್ ಸ್ವಿಂಗ್ ಮೊದಲಾದ ಬೌಲಿಂಗ್ ಶೈಲಿಗಳನ್ನು ಅಳವಡಿಸಿಕೊಂಡ ಜಾವಗಲ್ ಶ್ರೀನಾಥ್ ಅವರು ಭಾರತದ ಪರ 67 ಟೆಸ್ಟ್ ಪಂದ್ಯಗಳಲ್ಲಿ 236 ವಿಕೆಟ್ ಮತ್ತು 229 ಏಕದಿನ ಪಂದ್ಯದಲ್ಲಿ 315 ವಿಕೆಟ್ ಪಡೆದಿದ್ದಾರೆ. 147 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿ 533 ವಿಕೆಟ್ ಕಬಳಿಸಿದ್ದಾರೆ. ಕೆಳಗಿನ ಕ್ರಮಾಂಕಗಳಲ್ಲಿ ಉಪಯುಕ್ತ ಬ್ಯಾಟರ್ ಸಹ ಆಗಿದ್ದ ಅವರು ತಂಡಕ್ಕೆ ಅಗತ್ಯವಿದ್ದಾಗ ಪಿಂಚ್ ಹಿಟ್ಟರ್ ಆಗಿಯೂ ಕಾರ್ಯ ನಿರ್ವಹಿಸಿದ್ದರು.

ಏಕದಿನ ಅಂತಾರಾಷ್ಟ್ರೀಯ ಪಂದ್ಯದಲ್ಲಿ 300 ವಿಕೆಟ್ ಪಡೆದ ಮೊದಲ ಭಾರತೀಯ ವೇಗದ ಬೌಲರ್ ದಾಖಲೆ ಅವರ ಹೆಸರಿನಲ್ಲಿದೆ. ಕ್ರಿಕೆಟ್ ದಂತಕತೆ ಕಪಿಲ್ ದೇವ್ ನಿವೃತ್ತಿ ಬಳಿಕ ದಶಕದವರೆಗೆ ಭಾರತ ತಂಡದ ವೇಗದ ಬೌಲಿಂಗ್‌ನ ನೊಗ ಹೊತ್ತ ಒಟ್ಟು ನಾಲ್ಕು ವಿಶ್ವಕಪ್ (1992ರಿಂದ 2003)ಗಳಲ್ಲಿ ಭಾರತ ತಂಡವನ್ನು ಶ್ರೀನಾಥ್ ಪ್ರತಿನಿಧಿಸಿದ್ದಾರೆ. ತಮ್ಮ ಅಪ್ರತಿಮ ವೇಗದ ಬೌಲಿಂಗ್‌ನಿಂದ ಎದುರಾಳಿಗಳನ್ನು ಕಂಗೆಡಿಸುತ್ತಿದ್ದ ಅವರಿಗೆ ಕ್ರಿಕೆಟ್ ಅಭಿಮಾನಿಗಳು 'ಜಾವಗಲ್ ಎಕ್ಸ್‌ಪ್ರೆಸ್', 'ಮೈಸೂರು ಎಕ್ಸ್‌ಪ್ರೆಸ್' ಬಿರುದು ನೀಡಿದ್ದರು. 2003ರ ವಿಶ್ವಕಪ್ ಬಳಿಕ ಅಂತಾ ರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ ಅವರು ನಿವೃತ್ತಿ ಬಳಿಕ 2010ರಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (KSCA) ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಪ್ರಸಕ್ತ ಐಸಿಸಿ ಮ್ಯಾಚ್ ರೆಫ್ರಿಯಾಗಿ 65 ಟೆಸ್ಟ್, 261 ಏಕದಿನ, 208 ಟಿ20 ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ, ಶ್ರೀನಾಥ್ ಅವರಿಗೆ ಭಾರತ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀನಾಥ್ ಅವರು ಭಾರತ ತಂಡವಲ್ಲದೇ ಕರ್ನಾಟಕದಿಂದ ರಣಜಿ ಕ್ರಿಕೆಟ್ ಮತ್ತು ಇಂಗ್ಲೆಂಡ್ ಕೌಂಟಿ ಕ್ರಿಕೆಟ್‌ನಲ್ಲಿ ಗ್ಲೌಸೆಸ್ಟರ್ ಶೈರ್ ಮತ್ತು ಲೀಸೆಸ್ಟರ್ ಶೈರ್ ತಂಡಗಳ ಪರವಾಗಿಯೂ ಆಡಿದ್ದಾರೆ. ಹಲವು ವರ್ಷಗಳಿಂದ ಮೈಸೂರು ನಿವಾಸಿ ಯಾಗಿದ್ದಾರೆ.

ಕಾವೇರಿ ತೀರ್ಥೋದ್ಭವ

ಎನ್.ಎಸ್.ಭೋಸ ರಾಜು, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಮುಖ್ಯ ಮಂತ್ರಿ ಅವರ ಕಾನೂನು ಸಲಹೆ ಗಾರರು ಹಾಗೂ ಶಾಸಕರಾದ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂಥರ್‌ಗೌಡ, ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಭಾಗ ಮಂಡಲ ಗ್ರಾಪಂ ಅಧ್ಯಕ್ಷ ಎ.ಕಾಳನ ರವಿ ಇತರರು ಪಾಲ್ಗೊಳ್ಳಲಿದ್ದಾರೆ.

ಸಿದ್ಧತೆ: ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಹಿನ್ನೆಲೆ ಶ್ರೀ ಭಾಗಮಂಡಲ ಭಗಂಡೇಶ್ವರ ಮತ್ತು ತಲಕಾವೇರಿ ಪವಿತ್ರ ಕ್ಷೇತ್ರದಲ್ಲಿ ಸಿದ್ಧತೆಗಳು ಭರದಿಂದ ಸಾಗಿವೆ. ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕ ಎ.ಎಸ್.ಪೊನ್ನಣ್ಣ ಭಾನುವಾರ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಸಂಬಂಧ ಭಾಗಮಂಡಲ ದೇವಾಲಯದಲ್ಲಿ ನಂದಾದೀಪ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು, ತಕ್ಕ ಮುಖ್ಯಸ್ಥರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಕ್ಷಯ ಪಾತ್ರೆ ಇರಿಸಿದರು. ಅಲ್ಲದೆ, ಸಿದ್ಧತೆಗಳನ್ನು ಸಚಿವರು ಪರಿಶೀಲಿಸಿದರು. ಸಾಂಸ್ಕೃತಿಕ ಗೀತಾ ಗಾಯನ ಕಾರ್ಯಕ್ರಮಕ್ಕೆ ವೇದಿಕೆ ನಿರ್ಮಾಣ, ಭಕ್ತಾದಿಗಳ ಅನುಕೂಲಕ್ಕಾಗಿ ಬ್ಯಾರಿಕೇಡ್ ನಿರ್ಮಾಣ, ಅಗತ್ಯ ವ್ಯವಸ್ಥೆಗಳು ಮತ್ತಿತರ ಸಿದ್ಧತೆ ಬಗ್ಗೆ ಮಾಹಿತಿ ಪಡೆದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಸಂಬಂಧಿಸಿದಂತೆ ಸಿದ್ಧತೆ ಬಗ್ಗೆ ಹಲವು ಮಾಹಿತಿ ನೀಡಿದರು.

ಮೈಸೂರು ವಿವಿಯಲ್ಲಿ 665 ಬೋಧಕರ ಮಂಜೂರಾತಿ ಹುದ್ದೆಗಳ ಪೈಕಿ 420 ಖಾಲಿ

ಅತಿಥಿ–ಆಹ್ವಾನಿತ ಉಪನ್ಯಾಸಕರ ಮೂಲಕ ಸರಿದೂಗಿಸಲಾಗುತ್ತಿದೆ; ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್



ಮೈಸೂರು,ಅ.16(ಪಿಎಂ)–ಮೈಸೂರು ವಿವಿಯಲ್ಲಿ 665 ಬೋಧಕರ ಮಂಜೂರಾತಿ ಹುದ್ದೆಗಳಾಗಿದ್ದು, ಈ ಪೈಕಿ 420 ಹುದ್ದೆಗಳು ಖಾಲಿ ಉಳಿದಿವೆ. ಅತಿಥಿ ಉಪನ್ಯಾಸಕರು, ಆಹ್ವಾನಿತ ಉಪನ್ಯಾಸಕರ ಮೂಲಕ ಸರಿದೂಗಿಸಲಾಗುತ್ತಿದೆ ಎಂದು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವಿಯ ಖಾಲಿ ಹುದ್ದೆಗಳ ಸಂಬಂಧ ಪ್ರತಿಕ್ರಿಯಿಸಿ, 665 ಬೋಧಕರ ಮಂಜೂರಾತಿ ಹುದ್ದೆಗಳಾಗಿದ್ದು, ಪ್ರಸ್ತುತ 420 ಹುದ್ದೆಗಳು ಖಾಲಿ ಉಳಿದಿವೆ. ಕಳೆದ 17 ವರ್ಷ ಗಳಿಂದ ಯಾವುದೇ ನೇಮಕಾತಿಗಳು ಆಗಿಲ್ಲ. ಅತಿಥಿ ಉಪನ್ಯಾಸಕರು, ಆಹ್ವಾನಿತ ಉಪನ್ಯಾಸಕರ ಮೂಲಕ ಸರಿದೂಗಿಸಲಾಗುತ್ತಿದೆ. ಸುಮಾರು 900 ಮಂದಿ ಅತಿಥಿ ಉಪನ್ಯಾಸಕರಿದ್ದಾರೆ ಎಂದರು. ಮಂಜೂರಾತಿ ಹುದ್ದೆಗಳ ಭರ್ತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದು, ಸರ್ಕಾರದಲ್ಲಿ ಚರ್ಚೆ ಹಂತದಲ್ಲಿದೆ. ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದು, ಕಚೇರಿಗೆ ಬಂದು ಈ ಸಂಬಂಧ ಚರ್ಚೆ ಮಾಡುವಂತೆ ಅವರು ಸೂಚಿಸಿದ್ದಾರೆ ಎಂದು ತಿಳಿಸಿದರು.

ಶೀಘ್ರ 104ನೇ ಘಟಿಕೋತ್ಸವ: ಈಗಾಗಲೇ 104ನೇ ಘಟಿಕೋತ್ಸವಕ್ಕೆ ಸಿದ್ಧತೆ ನಡೆಸಲಾಗಿದ್ದು, ನವೆಂಬರ್ ಇಲ್ಲವೇ ಡಿಸೆಂಬರ್‌ನಲ್ಲಿ ಇದು ಜರುಗಲಿದೆ ಎಂದರು. ಆಯಾಯ ಜಿಲ್ಲೆಗಳಿಗೆ ಹೊಸ ವಿವಿಗಳು ಬಂದ ಬಳಿಕ ಮೈಸೂರು ವಿವಿಗೆ ಅಧೀನಕ್ಕೆ ಎಷ್ಟು ಕಾಲೇಜುಗಳು ಬರಲಿವೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಹಿಂದೆ 232 ಕಾಲೇಜುಗಳು ಮೈಸೂರು ವಿವಿ ಅಧೀನಕ್ಕೆ ಬರುತ್ತಿದ್ದವು. ಈಗ ಮೈಸೂರು ಜಿಲ್ಲೆಗೆ ಮಾತ್ರ ನಮ್ಮ ವ್ಯಾಪ್ತಿ ಸೀಮಿತಗೊಂಡಿದೆ. ಹಾಗಾಗಿ ಜಿಲ್ಲೆಯ 111 ಕಾಲೇಜುಗಳು ನಮ್ಮ ವಿವಿ ವ್ಯಾಪ್ತಿಗೆ ಬರಲಿವೆ ಎಂದರು.

ಈಗ ನಮ್ಮ ವ್ಯಾಪ್ತಿಯ ಯುಜಿ ಕಾಲೇಜುಗಳಲ್ಲಿ ಪ್ರಥಮ ವರ್ಷಕ್ಕೆ 10 ಸಾವಿರ ಮಕ್ಕಳು ಕಡಿಮೆಯಾಗಿದ್ದಾರೆ. ಈ ಘಟಿಕೋತ್ಸವದಲ್ಲಿ ಬೇರೆ ಜಿಲ್ಲೆಗಳ ಕಾಲೇಜುಗಳೂ ಒಳಗೊಂಡಿವೆ. 2025ಕ್ಕೆ ಇದು ಬದಲಾವಣೆ ಆಗಿ ಜಿಲ್ಲೆಯ ಕಾಲೇಜಿಗಳಿಗೆ ಮಾತ್ರವೇ ಸೀಮಿತಗೊಳ್ಳಲಿದೆ. ಕಾಲೇಜುಗಳ ಸಂಖ್ಯೆ ವಿವಿ ಅಧೀನಕ್ಕೆ ಇಳಿಕೆಯಾದ ಹಿನ್ನೆಲೆಯಲ್ಲಿ ಆಂತರಿಕ ಆದಾಯ ಕಡಿಮೆಯಾಗಿದೆ. ಸರ್ಕಾರದಿಂದ ಸದ್ಯ ಅನುದಾನ ಬಂದಿಲ್ಲ. ಅನುದಾನ ಬಂದಲ್ಲಿ ವಿವಿಯಲ್ಲಿ ಸಾಕಷ್ಟು ಸುಧಾರಣೆ ತರಲು ಸಾಧ್ಯವಾಗಲಿದೆ ಎಂದು ಹೇಳಿದರು. ಇತರೆ ಜಿಲ್ಲೆಗಳಲ್ಲಿ ಹೊಸ ವಿವಿಗಳ ಆರಂಭದಿಂದ ಮೈಸೂರು ವಿವಿ ಆದಾಯದಲ್ಲಿ ಎಷ್ಟು ಕೊರತೆ ಉಂಟಾಗಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನಮಗೆ ಬರುವುದೇ ಪ್ರವೇಶಾತಿ ಶುಲ್ಕವಾಗಿದ್ದು, ಈಗ ಈ ಪ್ರಕ್ರಿಯೆ ಆರಂಭವಾಗಿದೆ. ಹಾಗಾಗಿ ಎರಡು ತಿಂಗಳ ಬಳಿಕ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದರು. ನಿಗದಿತ ಶೈಕ್ಷಣಿಕ ಅರ್ಹತೆ ಇಲ್ಲವಾದರೆ ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳುವುದಿಲ್ಲ. ಅಂತಹ ಶೈಕ್ಷಣಿಕ ಅರ್ಹತೆ ಇಲ್ಲದವರು ಬಾರದೇ ಇದ್ದ ಸಂದರ್ಭ ದಲ್ಲಿ ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾಗುತ್ತದೆ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು. ಆನ್‌ಲೈನ್ ಕೋರ್ಸ್ ಬೇಡಿಕೆ ಸಂಬಂಧ ಪ್ರತಿಕ್ರಿಯಿಸಿ, ಇದಕ್ಕೆ ಬೇಡಿಕೆ ಉತ್ತಮವಾಗಿದೆ. ಯಾವ್ಯಾವ ಪರೀಕ್ಷೆ ನಮ್ಮ ವಿವಿಯಿಂದ ನಡೆದಿದೆಯೋ ಆ ಎಲ್ಲದರ ಪದವಿ ಪ್ರದಾನ ಇದರಲ್ಲೇ ಒಳಗೊಂಡಿದೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಪಿಂಚಣಿ ಪಡೆಯುವವರು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದ್ದಾರೆ. ಯುಜಿಸಿಯಿಂದ ಅನುದಾನ ಇಳಿಕೆ ಮಾಡಲಾಗಿದೆ. ಈಗ ಯಾವುದೇ ವಿವಿಗಳಿಗೆ ಹೆಚ್ಚಿನ ಅನುದಾನ ದೊರೆಯುತ್ತಿಲ್ಲ. ಶೀಘ್ರದಲ್ಲಿ ಹೊಸದಾಗಿ ಮತ್ತೆ ಅನುದಾನ ಬಿಡುಗಡೆಗೆ ಕ್ರಮ ವಹಿಸುವ ಮಾಹಿತಿ ಇದೆ. ಅನುದಾನ ಇಳಿಕೆಯಿಂದ ಸಂಶೋಧನಾ ಕ್ಷೇತ್ರದಲ್ಲಿ ಖಂಡಿತ ತೊಂದರೆ ಉಂಟಾಗಿದೆ. ಈ ಮೊದಲು ಉದಾರತೆಯಿಂದ ಅನುದಾನ ಕೊಡಲಾಗುತ್ತಿತ್ತು ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಶಿಲ್ಪಕಲಾ, ಚಿತ್ರಕಲಾ ಪ್ರದರ್ಶನ ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು,ಅ.16(ಎಂಟಿವೈ)– ದಸರಾ ಹಿನ್ನೆಲೆಯಲ್ಲಿ ಕಲಾಮಂದಿರದ ಆವರಣ ಹಾಗೂ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿರುವ ಶಿಲ್ಪಕಲಾ ಮತ್ತು ಚಿತ್ರಕಲಾ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಯುವರಾಜ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಕಲಾಮಂದಿರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಕೆ.ಹರೀಶ್‌ಗೌಡ ಹಾಗೂ ಇನ್ನಿತರರೊಂದಿಗೆ ಆಗಮಿಸಿ ಪ್ರದರ್ಶನದಲ್ಲಿಡಲಾಗಿದ್ದ ಶಿಲ್ಪಕಲೆಗಳನ್ನು ವೀಕ್ಷಿಸಿದರು. ಬಳಿಕ ಮೈಸೂರಿನ ಪತ್ರಿಕಾ ಛಾಯಾಗ್ರಾಹಕರ ಬಳಗವು ಏರ್ಪಡಿಸಿದ್ದ ಛಾಯಾ ಚಿತ್ರಗಳನ್ನು ವೀಕ್ಷಿಸಿ, ಛಾಯಾಗ್ರಾಹಕರಿಂದ ಮಾಹಿತಿ ಪಡೆದರು.

ಈ ವೇಳೆ ಪತ್ರಿಕಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಪ್ರಗತಿಗೋಪಾಲಕೃಷ್ಣ, ಉಪಾಧ್ಯಕ್ಷ ಎಸ್.ಆರ್.ಮಧುಸೂದನ್, ಪ್ರಧಾನ ಕಾರ್ಯದರ್ಶಿ ಎಂ.ಎನ್.ಲಕ್ಷ್ಮಿನಾರಾಯಣ್ ಯಾದವ್, ಖಜಾಂಚಿ ನಂದನ್, ಸದಸ್ಯರಾದ ಉದಯ್‌ಶಂಕರ್, ಹಂಪಾನಾಗರಾಜ್, ಎಂ.ಎಸ್.ಅನುರಾಗ್ ಬಸವರಾಜು, ಶ್ರೀರಾಮ್, ಚಂದ್ರು, ಕೃಷ್ಣೋಜಿ ರಾವ್, ಅನೂಪ್ ತಿಪ್ಪೇಸ್ವಾಮಿ, ನಾಗೇಶ್ ಪಾಣತ್ತಲೆ, ನಿಶಾಂತ್, ಗವಿಮಠ ರವಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗೋಲ್ಡ್ ಕಾರ್ಡ್ ಕುರಿತು ಇಂದು ಸ್ಪಷ್ಟನೆ; ಆನ್‌ಲೈನ್ ಮೂಲಕವಷ್ಟೇ ಮಾರಾಟ

ವಿಳಂಬಕ್ಕೆ ಸಾರ್ವಜನಿಕರ ಬೇಸರ

ಮೈಸೂರು, ಅ.16(ಎಸ್‌ಬಿಡಿ)– ದಸರಾ ಆರಂಭವಾಗಿ ಎರಡು ದಿನ ಕಳೆದರೂ ಬೇಡಿಕೆಯ ಗೋಲ್ಡ್ ಕಾರ್ಡ್ ಬಿಡುಗಡೆ ಮಾಡದಿರುವ ಬಗ್ಗೆ ಪ್ರವಾಸಿಗರು ಬೇಸರ ವ್ಯಕ್ತಪಡಿಸಿದ್ದಾರೆ.



ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ದಸರಾ ವಿಶೇಷಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು, ಮಂಗಳವಾರ ಮಧ್ಯಾಹ್ನದೊಳಗೆ ಸುದ್ದಿಗೋಷ್ಠಿ ನಡೆಸಿ, ಗೋಲ್ಡ್ ಕಾರ್ಡ್ ಬಿಡುಗಡೆ, ಬೆಲೆ, ಕಾರ್ಡ್ ಸಂಖ್ಯೆ ಇನ್ನಿತರ ಎಲ್ಲಾ ಮಾಹಿತಿ ನೀಡಲಾಗುವುದು. ಆದರೆ ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಮಾರಾಟ ಮಾಡಲಾಗುವುದು ಎಂದು ತಿಳಿಸಿದರು.

ಈ ಬಾರಿ ಗೋಲ್ಡ್ ಕಾರ್ಡ್‌ಗೆ 5,999 ರೂ. ನಿಗದಿಪಡಿಸಬಹುದು ಎಂದು ಬೇರೊಂದು ಮೂಲದಿಂದ ತಿಳಿದು ಬಂದಿದೆಯಾದರೂ ಈ ಬಗ್ಗೆ ಜಿಲ್ಲಾಡಳಿತ ಸ್ಪಷ್ಟಪಡಿಸಿಲ್ಲ. ನಿಖರ ಬೆಲೆ, ಬಿಡುಗಡೆ ಮಾಡುವ ಕಾರ್ಡ್ ಸಂಖ್ಯೆ, ಒಂದು ಕಾರ್ಡ್‌ನಲ್ಲಿ ಎಷ್ಟು ಜನರಿಗೆ ಪ್ರವೇಶ ಸೇರಿದಂತೆ ಪರಿಪೂರ್ಣ ಮಾಹಿತಿ ತಿಳಿಯಬೇಕಿದೆ.

ವಿಳಂಬಕ್ಕೆ ಬೇಸರ: ದೇಶ–ವಿದೇಶಗಳಿಂದ ದಸರಾ ನೋಡಲೆಂದೇ ಆಗಮಿಸುವ ಪ್ರವಾಸಿಗರಿಗೆ ಗೋಲ್ಡ್ ಕಾರ್ಡ್ ತುಂಬಾ ಉಪಯುಕ್ತ. ಗೋಲ್ಡ್ ಕಾರ್ಡ್ ಖರೀದಿಸಿದರೆ ದಸರಾ ಉದ್ಘಾಟನೆಯಿಂದ ಪಂಜಿನ ಕವಾಯತುವರೆಗೆ ಎಲ್ಲಾ ಕಾರ್ಯಕ್ರಮಗಳನ್ನೂ ಸುಲಭವಾಗಿ ವೀಕ್ಷಣೆ ಮಾಡುವ ಅವಕಾಶವಿರುತ್ತದೆ. ಜಂಬೂಸವಾರಿ ದಿನ ಅರಮನೆ ಆವರಣ ಹಾಗೂ ಪಂಜಿನ ಕವಾಯತು ಮೈದಾನದಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆ ಇರುತ್ತದೆ. ಹೀಗಾಗಿ ಪ್ರವಾಸಿಗರ ಅನುಕೂಲಕ್ಕಾಗಿ ಹಿಂದೆ ದಸರಾ ಚಾಲನೆಗೆ ಮುಂಚೆಯೇ ಗೋಲ್ಡ್ ಕಾರ್ಡ್ ಮಾರಾಟ ಮಾಡಲಾಗುತ್ತಿತ್ತು. ಆದರೆ ಕೆಲ ವರ್ಷಗಳಿಂದ ವಿಳಂಬವಾಗುತ್ತಿದೆ. ಕಳೆದ ವರ್ಷ ಸೆ.26ಕ್ಕೆ ದಸರಾ ಚಾಲನೆಯಾದರೆ ಸೆ.28ಕ್ಕೆ ಗೋಲ್ಡ್ ಕಾರ್ಡ್ ಮಾರಾಟ ಮಾಡಲಾಗಿತ್ತು. ಆದರೆ ಈ ಬಾರಿ ಮೂರ್‍ನಾಲ್ಕು ದಿನ ವಿಳಂಬವಾಗಿರುವುದರಿಂದ ಕಾರ್ಡ್‌ಗೆ ಕಾತುರರಾಗಿರುವವರು ಬೇಸರ ವ್ಯಕ್ತಪಡಿಸಿದ್ದಾರೆ.

ಕಾಳಸಂತೆ ಆರೋಪವಿತ್ತು!: ಕಳೆದ ಬಾರಿ 4,999 ರೂ. ಬೆಲೆಯ ಒಂದು ಸಾವಿರ ಗೋಲ್ಡ್ ಕಾರ್ಡ್‌ಗಳು ಆನ್‌ಲೈನ್‌ನಲ್ಲಿ ಕೇವಲ 7 ಗಂಟೆಯಲ್ಲೇ ಖಾಲಿ ಆಗಿದ್ದವು. ಮೃಗಾಲಯ, ಚಾಮುಂಡಿಬೆಟ್ಟ, ಫಲಪುಷ್ಪ ಪ್ರದರ್ಶನ, ದಸರಾ ವಸ್ತು ಪ್ರದರ್ಶನ, ರೈಲ್ವೆ ಮ್ಯೂಸಿಯಂ, ಐತಿಹಾಸಿಕ ಚರ್ಚ್, ಕೆಆರ್‌ಎಸ್‌ಗೆ ಒಂದು ಬಾರಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ ಗೋಲ್ಡ್ ಕಾರ್ಡ್ ಮಾರಾಟದ ಬೆನ್ನಲ್ಲೇ ಹೆಚ್ಚು ಬೆಲೆಗೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ ಎಂಬ ಆರೋಪ ಕೇಳಿಬಂದಿತ್ತು. ಅದಕ್ಕೆ ಪೂರಕವೆಂಬಂತೆ ಬೆಂಗಳೂರಿನ ಟ್ರಾವೆಲ್ಸ್ ಏಜೆನ್ಸಿಯೊಂದರ ಉದ್ಯೋಗಿ ಗೋಲ್ಡ್ ಕಾರ್ಡ್‌ಗೆ 7 ಸಾವಿರ ರೂ. ಹೇಳಿದ್ದ ಸಂಭಾಷಣೆ ವೈರಲ್ ಆಗಿತ್ತು.

ಮಗನ ಸಾವಿನಿಂದ ನೊಂದು ಕೃಷ್ಣರಾಜ ನಾಲೆಗೆ ಹಾರಿ ಪೋಷಕರು ಆತ್ಮಹತ್ಯೆ

ಹಾಸನ: ಹೆತ್ತ ಮಗನ ಸಾವಿನ ನೋವಿನಿಂದ ಹೊರಬರಲು ಸಾಧ್ಯವಾಗದೇ ಪೋಷಕರು ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಹಾಸನದಲ್ಲಿ ನಡೆದಿದೆ. ಹಾಸನದ ಅರಕಲಗೂಡು ತಾಲೂಕಿನ ರಾಮನಾಥಪುರ ಗ್ರಾಮದ ಬಳಿ ಕೃಷ್ಣರಾಜ ನಾಲೆಗೆ ಹಾರಿ ದಂಪತಿ ಸಾವನ್ನಪ್ಪಿದ್ದಾರೆ. ಮೃತರನ್ನು ಪಿರಿಯಾಪಟ್ಟಣ ಮೂಲದ 49 ವರ್ಷದ ರಂಗಸ್ವಾಮಿ ಮತ್ತು ಅವರ ಪತ್ನಿ 45 ವರ್ಷದ ಕನಕ ಎಂದು ಗುರುತಿಸಲಾಗಿದೆ.

ಕೆಲ ವರ್ಷದ ಹಿಂದೆ ಮಗ ಮೃತಪಟ್ಟಿದ್ದ. ಮಗನ ಸಾವಿನ ಬಳಿಕ ದಂಪತಿ ಖಿನ್ನತೆಗೆ ಒಳಗಾಗಿದ್ದರು. ಕೊನೆಗೆ ಕಠಿಣ ನಿರ್ಧಾರ ಮಾಡಿದ್ದು ಇಬ್ಬರು ನಾಲೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿರಬಹುದು ಎಂದು ಶಂಕಿಸಲಾಗಿದೆ. ಮೂರು ದಿನಗಳಿಂದ ದಂಪತಿ ನಾಪತ್ತೆಯಾಗಿದ್ದರು. ಇನ್ನು ಅವರ ಬೈಕ್ ನಾಲೆಯ ಬಳಿ ಮೂರು ದಿನಗಳಿಂದ ನಿಂತಿದ್ದನ್ನು ಸ್ಥಳೀಯರು ಗಮನಿಸಿದ್ದಾರೆ. ನಂತರ ನಾಲೆಯಲ್ಲಿ ಹುಡುಕಾಟ ನಡೆಸಿದ ಬಳಿಕ ಅವರ ಮೃತದೇಹಗಳು ಪತ್ತೆಯಾಗಿವೆ. ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಪೊಲೀಸರು ಆತ್ಮಹತ್ಯೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅ. 21ಕ್ಕೆ ಇಸ್ರೋದ ಮಹತ್ವಾಕಾಂಕ್ಷಿ ಗಗನಯಾನ್ ಮಿಷನ್ TV-D1 ಪರೀಕ್ಷೆ

ನವದೆಹಲಿ: ಗಗನಯಾನ್ ಮಿಷನ್ ಕುರಿತಂತೆ ಇಸ್ರೋ ದೊಡ್ಡ ಘೋಷಣೆ ಮಾಡಿದೆ. ಈ ಮಿಷನ್‌ಗೆ ಸಂಬಂಧಿಸಿದ ಟಿವಿ–ಡಿ1 ಪರೀಕ್ಷೆಯನ್ನು ಅಕ್ಟೋಬರ್ 21ರಂದು ನಡೆಸಲಾಗುತ್ತದೆ ಎಂದು ಇಸ್ರೋ ಹೇಳಿದೆ.

TV-D1 ಪರೀಕ್ಷಾ ಹಾರಾಟವನ್ನು 2023ರ ಅಕ್ಟೋಬರ್ 21ರಂದು ಶ್ರೀಹರಿಕೋಟಾದ SDSC-SHAR ನಿಂದ ಬೆಳಗ್ಗೆ 7ರಿಂದ 9ರವರೆಗೆ ನಿಗದಿಪಡಿಸಲಾಗಿದೆ.

ಪರೀಕ್ಷೆಯಲ್ಲಿ ಮಾಡ್ಯೂಲ್ ಅನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿ ನಂತರ ಭೂಮಿಗೆ ಹಿಂತಿರುಗಿಸುವುದನ್ನು ಒಳಗೊಂಡಿರುತ್ತದೆ. ಅದು ಬಂಗಾಳ ಕೊಲ್ಲಿಯಲ್ಲಿ ಇಳಿದ ನಂತರ ಅದರ ಕುರಿತ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಮಾಡ್ಯೂಲ್ ಅನ್ನು ಹಿಂದಿರುಗಿಸುವ ಪ್ರಕ್ರಿಯೆ ಸಂಬಂಧ ನೌಕಾಪಡೆಯು ಈಗಾಗಲೇ 'ಅಣಕು ಕಾರ್ಯಾಚರಣೆ'ಯನ್ನು ಪ್ರಾರಂಭಿಸಿದೆ ಎಂದು ಅವರು ಹೇಳಿದರು.

ಪರೀಕ್ಷಾ ವಾಹನವು ಏಕ–ಹಂತದ ರಾಕೆಟ್ ಆಗಿದ್ದು, ಈ ಕಾರ್ಯಾಚರಣೆಗಾಗಿಯೇ ಅಭಿವೃದ್ಧಿಪಡಿಸಲಾಗಿದೆ. ಇದರ ಪೇಲೋಡ್ ವೇಗದ ಮೋಟಾರ್, 'CM ಫೇರಿಂಗ್' ಮತ್ತು 'ಇಂಟರ್‌ಫೇಸ್ ಅಡಾಪ್ಟರ್' ಜೊತೆಗೆ 'ಕ್ರೂ ಮಾಡ್ಯೂಲ್' (CM) ಮತ್ತು 'ಕ್ರೂ ಎಸ್ಕೇಪ್ ಸಿಸ್ಟಮ್'ನಂತಹ ಸಾಧನಗಳನ್ನು ಒಳಗೊಂಡಿದೆ. CM ಜೊತೆಗಿನ CES ಅನ್ನು ಪರೀಕ್ಷಾ ವಾಹನದಿಂದ ಸರಿಸುಮಾರು 17 ಕಿಲೋಮೀಟರ್ ಎತ್ತರದಲ್ಲಿ ಬೇರ್ಪಡಿಸಲಾಗುತ್ತದೆ. ಸಿಇಎಸ್ ಅನ್ನು ಡಿಸ್‌ಅಸೆಂಬಲ್ ಮಾಡಿದ ನಂತರ, ಶ್ರೀಹರಿಕೋಟಾ ಕರಾವಳಿಯಿಂದ 10 ಕಿಲೋಮೀಟರ್ ದೂರದಲ್ಲಿರುವ ಸಮುದ್ರದಲ್ಲಿ ಪರೀಕ್ಷೆಯನ್ನು ನಡೆಸಲಾಗುವುದು.

ಅಕ್ಟೋಬರ್ 21ರಂದು ಮೊದಲ ಟಿವಿ–ಡಿ1 ಪರೀಕ್ಷಾ ಹಾರಾಟದ ನಂತರ, ಬಾಹ್ಯಾಕಾಶ ಸಂಸ್ಥೆ ಮಹತ್ವಾಕಾಂಕ್ಷೆಯ ಗಗನಯಾನ್ ಕಾರ್ಯಕ್ರಮದ ಮೂರು ಪರೀಕ್ಷಾ ಹಾರಾಟದ ಕಾರ್ಯಾಚರಣೆಗಳನ್ನು ನಡೆಸಲಿದೆ. ಎರಡನೇ ಹಂತದ ಅಡಿಯಲ್ಲಿ ಪರೀಕ್ಷಾ ವಾಹನ ಕಾರ್ಯಾಚರಣೆಗಳನ್ನು (TV-D3 ಮತ್ತು D4) ಮತ್ತು LVM3-G2 ಅನ್ನು ರೋಬೋಟಿಕ್ ಪೇಲೋಡ್‌ಗಳೊಂದಿಗೆ ಕಳುಹಿಸಲು ಯೋಜಿಸಲಾಗಿದೆ. ಗಗನಯಾನ್ ಕಾರ್ಯಾಚರಣೆಯಲ್ಲಿ, ಮಾನವ ಸಿಬ್ಬಂದಿಯನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಗುವುದು. ನಂತರ ಅವರನ್ನು ಸುರಕ್ಷಿತವಾಗಿ ಹಿಂದೂ ಮಹಾಸಾಗರದಲ್ಲಿ ಇಳಿಸಲಾಗುತ್ತದೆ.

ದೀಪಾಲಂಕಾರದಲ್ಲಿ ಜಗಮಗಿಸುತ್ತಿರುವ ಸಾಂಸ್ಕೃತಿಕ ಮೈಸೂರು

ದಸರಾ ದೀಪಾಲಂಕಾರ ವೀಕ್ಷಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ







ಮೈಸೂರು, ಅ.16(ಎಂಕೆ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಮೈಸೂರು ನಗರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಸಂಜೆ ವೀಕ್ಷಿಸಿದರು.

ಜೆ.ಎಸ್.ಎಸ್ ಮಹಾವಿದ್ಯಾಪೀಠ ವೃತ್ತದಲ್ಲಿನ ಭಾರತ ಸಂವಿಧಾನದ ಪ್ರಸ್ತಾವನೆಯಿಂದ ಪ್ರಾರಂಭಗೊಂಡು ವೃತ್ತದ ಸುತ್ತಲೂ ಪ್ರಜಾಪ್ರಭುತ್ವದ ಮುನ್ನುಡಿ, ವಿಶ್ವದ ಪ್ರಥಮ ಸಂಸತ್ತು ಅನುಭವ ಮಂಟಪ, ಸ್ವಾತಂತ್ರ್ಯ ಹೋರಾಟ, ಬಹುತ್ವದ ಸಮೃದ್ಧ ಭಾರತ ಪರಿಕಲ್ಪನೆಯಲ್ಲಿ ರೂಪಿಸಿರುವ ದೀಪಾಲಂಕಾರವನ್ನು ಕಣ್ತುಂಬಿಕೊಂಡರು.

ಬಳಿಕ ತೆರೆದ ವಾಹನದ ಮೂಲಕ ದೊಡ್ಡಕೆರೆ ಮೈದಾನದಲ್ಲಿ ಬುದ್ಧ, ಬಸವ, ಡಾ.ಬಿ.ಆರ್.ಅಂಬೇಡ್ಕರ್, ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ವಿವೇಕಾನಂದರು, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ವೀಕ್ಷಣೆ ಮಾಡಿದರು. ನಂತರ ಜಯಚಾಮರಾಜೇಂದ್ರ ವೃತ್ತ ಹಾಗೂ ಕೃಷ್ಣರಾಜ ಒಡೆಯರ್ ವೃತ್ತದ ಮಾರ್ಗವಾಗಿ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಸಾಗಿ ಎಲ್‌ಐಸಿ ವೃತ್ತದಲ್ಲಿ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ದೀಪಾಲಂಕಾರ ನೋಡಿದರು.

ಅಲ್ಲಿಂದ ರೈಲ್ವೆ ಸ್ಟೇಷನ್, ದಾಸಪ್ಪ ವೃತ್ತದ ಮೂಲಕ ಸಾಗಿ ರಾಮಸ್ವಾಮಿ ವೃತ್ತದಲ್ಲಿನ ಹಂಪಿಯ ಕಲ್ಲಿನ ರಥ ಮಾದರಿ ಹಾಗೂ ವೃತ್ತದ ಮಧ್ಯದಲ್ಲಿ ಚಂದ್ರಯಾನ ಸೇರಿದಂತೆ ಅನೇಕ ವೃತ್ತಗಳಲ್ಲಿ ಜಗಮಗಿಸುತ್ತಿರುವ ದೀಪಾಲಂಕಾರವನ್ನು ವೀಕ್ಷಿಸಿದ ಸಚಿವರು ಹರ್ಷ ವ್ಯಕ್ತಪಡಿಸಿದರು.

ರಾತ್ರಿ 11 ಗಂಟೆಯವರೆಗೂ ಜಗಮಗಿಸಲಿದೆ ಮೈಸೂರು

ಮೈಸೂರು ದಸರಾ ಉತ್ಸವಕ್ಕೆ ಪ್ರವಾಸಿಗರನ್ನು ಆಕರ್ಷಣೆ ಮಾಡುವ ಹಿನ್ನೆಲೆ ಸಂಜೆ 7 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ದೀಪಾಲಂಕಾರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ. ಈ ಮೊದಲು ಸಂಜೆ 7 ರಿಂದ ರಾತ್ರಿ 9 ಗಂಟೆಯವರೆಗೆ ಮಾತ್ರ ಅಲಂಕೃತ ವಿದ್ಯುತ್ ದೀಪಗಳನ್ನು ಬೆಳಗಿಸಲು ನಿರ್ಧರಿಸಲಾಗಿತ್ತು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ರಾತ್ರಿ 11 ಗಂಟೆವರೆಗೂ ದೀಪಾಲಂಕಾರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಚೆಸ್ಕಾಂ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಜನರೇ ಆಚರಿಸಿದರೆ ದಸರಾ ಭರ್ಜರಿ ಉತ್ಸವ

ದಸರಾ ಪುಸ್ತಕ ಮೇಳದಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ'ಯಲ್ಲಿ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ವಿಶ್ಲೇಷಣೆ



ಮೈಸೂರು,ಅ.16(ಎಸ್‌ಪಿಎನ್)– ನಾಡಹಬ್ಬ ದಸರಾವನ್ನು ಅಧಿಕಾರಿಗಳು ಸಂಘಟಿಸಿದರೆ, ಅದ್ದೂರಿ ಕಾರ್ಯಕ್ರಮ ಆಗುತ್ತದೆ. ಅದೇ ಜನಸಾಮಾನ್ಯರು ಆಚರಿಸಿದರೆ, ಅದು ದೊಡ್ಡಹಬ್ಬವಾಗುತ್ತದೆ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಕರ್ನಾಟಕ ಜಾನಪದ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ನೃತ್ಯ, ಶಿಲ್ಪಕಲಾ ಹಾಗೂ ಲಲಿತಕಲಾ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ದಸರಾ ಮಹೋತ್ಸವ–2023ರ ಎರಡನೇ ದಿನದ 'ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ'ದಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಂಸ್ಕೃತಿ ವಿಷಯವಾಗಿ ಸರ್ಕಾರ ಎಂದಿಗೂ ಹಬ್ಬ, ಜಾತ್ರೆಗಳನ್ನು ಆಚರಿಸಲು ಸಾಧ್ಯವಿಲ್ಲ. ಆದರೆ, ಜನಸಾಮಾನ್ಯರು ಯಾವುದೇ ಕಾರ್ಯಕ್ರಮಗಳನ್ನು ಸಂಸ್ಕೃತಿಯ ಭಾಗವಾಗಿ ಸಂಘಟಿಸಿ ಹಬ್ಬದ ರೂಪದಲ್ಲಿ ಸಂಭ್ರಮಿಸುತ್ತಾರೆ. ಇದು ಸಂಸ್ಕೃತಿ ಭಾಗ. ಹಾಗಾಗಿ ನಾಡಹಬ್ಬ ದಸರಾ ವಿಷಯದಲ್ಲಿ ಸರ್ಕಾರ ವೇದಿಕೆ ಕಲ್ಪಿಸಿ ಜನರ ಆಲೋಚನೆಗೆ ತಕ್ಕಂತೆ ಆಚರಿಸಲು ಬಿಡಬೇಕು ಎಂದರು.

ನಾವು ಯಾವುದೇ ವಿಷಯದಲ್ಲೂ ಋಣಾತ್ಮಕವಾಗಿ ನೋಡುವ ಬದಲು ಧನಾತ್ಮಕವಾಗಿ ಯೋಚಿಸಬೇಕು. ಅದೇ ರೀತಿ ಕನ್ನಡ ಪುಸ್ತಕೋದ್ಯಮ ಆರ್ಥಿಕವಾಗಿ ಸೊರಗುತ್ತಿದೆ ಎನ್ನುವ ಪ್ರಕಾಶಕರು ಧನಾತ್ಮಕವಾಗಿ ಯೋಚಿಸಬೇಕು. ಈ ಉದ್ಯಮ ಚೇತರಿಕೆಗೆ ಸರ್ಕಾರ ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಇದರ ಭಾಗವಾಗಿ ದಸರಾ ಮಹೋತ್ಸವದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದರು.

ಈ ವೇಳೆ ಪ್ರೊ.ಕೃಷ್ಣೇಗೌಡರು ಕನ್ನಡ ಪುಸ್ತಕ ಪ್ರಾಧಿಕಾರ ಮಳಿಗೆಯಲ್ಲಿ ಪುಸ್ತಕ ವೀಕ್ಷಿಸುತ್ತಿದ್ದಾಗ ಪುಸ್ತಕ ಪ್ರಿಯರೊಬ್ಬರು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಪಟ್ಟರು, ಅಂತೆಯೇ ಹಿರಿಯ ಅಂಕಣಕಾರ ಡಾ.ರಂಗನಾಥ್ ಅವರು, ಸಂಸ್ಕೃತಿ ಬುಕ್ ಹೌಸ್ ಮಳಿಗೆಯಲ್ಲಿ ಪುಸ್ತಕ ವೀಕ್ಷಿಸುತ್ತಿದ್ದಾಗ ಪುಸ್ತಕ ಪ್ರಿಯರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮ ಪಟ್ಟರು.

ಮತ್ತೊಂದು ಮಳಿಗೆಯಲ್ಲಿ ದಸರಾ ಕರ್ತವ್ಯಕ್ಕೆ ಆಗಮಿಸಿದ್ದ ಹಾಸನ ಜಿಲ್ಲೆಯ 5 ಮಂದಿ ಮಹಿಳಾ ಪೇದೆಗಳು ಪುಸ್ತಕ ಮೇಳದ ಎಲ್ಲಾ ಮಳಿಗೆಗಳಿಗೆ ಭೇಟಿ ನೀಡಿ, ಮಹಿಳಾ ಪರ ಪುಸ್ತಕಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಪುಸ್ತಕಗಳನ್ನು ವೀಕ್ಷಿಸುತ್ತಿದ್ದದ್ದು ಎಲ್ಲರ ಗಮನ ಸೆಳೆಯಿತು. ಸಂವಹನ ಪ್ರಕಾಶನ ಮಳಿಗೆಯಲ್ಲಿ ಕಾದಂಬರಿಗಾರ್ತಿ ಎಂ.ಎಸ್.ವೇದ ರಚಿತ 'ಜಯ', 'ದೊಡ್ಡಾಯಿ' ಹಾಗೂ 'ರಾಜ ಒಡೆಯರ್' ಕಾದಂಬರಿ ಸೇರಿದಂತೆ ಇತರೆ ಪುಸ್ತಕಗಳಿಗೆ ಓದುಗರಿಂದ ಬೇಡಿಕೆ ಇದೆ ಎಂದು ಅಲ್ಲಿನ ಮಾರಾಟ ಪ್ರತಿನಿಧಿಗಳು ಪತ್ರಿಕೆಗೆ ಮಾಹಿತಿ ನೀಡಿದರು.

ಮೈಸೂರು ವಿವಿ ಪ್ರಸಾರಾಂಗ ಮಳಿಗೆಗಳಲ್ಲಿ ಸಂಶೋಧನೆಗೆ ಸಂಬಂಧಪಟ್ಟ ಪುಸ್ತಕಗಳು, ಶಾಸನಗಳಿಗೆ ಸಂಬಂಧಪಟ್ಟ ಪುಸ್ತಕಗಳು, ಜಾನಪದ, ಕನ್ನಡ ವಿಶ್ವಕೋಶ ಹಾಗೂ ಕನ್ನಡ–ಇಂಗ್ಲಿಷ್ ಪದಕೋಶಗಳ ಪುಸ್ತಕಗಳಿಗೆ ಬೇಡಿಕೆ ಇದೆ ಎಂದು ಅಲ್ಲಿನ ಮಾರಾಟ ಪ್ರತಿನಿಧಿಗಳು ಪತ್ರಿಕೆಗೆ ಮಾಹಿತಿ ನೀಡಿದರು. ಈ ವೇಳೆ ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ ಸೇರಿದಂತೆ ಇತರೆ ಪ್ರಕಾಶಕರು ಉಪಸ್ಥಿತರಿದ್ದರು. ನಂತರ ಪ್ರೊ.ಎಂ.ಕೃಷ್ಣೇಗೌಡರು ನಗೆನುಡಿಗಳನ್ನಾಡಿದರು.

ಅ.17ರಂದು ಸಾಹಿತಿಗಳೊಂದಿಗೆ ಸೆಲ್ಫಿಯಲ್ಲಿ ಹಿರಿಯ ಸಂಶೋಧಕರಾದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಹಾಗೂ ಬೆಂಗಳೂರು ಗಾನ ಸೌರಭ ಯಕ್ಷಗಾನ ಶಾಲೆಯ ಕಲಾವಿದರಿಂದ ಪ್ರಸಂಗ: ಕಂಸವಧೆ ಪ್ರದರ್ಶನಗೊಳ್ಳಲಿದೆ.

ದಸರಾ ಮಹೋತ್ಸವ

ಕೆಎಸ್‌ಆರ್‌ಟಿಸಿಯಿಂದ ಒಂದು ದಿನದ ಪ್ಯಾಕೇಜ್ ಟ್ರಿಪ್

ಮೈಸೂರು,ಅ.16(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್‌ಆರ್‌ಟಿಸಿ) ಒಂದು ದಿನದ ಪ್ಯಾಕೇಜ್ ಟ್ರಿಪ್ ಹಾಗೂ ದೀಪಾಲಂಕಾರ ವೀಕ್ಷಣೆಗೆ ವಿಶೇಷ ಬಸ್ ವ್ಯವಸ್ಥೆ ಮಾಡಿದೆ. ಅ.20ರಿಂದ 29ರವರೆಗೆ ಈ ಸೌಲಭ್ಯವಿದ್ದು, ಮೈಸೂರಿನ ನಾಗರಿಕರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸುವ ಅವಕಾಶ ಒದಗಿಸಲಾಗಿದೆ. ಪ್ರತಿವರ್ಷದಂತೆ ಈ ಬಾರಿಯೂ ಸಾರಿಗೆ ಸಂಸ್ಥೆ ದರ್ಶಿನಿ ಬಸ್‌ಗಳ ವ್ಯವಸ್ಥೆಯನ್ನು ಮಾಡಿದೆ. ಅದರಲ್ಲೂ ಗಿರಿದರ್ಶಿನಿ, ಜಲದರ್ಶಿನಿ ಹಾಗೂ ದೇವದರ್ಶಿನಿ ಬಸ್ ಮಾತ್ರವಲ್ಲದೆ, ಈ ಬಾರಿ ದೀಪಾಲಂಕಾರ ವೀಕ್ಷಣೆಗೂ ವೋಲ್ವೋ ಬಸ್ ವ್ಯವಸ್ಥೆ ಮಾಡಿದೆ.

ಗಿರಿದರ್ಶಿನಿ ಪ್ರವಾಸ: ಸಾರಿಗೆ ಸಂಸ್ಥೆಯ ಗಿರಿದರ್ಶಿನಿ ಬಸ್ ಪ್ರತಿದಿನ ಬೆಳಗ್ಗೆ 6.30ಕ್ಕೆ ಗ್ರಾಮಾಂತರ ಬಸ್ ನಿಲ್ದಾಣದಿಂದ ಪ್ರಯಾಣ ಬೆಳೆಸಲಿದ್ದು, ಬಂಡೀಪುರ, ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ನಂಜನಗೂಡು ಮತ್ತು ಚಾಮುಂಡಿ ಬೆಟ್ಟಕ್ಕೆ ಪ್ರವಾಸಿಗರನ್ನು ಕರೆದೊಯ್ಯಲಿದೆ. 325 ಕಿ.ಮಿ ದೂರದ ಈ ಪ್ಯಾಕೇಜ್‌ಗೆ ವಯಸ್ಕರಿಗೆ ರೂ.400 ರೂ., ಮಕ್ಕಳಿಗೆ:– ರೂ.250 ರೂ. ದರ ನಿಗದಿ ಮಾಡಲಾಗಿದೆ.

ಜಲದರ್ಶಿನಿ: ಗ್ರಾಮಾಂತರ ಬಸ್ ನಿಲ್ದಾಣದಿಂದ ಪ್ರತಿದಿನ ಬೆಳಗ್ಗೆ 6.30ಕ್ಕೆ ಪ್ರಯಾಣ ಆರಂಭಿಸುವ ಜಲದರ್ಶಿನಿ ಬಸ್ ಗೋಲ್ಡನ್ ಟೆಂಪಲ್ (ಬೈಲಕುಪ್ಪೆ), ದುಬಾರೆ ಅರಣ್ಯ, ನಿಸರ್ಗಧಾಮ, ರಾಜಾ ಸೀಟ್, ಹಾರಂಗಿ ಜಲಾಶಯ ಹಾಗೂ ಕೆಆರ್‌ಎಸ್ ಅಣೆಕಟ್ಟೆಗೆ ಪ್ರವಾಸಿಗರನ್ನು ಕರೆದೊಯ್ಯಲಿದೆ. 350 ಕಿ.ಮಿ ಪ್ರಯಾಣದ ಈ ಪ್ಯಾಕೇಜ್‌ಗೆ ವಯಸ್ಕರಿಗೆ 450 ರೂ., ಮಕ್ಕಳಿಗೆ 250 ರೂ. ನಿಗದಿ ಮಾಡಲಾಗಿದೆ.

ದೇವದರ್ಶಿನಿ: ಗ್ರಾಮಾಂತರ ಬಸ್ ನಿಲ್ದಾಣದಿಂದ ಬೆಳಗ್ಗೆ 6.30ಕ್ಕೆ ಪ್ರಯಾಣ ಆರಂಭಿಸುವ ದೇವದರ್ಶಿನಿ ಬಸ್ ನಂಜನಗೂಡು, ತಲಕಾಡು, ಬ್ಲಫ್, ಮುಡುಕುತೊರೆ, ಸೋಮನಾಥಪುರ, ಶ್ರೀರಂಗಪಟ್ಟಣ ಹಾಗೂ ಕೆಆರ್‌ಎಸ್‌ಗೆ ಕರೆದೊಯ್ಯಲಿದ್ದು, 250 ಕಿ.ಮಿ ಪ್ರಯಾಣದ ಈ ಪ್ಯಾಕೇಜ್‌ಗೆ ವಯಸ್ಕರಿಗೆ 300 ರೂ. ಮಕ್ಕಳಿಗೆ 175 ರೂ. ದರ ನಿಗಧಿ ಮಾಡಲಾಗಿದೆ.

ಮೈಸೂರು ನಗರ ದೀಪಾಲಂಕಾರ ದರ್ಶನ: ನಗರ ಬಸ್ ನಿಲ್ದಾಣದಿಂದ ದೀಪಾಲಂಕಾರ ವೀಕ್ಷಣೆಗಾಗಿ ನಿಯೋಜಿಸಿರುವ ನಗರ ವೋಲ್ವೋ ಬಸ್ ಅರಮನೆ ರಸ್ತೆ, ಮೈಸೂರು ಕೇಂದ್ರೀಯ ಬಸ್ ನಿಲ್ದಾಣ ರಸ್ತೆ, ಎಲ್‌ಐಸಿ ವೃತ್ತ ಬಂಬೂ ಬಜಾರ್ ರಸ್ತೆ ರೈಲ್ವೆ ನಿಲ್ದಾಣ ವೃತ್ತ, ಜೆಎಲ್‌ಬಿ ರಸ್ತೆ(ಮುಡಾ ಕಚೇರಿ ರಸ್ತೆ) ಮೂಲಕ ನಗರ ಬಸ್ ನಿಲ್ದಾಣಕ್ಕೆ ಆಗಮಿಸಲಿದೆ. ಪ್ರತಿದಿನ ಸಂಜೆ 6 ಗಂಟೆಗೆ ಪ್ರಯಾಣ ಆರಂಭಿಸುವ ಈ ಬಸ್‌ಗೆ ವಯಸ್ಕರಿಗೆ 200ರ., ಮಕ್ಕಳಿಗೆ: ರೂ.150 ರೂ. ದರ ನಿಗದಿ ಮಾಡಲಾಗಿದೆ.

ಈ ಬಸ್‌ಗಳ ಸೇವೆ ಪಡೆದುಕೊಳ್ಳಲು ಇ–ಟಿಕೇಟ್ ಬುಕಿಂಗ್‌ಅನ್ನು www.ksrtc.karnataka.gov.in ವೆಬ್‌ಸೈಟ್ ಸಂಪರ್ಕಿಸಬಹುದು. ಮೊಬೈಲ್ ಹಾಗೂ ಬುಕ್ಕಿಂಗ್ ಕೌಂಟರ್‌ಗಳ ಮೂಲಕ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಬಹುದಾಗಿದೆ ಎಂದು ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ.



ವಿಶ್ವಕಪ್‌ನಲ್ಲಿ ಗೆಲುವಿನ ಖಾತೆ ತೆರೆದ ಆಸ್ಟ್ರೇಲಿಯಾ

ಶ್ರೀಲಂಕಾಕ್ಕೆ ಹ್ಯಾಟ್ರಿಕ್ ಸೋಲು



ಲಖನೌ, ಅ.16– ಆಡಂ ಜಂಪಾ ಅವರ ಸ್ಪಿನ್ ಮೋಡಿ ಹಾಗೂ ಮಿಚೆಲ್ ಮಾರ್ಷ್, ಜೋಶ್ ಇಂಗ್ಲಿಸ್ ಅವರುಗಳ ಅರ್ಧಶತಕದ ನೆರವಿನಿಂದ ಐದು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ, ಶ್ರೀಲಂಕಾ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಇದರೊಂದಿಗೆ ಟೂರ್ನಿಯಲ್ಲಿ ಸತತ 2 ಸೋಲುಗಳಿಂದ ಕಂಗೆಟ್ಟಿದ್ದ ಆಸ್ಟ್ರೇಲಿಯಾ ಗೆಲುವಿನ ಖಾತೆ ತೆರೆದಿದೆ. ಮತ್ತೊಂದೆಡೆ ಚೊಚ್ಚಲ ಗೆಲುವಿನ ನಿರೀಕ್ಷೆಯಲ್ಲಿದ್ದ ಶ್ರೀಲಂಕಾ ಹ್ಯಾಟ್ರಿಕ್ ಸೋಲಿಗೆ ಒಳಗಾಗಿದೆ.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 43.3 ಓವರ್‌ಗಳಲ್ಲಿ 209 ರನ್‌ಗಳಿಗೆ ಆಲೌಟ್ ಆಯಿತು. ಆರಂಭಿಕರಾದ ಪಥುಮ್ ನಿಸಾಂಕ ಮತ್ತು ಕುಶಾಲ ಪೆರೇರಾ ತಂಡಕ್ಕೆ ಭರ್ಜರಿ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 125 ರನ್ ಜೊತೆಯಾಟವಾಡಿದ ಇವರಿಬ್ಬರೂ ಆಸೀಸ್ ಬೌಲರ್‌ಗಳನ್ನು ಕಾಡಿದರು. ಪಥುಮ್ ನಿಸಾಂಕ 67 ಎಸೆತಗಳಲ್ಲಿ 8 ಬೌಂಡರಿ ಒಳಗೊಂಡ 61ರನ್ ಗಳಿಸಿದರೇ, ಕುಶಾಲ್ ಪೆರೆರಾ 82 ಎಸೆತಗಳಲ್ಲಿ 12 ಬೌಂಡರಿ ಒಳಗೊಂಡ 78 ರನ್ ಗಳಿಸಿ ಪ್ಯಾಟ್ ಕಮ್ಮಿನ್ಸ್‌ಗೆ ವಿಕೆಟ್ ಒಪ್ಪಿಸಿದರು. ಉತ್ತಮ ಆರಂಭದ ಹೊರತಾಗಿಯೂ ಶ್ರೀಲಂಕಾ ಸ್ಥಿರ ಪ್ರದರ್ಶನ ನೀಡಲು ವಿಫಲವಾಯಿತು. ಉಳಿದಂತೆ ಚರಿತ್ ಹಸಲಂಕ 25 ರನ್ ಗಳಿಸಿದ್ದು ಹೊರತುಪಡಿಸಿ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಶ್ರೀಲಂಕಾ ಬ್ಯಾಟಿಂಗ್ ವೇಳೆ 32.1 ಓವರ್ ಆಗಿದ್ದಾಗ ಮಳೆ ಬಂದಿದ್ದರಿಂದ ಪಂದ್ಯವನ್ನು ಕೆಲಕಾಲ ಸ್ಥಗಿತಗೊಳಿಸಲಾಗಿತ್ತು. ಮಳೆ ನಿಂತ ಬಳಿಕ ಪಂದ್ಯ ಮುಂದುವರೆಸಲಾಯಿತು. ಆಸ್ಟ್ರೇಲಿಯಾ ಪರ ಉತ್ತಮ ಪ್ರದರ್ಶನ ನೀಡಿದ ಆಡಂ ಜಂಪಾ 4 ವಿಕೆಟ್ ಕಬಳಿಸಿ ಮಿಂಚಿದರೆ, ಮಿಚೆಲ್ ಸ್ಟಾರ್ಕ್, ಪ್ಯಾಟ್ ಕಮಿನ್ಸ್ ತಲಾ 2, ಗ್ಲೆನ್ ಮ್ಯಾಕ್ಸ್‌ವೆಲ್ 1 ವಿಕೆಟ್ ಪಡೆದರು.

ಶ್ರೀಲಂಕಾ ನೀಡಿದ 210 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 35.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿ ಗೆಲುವು ಸಾಧಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ 11 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಬಳಿಕ ಬಂದ ಸ್ಟೀವ್ ಸ್ಮಿತ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಭರ್ಜರಿ ಆಟವಾಡಿದ ಮಿಚೆಲ್ ಮಾರ್ಷ್ 9 ಬೌಂಡರಿ ಒಳಗೊಂಡ 52 ರನ್ ಗಳಿಸಿ ರನೌಟ್ ಆದರು. ಈ ವೇಳೆ ಜೊತೆಯಾದ ಮಾರ್ನಸ್ ಲಾಬುಶೇನ್ ಮತ್ತು ಜೋಶ್ ಇಂಗ್ಲಿಸ್ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಲಾಬುಶೇನ್ 40 ರನ್ ಗಳಿಸಿದರೆ, ಜೋಶ್ ಇಂಗ್ಲಿಸ್ 58 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಗ್ಲೆನ್ ಮ್ಯಾಕ್ಸ್‌ವೆಲ್ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 31, ಮಾರ್ಕಸ್ ಸ್ಟೊಯಿನಿಸ್ 20 ರನ್ ಗಳಿಸಿ ಅಜೇಯರಾಗಿ ಉಳಿದರು. ಶ್ರೀಲಂಕಾ ಪರ ದಿಲ್ಶಾನ್ ಮಧು ಶಂಕಾ 3, ದುನಿತ್ ವೆಲ್ಲಾಲಗೆ 1 ವಿಕೆಟ್ ಪಡೆದರು. ಆಡಂ ಜಂಪಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಇಂಡಿಯಾ	3	3	0	0	6
ನ್ಯೂಜಿಲ್ಯಾಂಡ್	3	3	0	0	6
ದಕ್ಷಿಣ ಆಫ್ರಿಕಾ	2	2	0	0	4
ಪಾಕಿಸ್ತಾನ್	3	2	1	0	4
ಇಂಗ್ಲೆಂಡ್	3	1	2	0	2
ಅಫ್ಘಾನಿಸ್ತಾನ್	3	1	2	0	2
ಬಾಂಗ್ಲಾದೇಶ	3	1	2	0	2
ಆಸ್ಟ್ರೇಲಿಯಾ	3	1	2	0	2
ಶ್ರೀಲಂಕಾ	3	0	3	0	0
ನೆದರ್‌ಲ್ಯಾಂಡ್ಸ್	2	0	2	0	0

ಮಡಿಕೇರಿ ದಸರಾ ಒಳಾಂಗಣ ಕ್ರೀಡಾಕೂಟ



ಮಡಿಕೇರಿ, ಅ.16– ಮಡಿಕೇರಿ ನಗರ ದಸರಾ ಸಮಿತಿ ವತಿಯಿಂದ ನಗರದ ಖಾಸಗಿ ಹೊಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಒಳಾಂಗಣ ಕ್ರೀಡಾಕೂಟಕ್ಕೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ. ಒಳಾಂಗಣ ಕ್ರೀಡೆಗಳಾದ ಚೆಸ್ ಮತ್ತು ಕೇರಂಬೋರ್ಡ್ ಪಂದ್ಯಾವಳಿಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ವಯೋಮಾನದ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಿದರು. ಅದರಲ್ಲೂ ಚೆಸ್ ಕ್ರೀಡೆಗೆ ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಪಾಲ್ಗೊಂಡು ತಮ್ಮ ಚತುರತೆ ಮೆರೆದರು. ಚೆಸ್ ಪಂದ್ಯಾವಳಿ ಪ್ರಾರಂಭವಾಗಿ ಕೆಲವೇ ನಿಮಿಷಗಳಲ್ಲಿ ತಮ್ಮ ಎದುರಾಳಿಗಳನ್ನು ಚೆಕ್‌ಮೇಟ್ ಮಾಡುವ ಮೂಲಕ ತಮ್ಮ ಬುದ್ಧಿವಂತಿಕೆ ಮೆರೆದರು. ಪುಟಾಣಿ ಮಕ್ಕಳ ಚತುರತೆಗೆ ಮಕ್ಕಳ ಪೋಷಕರೇ ಹುಬ್ಬೇರಿಸಿ, ಸಂತಸಪಟ್ಟರು. ದಸರಾ ಕ್ರೀಡಾಕೂಟದ ಅಧ್ಯಕ್ಷ ಪ್ರದೀಪ್ ಮಾತನಾಡಿ, ಈ ಬಾರಿ ಮಡಿಕೇರಿ ದಸರಾ ಕ್ರೀಡಾಕೂಟವನ್ನು ವಿನೂತನವಾಗಿ ಆಯೋಜಿಸಲಾಗಿದೆ. ದಸರಾ ಕ್ರೀಡಾಕೂಟದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ನಗದು ಬಹುಮಾನದೊಂದಿಗೆ ಫುಟ್ಬಾಲ್ ಮತ್ತು ವಾಲಿಬಾಲ್ ಪಂದ್ಯಾವಳಿಗಳನ್ನು ಆಯೋಜಿಸಲಾಗಿತ್ತು.

ಅದರಲ್ಲೂ ವಿಶೇಷಚೇತನ ಮಕ್ಕಳಿಗೂ ವಿವಿಧ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ವೇದಿಕೆ ಕಲ್ಪಿಸಲಾಗಿದೆ. ದಸರಾ ಕ್ರೀಡಾಕೂಟಗಳಿಗೆ ಸರಕಾರದ ಅನುದಾನ ಸಹಿತ ವೈಯಕ್ತಿಕವಾಗಿ ಒಟ್ಟು 5 ಲಕ್ಷ ರೂ. ಖರ್ಚು ಮಾಡಲಾಗುತ್ತಿದ್ದು, ಕ್ರೀಡಾ ಪ್ರತಿಭೆಗಳ ಅನಾವರಣಕ್ಕೆ ಅವಕಾಶ ಒದಗಿಸಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ವೇಳೆ ಕ್ರೀಡಾ ಸಮಿತಿಯ ಉಪಾಧ್ಯಕ್ಷ ರವೂಫ್ ನಸ್ರತ್, ಪದಾಧಿಕಾರಿಗಳಾದ ನಯನ, ನಿರಂಜನ್, ರಾಜೇಶ್, ನಿತಿನ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಗೋಣಿಕೊಪ್ಪದಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ

ಸಿಎಂ, ಡಿಸಿಎಂ ರಾಜೀನಾಮೆಗೆ ಆಗ್ರಹ

ಗೋಣಿಕೊಪ್ಪ, ಅ.16– ವಿರಾಜಪೇಟೆ ಬಿಜೆಪಿ ಮಂಡಲ ವತಿಯಿಂದ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಲಾಯಿತು.

ಇಲ್ಲಿನ ಬಸ್ ನಿಲ್ದಾಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಆಡಳಿತ ನಡೆಸುತ್ತಿದೆ. ಪಂಚರಾಜ್ಯಗಳ ಚುನಾವಣೆಗೆ ರಾಜ್ಯದಲ್ಲಿ ಹಣ ಸಂಗ್ರಹಿಸಲಾಗುತ್ತಿದೆ. ಶೇ.50–60 ಕಮಿಷನ್ ದಂಧೆ ನಡೆಯುತ್ತಿದೆ. ಅಕ್ರಮ ಹಣ ವಿಚಾರವಾಗಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು. ಈ ಬಗ್ಗೆ ರಾಜ್ಯಪಾಲರು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು. ಸುಮಾರು 20 ನಿಮಿಷ ಪ್ರತಿಭಟನೆ ನಡೆಯಿತು. ಮಾನವ



ಸರಪಳಿ ರಚಿಸಿ ರಸ್ತೆ ತಡೆ ಮಾಡಲಾಯಿತು.

ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ರಾಜ್ಯದಲ್ಲಿ ಐಟಿ ದಾಳಿ ನಡೆಸಿ 48 ಕೋಟಿ ರೂ. ವಶಕ್ಕೆ ಪಡೆದಿರುವುದು ಕಲೆಕ್ಷನ್ ದಂಧೆಯ ಮೂಲವಾಗಿದೆ ಬಿಜೆಪಿ ಆಡಳಿತದಲ್ಲಿದ್ದಾಗ ಕಮಿಷನ್ ಆರೋಪ ಮಾಡಿದ್ದ ಕಾಂಗ್ರೆಸ್ಸಿಗರು ಇಂದು ದೊಡ್ಡ ಮಟ್ಟದ ಕಮಿಷನ್ ದಂಧೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ವಿರಾಜಪೇಟೆ ಮಂಡಲ ಅಧ್ಯಕ್ಷ ನೆಲ್ಲೀರ ಚಲನ್‌ಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ರೈತ ವಿರೋಧಿ ಆಡಳಿತ ನಡೆಸುತ್ತಿದೆ. ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಯೋಜನೆ, ರೈತ ವಿದ್ಯಾನಿಧಿ ಯೋಜನೆ ರದ್ದು ಮಾಡಿದೆ. ಇದನ್ನು ಬಿಜೆಪಿ ವಿರೋಧಿಸುತ್ತಿದೆ. ಕಾಂಗ್ರೆಸ್ ಪಕ್ಷ ರಾಜ್ಯವನ್ನು ಹಣ ದಂಧೆ ನಡೆಸುವ ಕೇಂದ್ರವಾಗಿ ರೂಪಿಸಿಕೊಂಡಿದೆ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಪಟೆಯಂಡ ರಾಬಿನ್ ದೇವಯ್ಯ ಮಾತನಾಡಿದರು. ಬಿಜೆಪಿ ಪ್ರಮುಖರಾದ ವಾಟೇರಿರ ಬೋಪಣ್ಣ, ಕುಂಞಂಗಡ ಅರುಣ್ ಭೀಮಯ್ಯ, ಅಜ್ಜಿ ಕುಟ್ಟೀರ ಪ್ರವೀಣ್, ಅಜಿತ್ ಕರುಂಬಯ್ಯ, ಕಿಲನ್ ಗಣಪತಿ ಇತರರಿದ್ದರು.

ಗುಂಡು ಹಾರಿಸಿ ಇಬ್ಬರ ಕೊಲೆಗೆ ಯತ್ನಿಸಿದವರಿಗೆ 3 ವರ್ಷ ಜೈಲು

ಮಡಿಕೇರಿ, ಅ.16– ಇಬ್ಬರು ವ್ಯಕ್ತಿಗಳ ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ್ದವನಿಗೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 3 ವರ್ಷ ಕಠಿಣ ಶಿಕ್ಷೆ ಮತ್ತು 5 ಸಾವಿರ ರೂ.ದಂಡ ವಿಧಿಸಿ ತೀರ್ಪು ನೀಡಿದೆ. ವಿರಾಜಪೇಟೆ ಬಿಟ್ಟಂಗಾಲ ಗ್ರಾಮದ ಸಿ.ಎಸ್.ಲೋಕೇಶ್ ಎಂಬಾತನೇ ಶಿಕ್ಷೆಗೆ ಗುರಿಯಾದವನಾಗಿದ್ದು, ಪ್ರಕರಣದ ಮತ್ತೋರ್ವ ಆರೋಪಿ ಎಂ.ಎ.ಅಕ್ರಂ ಎಂಬಾತನನ್ನು ಸೂಕ್ತ ಸಾಕ್ಷ್ಯಾಧಾರ ಕೊರತೆಯಿಂದ ನ್ಯಾಯಾಲಯ ಖುಲಾಸೆಗೊಳಿಸಿದೆ.

ಪ್ರಕರಣ ಹಿನ್ನೆಲೆ: ಮಡಿಕೇರಿ ಹಿಲ್ ರಸ್ತೆಯ ಸಲಫಿ ಮಸೀದಿ ಕಟ್ಟಡದಲ್ಲಿ ರಿಯಾಝ್ ಎಂಬವರು ಎಸ್.ಕೆ.ಪಿ ಎಂಬ ಕ್ಯಾಂಟೀನ್ ಅನ್ನು ಶಮೀಮ್ ಅನ್ಸಾರಿ ಹಾಗೂ ನಸೀಮ್ ಅನ್ಸಾರಿ ಎಂಬವರೊಂದಿಗೆ ನಡೆಸುತ್ತಿದ್ದರು. ಈ ಕ್ಯಾಂಟೀನ್ ಮುಂಭಾಗದ ಬಾರ್ ಒಂದರಲ್ಲಿ ವಿರಾಜಪೇಟೆ ಬಿಟ್ಟಂಗಾಲ ನಿವಾಸಿ ಸಿ.ಎಸ್.ಲೋಕೇಶ್ ಮತ್ತು ಮಡಿಕೇರಿಯ ಎಂ.ಎ.ಅಕ್ರಂ ಎಂಬವರು ಕೆಲಸ ಮಾಡಿಕೊಂಡಿದ್ದರು. ಸಿ.ಎಸ್.ಲೋಕೇಶ್ ವಿರುದ್ಧ ಹಲವು ಪ್ರಕರಣಗಳಿದ್ದು, ಕ್ಯಾಂಟೀನ್‌ನಿಂದ ಹಣ ನೀಡದೆ ತಿಂಡಿ ತರಿಸಿಕೊಂಡು ತಿನ್ನುತ್ತಿದ್ದ. 2018ರ ಅಕ್ಟೋಬರ್ 18ರ ಸಂಜೆ 7.45 ಗಂಟೆಗೆ ಲೋಕೇಶ್, ಆರೋಪಿ ಅಕ್ರಂ ಎಂಬಾತನ ಮೂಲಕ 2 ಚಿಕನ್ ರೋಲ್‌ಗಳನ್ನು ತರಿಸಿಕೊಂಡು ತಿಂದಿದ್ದರು. ಬಳಿಕ ಮತ್ತೆ 1 ಪ್ಲೇಟ್ ಗೋಬಿ ಮಂಚೂರಿ ನೀಡುವಂತೆ ಹೇಳಿ ಕ್ಯಾಂಟೀನ್‌ಗೆ ಅಕ್ರಂ ಎಂಬಾತನನ್ನು ಕಳುಹಿಸಿದ್ದ. ಈ ವೇಳೆ ಅಂಗಡಿಯಲ್ಲಿದ್ದವರು ಹಿಂದಿನ ಬಾಕಿ ನೀಡುವಂತೆ ಕೇಳಿದ್ದಲ್ಲದೇ, ಗೋಬಿ ಮಂಚೂರಿ ನೀಡಲು ನಿರಾಕರಿಸಿದ್ದರು. ಇದನ್ನು ಆರೋಪಿ ಅಕ್ರಂ, ಲೋಕೇಶ್‌ಗೆ ತಿಳಿಸಿದ್ದ. ಬಳಿಕ ಲೋಕೇಶ್ ತಾನು ವಾಸವಿದ್ದ ರೂಮ್‌ಗೆ ತೆರಳಿ ರಾತ್ರಿ 9.27 ಗಂಟೆ ವೇಳೆಗೆ ತನ್ನ ಬಂದೂಕಿನಿಂದ ಕೋಣೆಯ ಕಾರಿಡಾರ್‌ನ ಕಿಟಕಿಯ ಮೂಲಕ 3 ಗುಂಡು ಹಾರಿಸಿದ್ದು, ರಿಯಾಝ್ ಎಂಬಾತನ ಬಲ ತೊಡೆ ಹಾಗೂ ಶಮೀಮ್ ಅನ್ಸಾರಿ ಎಂಬವರ ಎರಡೂ ಕಾಲಿನ ಮೊಣಕಾಲಿನ ಕೆಳಗೆ ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಕೊಲೆ ಪ್ರಯತ್ನ ನಡೆಸಿದ್ದ.

ಈ ಪ್ರಕರಣದ ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಹೆಚ್.ಸಿ. ಶ್ಯಾಮ್ ಪ್ರಸಾದ್ ಅವರು ಲೋಕೇಶ್‌ಗೆ ಸೇರಿದ ಕೋವಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆತನಿಗೆ 3 ವರ್ಷ ಕಠಿಣ ಸಜೆ ಮತ್ತು 5 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರ ಸರಕಾರಿ ಅಭಿಯೋಜಕಿ ಕೆ.ಜಿ. ಅಶ್ವಿನಿ ವಾದ ಮಂಡಿಸಿದರು.



ಸರ್ಕಾರಿ ದಾಖಲೆಗಳಲ್ಲಿ 'ಕೊಡವ' ಪದ ಬಳಕೆ ಸಂಬಂಧ ಕೊಡವ ನ್ಯಾಷನಲ್ ಕೌನ್ಸಿಲ್ ನಡೆಸಿದ ಹೋರಾಟದ ಫಲವಾಗಿ ಡಾ.ದ್ವಾರಕಾನಾಥ್ ಆಯೋಗ ಹೊರಡಿಸಿದ ವರದಿಯ ಶಿಫಾರಸ್ಸಿಗಾಗಿ ಸಿಎನ್‌ಸಿ ಪರ ಕಾನೂನು ಹೋರಾಟ ನಡೆಸಿದ ರಾಜ್ಯ ಸರ್ಕಾರಿ ಅಭಿಯೋಜಕ ಬಲ್ಲಚಂಡ ಬೊಳ್ಳಿಯಪ್ಪ ಅವರನ್ನು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದ ನಿಯೋಗ ಧನ್ಯವಾದಗಳನ್ನು ಅರ್ಪಿಸಿತು. ಈ ಸಂದರ್ಭ ಅರೆಯಡ ಗಿರೀಶ್, ಕಿರಿಯಮಾಡ ಶೆರಿನ್, ಬೇಪಡಿಯಂಡ ಬಿದ್ದಪ್ಪ ಹಾಗೂ ಅಪ್ಪಾರಂಡ ಪೂವಣ್ಣ ಉಪಸ್ಥಿತರಿದ್ದರು.

ಮರಳಿನಲ್ಲಿ ಮೂಡಿದ ಕಾಂತಾರ ದೈವದ ಕಲಾಕೃತಿ



ಮಡಿಕೇರಿ, ಅ.16– ಕಾಂತಾರ ಚಲನಚಿತ್ರ ಕಾಂತಾರದ ದೈವದ ಕಲಾಕೃತಿಯನ್ನು ಕಲಾವಿದೆ ಗೌರಿ ಅವರು, ಮಡಿಕೇರಿ ದಸರಾ ಅಂಗವಾಗಿ ನಗರದ ಗಾಂಧಿ ಮೈದಾನದಲ್ಲಿ ಮರಳಿನಲ್ಲಿ ರಚಿಸಿದ್ದು, ಸಾರ್ವಜನಿಕರ ಪ್ರಧಾನ ಆಕರ್ಷಣೆಯಾಗಿ ಮೂಡಿಬಂದಿದೆ.

ಮೈಸೂರಿನ ಮರಳು ಶಿಲ್ಪಿ ಎಂ.ಎನ್. ಗೌರಿ ಅವರು ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯ ಮುಂಭಾಗದಲ್ಲಿ ಕಳೆದ ಮೂರು ದಿನಗಳ ಸತತ ಪರಿಶ್ರಮದ ಮೂಲಕ ಕಾಂತಾರ ದೈವದ ಕಲಾಕೃತಿಯನ್ನು ಸುಂದರವಾಗಿ ರೂಪಿಸಿದ್ದಾರೆ.

ಕಾಂತಾರ ಚಲನಚಿತ್ರದಲ್ಲಿ ಬರುವ ದೈವ ಪ್ರಕೃತಿಯ ರಕ್ಷಣೆಯ ದ್ಯೋತಕವಾಗಿ ಕಂಡು ಬರುತ್ತದೆ. ಈ ಹಿನ್ನೆಲೆ ಕೊಡಗಿನ ಸುಂದರ ಪರಿಸರ ರಕ್ಷಣೆಯಾಗಲಿ ಎನ್ನುವ ಸಂದೇಶವನ್ನು ನೀಡುವ ಮೂಲ ಚಿಂತನೆಯಡಿ ಕಾಂತಾರದ ದೈವವನ್ನು ಮರಳು ಶಿಲ್ಪವಾಗಿಸಿದ್ದೇನೆ ಎಂದು ಗೌರಿ ಅಭಿಪ್ರಾಯ ವ್ಯಕ್ತಪಡಿಸಿದರು.

ದೇಶ ವಿದೇಶಗಳಲ್ಲಿ ಮರಳು ಶಿಲ್ಪವನ್ನು ರಚಿಸುವ ಮೂಲಕ ಪ್ರಖ್ಯಾತರಾಗಿರುವ ಮೈಸೂರಿನ ನಂಜುಂಡಸ್ವಾಮಿ ಮತ್ತು ನಾಗಲಾಂಬಿಕೆ ಅವರ ಪುತ್ರಿ, ಫೈನ್ ಆರ್ಟ್ಸ್ ಪದವೀಧರೆ ಗೌರಿ ಅವರು, ಮಡಿಕೇರಿ ದಸರಾಕ್ಕೆ ರಚಿಸಿರುವ ಕಾಂತಾರ ದೈವದ ಕಲಾಕೃತಿ, ಒಟ್ಟಾರೆ ಇವರ 66ನೇ ಕಲಾಕೃತಿಯಾಗಿದೆ. ಸುಮಾರು 12 ವರ್ಷಗಳ ಹಿಂದೆ ಮಡಿಕೇರಿ ದಸರಾದಲ್ಲಿ 'ಮಹಿಷಾಸುರ ಮರ್ಧಿನಿ' ಕಲಾಕೃತಿಯನ್ನು, 7 ವರ್ಷಗಳ ಹಿಂದಿನ ದಸರಾ ಸಂದರ್ಭ 'ಚಾಮುಂಡೇಶ್ವರಿ'ಯ ಕಲಾಕೃತಿಯನ್ನು ಮರಳಿನ ರಚಿಸಿ ಗಮನ ಸೆಳೆದಿರುವ ಗೌರಿ ಅವರ ಈ ಬಾರಿಯ ಕಾಂತಾರ ದೈವ ಜನಮನವನ್ನು ಸೂರೆಗೊಳಿಸುತ್ತಿದೆ. ಸುಮಾರು 2 ಟ್ರ್ಯಾಕ್ಟರ್ ಮರಳಿನಲ್ಲಿ ಮೂಡಿರುವ ಕಾಂತಾರ ದೈವ ಕಲಾಕೃತಿಯನ್ನು ಸಾರ್ವಜನಿಕರು ಮುಕ್ತವಾಗಿ ಬಂದು ವೀಕ್ಷಿಸಿ ಸಂತಸಪಡುತ್ತಿರುವ ಬಗ್ಗೆ ಗೌರಿ ಹರ್ಷ ವ್ಯಕ್ತಪಡಿಸಿದ್ದಾರೆ.

ಇಂದು ಗಾಂಧೀಜಿ ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ

ಮಡಿಕೇರಿ, ಅ.16– ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಗೂ ಸರ್ವೋದಯ ಸಮಿತಿ ಸಹಕಾರದಲ್ಲಿ ಮಹಾತ್ಮ ಗಾಂಧೀಜಿ ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ (ಪೂಜ್ಯ ಗಾಂಧೀಜಿಯವರ ಚಿತಾಭಸ್ಮವಿಟ್ಟು ಶಾಶ್ವತವಾದ ಸ್ಮಾರಕ ನಿರ್ಮಾಣ) ಕಾರ್ಯಕ್ರಮವು ಅ.17 ರಂದು ಬೆಳಗ್ಗೆ 10 ಗಂಟೆಗೆ ನಗರದ ಗಾಂಧಿ ಮಂಟಪದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಭೂಮಿ ಪೂಜೆ ಮಾಡಲಿದ್ದಾರೆ. ಶಾಸಕ ಡಾ.ಮಂಥರ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎ.ಎಸ್. ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ನಗರಸಭೆ ಅಧ್ಯಕ್ಷೆ ಎನ್.ಪಿ.ಅನಿತಾ, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಡಿಸಿ ವೆಂಕಟ್ ರಾಜಾ, ಎಸ್ಪಿ ಕೆ.ರಾಮರಾಜನ್, ಜಿಪಂ ಸಿಇಓ ವರ್ಣಿತ್ ನೇಗಿ, ಸರ್ವೋದಯ ಸಮಿತಿ ಸರ್ವ ಸದಸ್ಯರು, ಇತರರು ಪಾಲ್ಗೊಳ್ಳಲಿದ್ದಾರೆ.

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ; ವಿವಿಧ ಯೋಜನೆಯಡಿ ಅರ್ಜಿ ಆಹ್ವಾನ

ಮಡಿಕೇರಿ ಅ.16– ಪ್ರಸಕ್ತ ಸಾಲಿಗೆ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ವತಿಯಿಂದ ಶೈಕ್ಷಣಿಕ ಸಾಲ ಯೋಜನೆ, ಜೀವ ಜಲ ಯೋಜನೆ ಹೀಗೆ ವಿವಿಧ ಯೋಜನೆಯಡಿ ಸೌಲಭ್ಯ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್, 30 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ನಿಗಮದ ಜಾಲತಾಣ https://kvldcl.karnataka.gov.in ಅಥವಾ ನಿಗಮದ ದೂ.ಸಂ.080–22865522/ 9900012351 ಅನ್ನು ಸಂಪರ್ಕಿಸುವುದು ಅಥವಾ ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ), ಕೊಡಗು ಜಿಲ್ಲೆ, ಮಡಿಕೇರಿ ಇವರನ್ನು ಕಚೇರಿಯಲ್ಲಿ ಅಥವಾ ದೂರವಾಣಿ ಸಂಖ್ಯೆ: 08272–221656 ಮೂಲಕ ಸಂಪರ್ಕಿಸಬಹುದು ಎಂದು ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ನಾಳೆ ಹಾಲು ಕರೆಯುವ ಸ್ಪರ್ಧೆ

ಚಾಮರಾಜನಗರ, ಅ.16– ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಚಾಮರಾಜನಗರ ದಸರಾ ಮಹೋತ್ಸವ ಅಂಗವಾಗಿ ಜಿಲ್ಲಾ ಮಟ್ಟದ ಹಾಲು ಕರೆಯುವ ಸ್ಪರ್ಧೆಯನ್ನು ಅ.18ರಂದು ಏರ್ಪಡಿಸಲಾಗಿದೆ.

ನಗರದ ಪಶು ಆಸ್ಪತ್ರೆ ಆವರಣದಲ್ಲಿ ನಿಯಮಾನುಸಾರ 2 ಬಾರಿ ಅಂದರೆ ಬೆಳಗ್ಗೆ 6.30 ಗಂಟೆ ಮತ್ತು ಸಂಜೆ 6 ಗಂಟೆಗೆ ಹಾಲು ಕರೆಯುವ ಸ್ಪರ್ಧೆ ಏರ್ಪಡಿಸಲಾಗಿದೆ. ಜಿಲ್ಲಾ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಅತೀ ಹೆಚ್ಚಿನ ಹಾಲು ಕರೆದ ರಾಸುವಿನ ಮಾಲೀಕರಿಗೆ ಪ್ರಥಮ ಬಹುಮಾನವಾಗಿ 15 ಸಾವಿರ ರೂ., ದ್ವಿತೀಯ ಬಹುಮಾನವಾಗಿ 10 ಸಾವಿರ ರೂ., ತೃತೀಯ ಬಹುಮಾನವಾಗಿ 5 ಸಾವಿರ ರೂ.ಗಳ ನಗದು ಬಹುಮಾನವನ್ನು ನೀಡಲಾಗುತ್ತದೆ ಆಸಕ್ತ ರೈತರು ಸ್ಪರ್ಧೆಯಲ್ಲಿ ಭಾಗವಹಿಸಲು ಮಾಹಿತಿಗಾಗಿ ನಗರದ ಪಶು ಆಸ್ಪತ್ರೆಯ ಮುಖ್ಯ ಪಶು ವೈದ್ಯಾಧಿಕಾರಿಗಳನ್ನು (ಆಡಳಿತ) ಸಂಪರ್ಕಿಸುವಂತೆ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ದಸರಾ ಮ್ಯಾರಥಾನ್

ಚಾಮರಾಜನಗರ, ಅ.16– ದಸರಾ ಆಚರಣೆ ಅಂಗವಾಗಿ ಪಾರಂಪರಿಕ ನಡಿಗೆ ಮ್ಯಾರಥಾನ್ ಅನ್ನು ಅ.18 ರಂದು ಬೆಳಗ್ಗೆ 7 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಹಮ್ಮಿಕೊಳ್ಳಲಾಗಿದೆ. ಮ್ಯಾರಥಾನ್ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಬಿ. ರಾಚಯ್ಯ ಜೋಡಿ ರಸ್ತೆ, ನ್ಯಾಯಾಲಯ ರಸ್ತೆ, ಕರಿನಂಜನಪುರ ರಸ್ತೆ ಮೂಲಕ ಹಾದು ಪ್ರವಾಸಿ ಮಂದಿರದಲ್ಲಿ ಕೊನೆಗೊಳ್ಳಲಿದೆ. ಕಾರ್ಯಕ್ರಮದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಮ್ಯಾರಥಾನ್ ಮತ್ತು ಯುವ ದಸರಾ ಕಾರ್ಯಕ್ರಮಗಳ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ಶಾಲಾ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ಚಾಮರಾಜನಗರದಲ್ಲಿ ವಿಜೃಂಭಣೆಯ

ಗಣಪತಿ ವಿಸರ್ಜನೆ ಶೋಭಾಯಾತ್ರೆ







ಚಾಮರಾಜನಗರ, ಅ.16– ನಗರದ ರಥದ ಬೀದಿಯಲ್ಲಿರುವ ಗುರುನಂಜಶೆಟ್ಟರ ಛತ್ರದ ಮುಂಭಾಗ ಶ್ರೀವಿದ್ಯಾ ಗಣಪತಿ ಮಂಡಳಿ ಪ್ರತಿಷ್ಠಾಪಿಸಲಾಗಿದ್ದ ಸುದರ್ಶನ ಚಕ್ರಧಾರಿ ಗಣಪತಿ ಮೂರ್ತಿಯ ವಿಸರ್ಜನಾ ಶೋಭಾಯಾತ್ರೆ ಸೋಮವಾರ ತಡರಾತ್ರಿವರೆಗೂ ನಡೆಯಿತು.

ಬೆಳಗ್ಗೆ 10 ಗಂಟೆಯ ಸುಮಾರಿನಲ್ಲಿ ಗಣಪತಿ ಮೂರ್ತಿಗೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಸೇರಿದಂತೆ ಇತರೆ ಅಧಿಕಾರಿಗಳು, ಗಣಪತಿ ಮಂಡಳಿಯ ಪದಾಧಿಕಾರಿಗಳು ಪೂಜೆ ಸಲ್ಲಿಸಿದರು. ನಂತರ ಗಣಪತಿ ಮೂರ್ತಿಯ ವಿಸರ್ಜನಾ ಶೋಭಾಯಾತ್ರೆ ಆರಂಭಿಸಲಾಯಿತು.

ಸುದರ್ಶನ ಚಕ್ರಧಾರಿ ಗಣೇಶನ ಮೂರ್ತಿಯನ್ನು ಗಣೇಶ ಹಬ್ಬದ ದಿನದಂದು ಪ್ರತಿಷ್ಠಾಪಿಸಲಾಗಿತ್ತು. ಅಂದಿನಿಂದ ಪ್ರತಿದಿನ ಗಣೇಶನಿಗೆ ವಿಶೇಷ ಪೂಜಾ ಕೈಂಕರ್ಯಗಳು ಹಾಗೂ ಪ್ರತಿದಿನ ಸಂಜೆ ನಾನಾ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.

ಶೋಭಾಯಾತ್ರೆಗೆ ಚಾಲನೆ: ನಿಗದಿಯಂತೆ ಸೋಮವಾರ ಬೆಳಗ್ಗೆ 10 ಗಂಟೆ ಸಮಯದಲ್ಲಿ ಮೆರವಣಿಗೆ ಆರಂಭವಾಯಿತು. ಖಡಕ್ಪುರ ಮೊಹಲ್ಲಾ, ಡಾ.ಬಿ.ಆರ್. ಅಂಬೇಡ್ಕರ್ ಬೀದಿ, ದೇವಾಂಗ 3ನೇ ಬೀದಿ, ನಾಗಪ್ಪಶೆಟ್ಟರ ಚೌಕ, ಮೇಗಲನಾಯಕರ ಬೀದಿ, ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನ, ಗಾಡಿಪೇಟೆ ಚೌಕ, ದೊಡ್ಡ ಅಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ, ಭಗೀರಥ, ಉಪ್ಪಾರ ಬಡಾವಣೆ, ಆದಿಶಕ್ತಿ ದೇವಸ್ಥಾನ, ಬಣಜಿಗರ ಬೀದಿ, ಭ್ರಮರಾಂಬ ಬಡಾವಣೆ, ಕುರುಬರ ಬೀದಿ, ಹಳ್ಳದ ಬೀದಿ, ಅಗ್ರಹಾರದ ಬೀದಿ ಸೇರಿದಂತೆ ನಾನಾ ಬೀದಿಗಳಲ್ಲಿ ಗಣಪತಿಯ ವಿಸರ್ಜನಾ ಶೋಭಾಯಾತ್ರೆ ಸಾಗಿತು.

ಕಲಾ ತಂಡಗಳು ಸೊಬಗು: ಶೋಭಾಯಾತ್ರೆಯಲ್ಲಿ ನಂದಿ ಕಂಬ, ಗೊರವರ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ಮಹಿಳಾ ವೀರಗಾಸೆ, ಪೂಜಾ ಕುಣಿತ, ಸೋಮನ ಕುಣಿತ, ಗಾಡಿಗೊಂಬೆ, ಹುಲಿ ವೇಷಧಾರಿಗಳು, ಚೆಂಡೆ, ವೀರಗಾಸೆ, ಚಿಂಗಾರಿ ಮೇಳ, ವಿವಿಧ ವೇಷಧಾರಿಗಳು, ಮಂಗಳವಾದ್ಯ, ಬ್ಯಾಂಡ್‌ಸೆಟ್ ಸೇರಿದಂತೆ ನಾನಾ ಕಲಾ ತಂಡಗಳು ಪಾಲ್ಗೊಂಡಿದ್ದವು.

ತಳಿರು ತೋರಣಗಳಿಂದ ಶೃಂಗಾರ: ಗಣಪತಿ ಮೆರವಣಿಗೆ ಆಗಮನದ ಹಿನ್ನೆಲೆಯಲ್ಲಿ ಎಲ್ಲಾ ಬೀದಿಗಳಲ್ಲಿ ತಳಿರು ತೋರಣಗಳನ್ನು ಕಟ್ಟಲಾಗಿತ್ತು. ಮನೆಗಳ ಮುಂಭಾಗ ಬಣ್ಣ ಬಣ್ಣದ ರಂಗೋಲಿ ಬಿಡಲಾಗಿತ್ತು ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ನಾಗರಿಕರು ಗಣಪತಿ ಮೂರ್ತಿಗೆ ಪೂಜೆ ನೀಡಿ, ನಮಸ್ಕರಿಸುತ್ತಿದ್ದದ್ದು ಸರ್ವೇ ಸಾಮಾನ್ಯವಾಗಿತ್ತು.

ಬಿಗಿ ಭದ್ರತೆ: ಗಣಪತಿ ವಿಸರ್ಜನಾ ಶೋಭಾಯಾತ್ರೆಗೆ ಬಿಗಿ ಪೊಲೀಸ್ ಬಂದೋಬಸ್ತ್ ಆಯೋಜಿಸಲಾಗಿತ್ತು. ಎತ್ತರದ ಕಟ್ಟಡದ ಮೇಲೆ ಹಾಗೂ ಪ್ರಮುಖ ವೃತ್ತಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸೂಕ್ಷ್ಮ ಪ್ರದೇಶಗಳು ಎಂದು ಗುರುತಿಸಿದ್ದ ಹಲವು ಕಡೆ ಹೆಚ್ಚಿನ ಪೊಲೀಸರನ್ನು ನೇಮಿಸಲಾಗಿತ್ತು. ಡ್ರೋಣ್ ಕ್ಯಾಮರಾ ಮೂಲಕ ಹದ್ದಿನ ಕಣ್ಣಿಡಲಾಗಿತ್ತು.

ಇಂದು ಚಾ.ನಗರ ದಸರಾಗೆ ಚಾಲನೆ

ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವ ಜಿಲ್ಲಾ ಕೇಂದ್ರ



ಚಾಮರಾಜನಗರ, ಅ.16– ಮೈಸೂರು ದಸರಾ ಭಾಗವಾಗಿ ಗಡಿ ಜಿಲ್ಲೆ ಚಾಮರಾಜನಗರದಲ್ಲಿಯೂ ಅ.17ರಿಂದ 20 ರವರೆಗೆ ನಾಲ್ಕು ದಿನಗಳ ಕಾಲ ಸಾಂಸ್ಕೃತಿಕ ದಸರಾ ಆಯೋಜನೆ ಮಾಡಲಾಗಿದ್ದು, ಇದರ ಅಂಗವಾಗಿ ಜಿಲ್ಲಾ ಕೇಂದ್ರ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಜಿಲ್ಲಾ ಕೇಂದ್ರ ಕಂಗೊಳಿಸುತ್ತಿದೆ.

ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ರಾಮಸಮುದ್ರದಿಂದ ಭುವನೇಶ್ವರಿ ವೃತ್ತದವರೆಗೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಅಲ್ಲದೇ ಗುಂಡ್ಲುಪೇಟೆ ವೃತ್ತ, ಸಂತೇಮರಹಳ್ಳಿ ವೃತ್ತದಲ್ಲಿ ಬಣ್ಣ–ಬಣ್ಣದ ವಿದ್ಯುತ್ ದೀಪಗಳು ಕಂಗೊಳಿಸುತ್ತಿದ್ದು, ಆಕರ್ಷಣೀಯವಾಗಿದೆ.

ನಗರದ ಬ್ರಹ್ಮರಾಂಭ ಚಿತ್ರಮಂದಿರದ ಆವರಣದಲ್ಲಿ ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳಾದ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ, ಶಕ್ತಿ ಯೋಜನೆ ಕುರಿತು ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಅಲ್ಲದೇ ಚಾಮರಾಜೇಶ್ವರ ಸ್ವಾಮಿ ದೇವಾಲಯ ಆವರಣ ಸೇರಿದಂತೆ ಜಿಲ್ಲಾಡಳಿತ ಭವನ, ಸೆಸ್ಕಾಂ ಇಲಾಖೆ, ನಗರಸಭೆ ಹಾಗೂ ಸರ್ಕಾರಿ ಕಚೇರಿಗಳು, ಪ್ರಮುಖ ಸ್ಥಳಗಳಲ್ಲಿ ದೀಪಾಲಂಕಾರ ಮಾಡಲಾಗಿದೆ. ಚಾಮರಾಜೇಶ್ವರಸ್ವಾಮಿ ಉದ್ಯಾನವನದ ಮುಂಭಾಗ ಹುಲಿಯ ಮೇಲೆ ಕುಳಿತಿರುವ ಮಾದಪ್ಪನ ವಿದ್ಯುತ್ ದೀಪಾಲಂಕಾರ ನೋಡುಗರ ಗಮನ ಸೆಳೆಯುತ್ತಿದೆ.

ಬೃಹತ್ ವೇದಿಕೆ ನಿರ್ಮಾಣ: ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದ ಆವರಣದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದ್ದು, ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ವೇದಿಕೆ ಮುಂಭಾಗ ಸಾವಿರಾರು ಆಸನಗಳ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಬೃಹತ್ ಗಾತ್ರದ ಎಲ್‌ಇಡಿ ಟಿವಿಗಳನ್ನು ಅಳವಡಿಸಲಾಗಿದ್ದು, ಪ್ರೇಕ್ಷಕರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ರಸದೌತಣ ಬಡಿಸಲು ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ.

ಗ್ರಾಮಸ್ಥರಲ್ಲಿ ಆತಂಕ ಉಂಟು ಮಾಡಿದ್ದ ಚಿರತೆ ಸೆರೆ

ಕೊಳ್ಳೇಗಾಲ, ಅ.16– ತಾಲೂಕಿನ ಗುಂಡೇಗಾಲದಲ್ಲಿ ನಾಗರಿಕರಿಗೆ ಉಪಟಳ ನೀಡಿ ಗ್ರಾಮದಲ್ಲಿ ಭೀತಿಯುಂಟು ಮಾಡಿದ್ದ ಚಿರತೆಯು ಸೋಮವಾರ ಬೆಳಗಿನ ಜಾವ ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ಸೆರೆಯಾಗಿದೆ.



ಗುಂಡೇಗಾಲ ಗ್ರಾಮದಲ್ಲಿ ಕಳೆದ ಹಲವಾರು ದಿನಗಳ ಹಿಂದೆ ಗ್ರಾಮಸ್ಥರೊಬ್ಬರಿಗೆ ಚಿರತೆ ಕಾಣಿಸಿಕೊಂಡಿತ್ತು. ಅದಾದ ಬಳಿಕವೂ ಸಹಾ ಆಗಿಂದಾಗ್ಗೆ ಚಿರತೆ ಕಾಣಿಸಿಕೊಂಡ ಹಿನ್ನೆಲೆ ಗ್ರಾಮದಲ್ಲಿ ಭಯದ ವಾತಾವರಣ ಉಂಟಾಗಿತ್ತು. ಈ ಹಿನ್ನೆಲೆ ಅರಣ್ಯ ಇಲಾಖೆ ಅಧಿಕಾರಿಗಳು ಗುಂಡೇಗಾಲದಲ್ಲಿ ಕಳೆದ 1 ತಿಂಗಳ ಹಿಂದೆ ಬೋನಿಟ್ಟು ಚಿರತೆ ಸೆರೆಗೆ ಕ್ರಮವಹಿಸಿದ್ದರು. ಆದರೆ ಚಿರತೆ ಸೆರೆ ಸಿಕ್ಕಿರಲಿಲ್ಲ, ಬಳಿಕ ಅರಣ್ಯ ಇಲಾಖೆ, ಗ್ರಾಮಸ್ಥರ ಭೀತಿ ಹಿನ್ನೆಲೆ ಮೂರು ಕಡೆಗಳಲ್ಲಿ ಬೋನಿಟ್ಟು ಕ್ರಮಕೈಗೊಂಡಿತ್ತು. ಸೋಮವಾರ ಬೆಳಗ್ಗೆ 6ರ ಸುಮಾರಿನಲ್ಲಿ ಅರಣ್ಯ ಇಲಾಖೆ ಬೋನಿನಲ್ಲಿ ಚಿರತೆ ಸೆರೆಯಾಗಿದೆ. ಅತ್ತ ಚಿರತೆ ಸೆರೆ ಹಿನ್ನೆಲೆ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ನಿಜಕ್ಕೂ ಕಳೆದ 30 ದಿನಗಳ ಹಿಂದೆ ಹಲವು ಬಾರಿ ಕಾಣಿಸಿಕೊಂಡ ಚಿರತೆ ಇದೇನಾ ಅಥವಾ ಸೆರೆಯಾದ ಚಿರತೆ ಬೇರೆಯದ್ದಾ ಎಂಬ ಶಂಕೆಯೂ ಸಹಾ ಮೂಡಿದೆ. ಸದ್ಯ ಸೆರೆಯಾಗಿರುವ ಚಿರತೆ ಸುಮಾರು ನಾಲ್ಕು ವರ್ಷ ವಯಸ್ಸಿನದ್ದು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಚಾಮರಾಜನಗರದಲ್ಲಿ ಇಂದು ದಸರಾ ಕವಿಗೋಷ್ಠಿ

ಚಾಮರಾಜನಗರ, ಅ.16– ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ, ದಸರಾ ಮಹೋತ್ಸವ ಸಮಿತಿ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ದಸರಾ ಕವಿಗೋಷ್ಠಿ ಅಕ್ಟೋಬರ್ 17ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆಯಲಿದೆ.

ಬೆಳಗ್ಗೆ 11 ಗಂಟೆಗೆ ಯುವಕವಿಗೋಷ್ಠಿ ನಡೆಯಲಿದ್ದು, ಕವಿ ಡಾ. ಎಸ್. ನರೇಂದ್ರಕುಮಾರ್ ಉದ್ಘಾಟಿಸುವರು. ಕವಿ ಶೀಲ ಸತ್ಯೇಂದ್ರಸ್ವಾಮಿ ಅಧ್ಯಕ್ಷತೆ ವಹಿಸುವರು. ಕವಿ ಯರಗನಹಳ್ಳಿಯ ಬಿ. ಗುರುರಾಜು ಆಶಯ ನುಡಿಗಳನ್ನಾಡುವರು. ಕಾಳಿಂಗಸ್ವಾಮಿ ಸಿದ್ಧಾರ್ಥ, ಮಂಜುಳ. ವಿ, ಉಮಾಶಂಕರ ಸತ್ತೇಗಾಲ, ಡಾ. ಶಿವಕುಮಾರ್ ನಂಜಮೇಸ್ತ್ರಿ, ಅಂಬಳೆ ನಾಗೇಶ್, ಚಾ.ಹ. ರಾಮು, ಕಿರಣ್ ಗಿರ್ಗಿ, ಸುಂದರ ಬಿಳಿಗಿರಿರಂಗನಬೆಟ್ಟ, ಡಾ. ಮಹೇಶ್ ಕೋಡಿಉಗನೆ, ಕೆಂಪರಾಜು ಕಾಗಲವಾಡಿ, ಅಜರುದ್ದೀನ್, ಕೆ. ಯೋಗೇಶ ಚಿಕ್ಕತುಪ್ಪೂರು, ಶಿವಸಾಗರ್ ಒಡೆಯರಪಾಳ್ಯ, ಅನುಪಮ, ರುಚಿತ ಯರಗಂಬಳ್ಳಿ, ಮಂಜುಳ ವೀರನಪುರ, ಅಶ್ವಿನಿ ಹೆಗ್ಗವಾಡಿ, ಬಸವರಾಜು ಗುಂಬಳ್ಳಿ, ಸಿ.ಎಸ್. ಮಂಜುಳ, ಹರ್ಷಿತ ಮಾಂಬಳ್ಳಿ, ಮಂಗಳ ವೇಣುಗೋಪಾಲ, ಉಮಾ ಉಡಿಗಾಲ, ಡಾ. ಕುಮಾರ್ ಚಿಕ್ಕಹೊಳೆ, ಸುಮ ಭಜರಂಗಿ, ಪ್ರಥಮ್ ಸಾಗರ್, ಕೃಷ್ಣಮೂರ್ತಿ ಗಣಗನೂರು, ರಶ್ಮಿ ಎಸ್. ಮಹೇಶ್, ಚಂದಿರ ಪ್ರಿಯ, ಗುಂಪು ದೇವರಾಜ್, ಮನು ಸತ್ತೇಗಾಲ, ಅನಿಲ್ ಕುಮಾರ್ ಹೊಸೂರು, ಕೀರ್ತಿ ಶೇಖರ್ ಆಹ್ವಾನಿತ ಕವಿಗಳಾಗಿದ್ದಾರೆ.

ಮಧ್ಯಾಹ್ನ 2.30 ಗಂಟೆಗೆ ನಡೆಯುವ ಪ್ರಧಾನ ಕವಿಗೋಷ್ಠಿಯನ್ನು ವಿಶ್ರಾಂತ ಕುಲಪತಿ ಹಾಗೂ ಕವಿಗಳಾದ ಪ್ರೊ. ಪದ್ಮಾಶೇಖರ್ ಅವರು ಉದ್ಘಾಟಿಸುವರು. ನಿವೃತ್ತ ಡಿ.ವೈ.ಎಸ್.ಪಿ ಹಾಗೂ ಕವಿಗಳಾದ ಹೆಚ್.ಎಲ್. ಶಿವಬಸಪ್ಪ ಹೊರೆಯಾಲ ಅವರು ಅಧ್ಯಕ್ಷತೆ ವಹಿಸುವರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಎಂ. ಶೈಲಕುಮಾರ್ ಅವರು ಕವಿಗೋಷ್ಠಿಯ ಆಶಯ ನುಡಿಗಳನ್ನಾಡುವರು.

ಬಾಳಗುಣಸೆ ಮಂಜುನಾಥ, ಮದ್ದೂರು ದೊರೆಸ್ವಾಮಿ, ಡಾ. ಡಿ. ಸುಮಂಗಳ, ಪಿ. ಸಿದ್ದರಾಜು ದೊಡ್ಡರಾಯಪೇಟೆ, ಫೈರೋಜ್ ಖಾನ್, ಡಾ. ಬಿ.ಆರ್. ಕೃಷ್ಣಕುಮಾರ್, ಶಂಕರ ಅಂಕನಶೆಟ್ಟಿಪುರ, ಡಾ. ನಂಜುಂಡಸ್ವಾಮಿ ಹರದನಹಳ್ಳಿ, ಡಾ. ಮಹೇಶ್ ಚಿಕ್ಕಲ್ಲೂರು, ಕಾತ್ಯಾಯಿನಿ, ಪ್ರಕಾಶ್ ಬಳೇಪೇಟೆ, ಕೆ. ಶ್ರೀಧರ ಸಿರಿ, ಮಹೇಶ ಇರಸವಾಡಿ, ಆ.ಸಿ.ಮ, ಮಹೇಂದ್ರ ಹಸಗೂಲಿ, ಮಾಯಸುತ ಶಾಂತರಾಜು, ವೆಂಕಟೇಶಮೂರ್ತಿ (ಬಾಬು), ಬಿ.ಎಸ್. ಗವಿಸ್ವಾಮಿ, ಸುಭಾಷ್ ಮಾಡ್ರಳ್ಳಿ, ಜಯಪ್ರಕಾಶ್ ಪೊನ್ನಾಚಿ, ಸುಂದರ ಕಲಿವೀರ, ದುಂಡುಮಾದಯ್ಯ ರೇಚಂಬಳ್ಳಿ, ಆಲತ್ತೂರು ಶಾಂತೇಶ, ರವಿಚಂದ್ರ ಪ್ರಸಾದ್, ಸುರೇಶ್ ರಾಮಸಮುದ್ರ, ಡಾ. ಗುರುಕಿರಣ್, ಯೋಗಾನಂದ, ಗುರುಲಿಂಗಮ್ಮ ಅವರು ಆಹ್ವಾನಿತ ಕವಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಅದ್ಧೂರಿ ಶ್ರೀರಂಗಪಟ್ಟಣ ದಸರಾ

ಹಾಲಕ್ಕಿ ಸುಗ್ಗಿ ಕುಣಿತ, ಕೇರಳ ಚಂಡೆ, ಜಗ್ಗಲಿಗೆ, ಮಹಿಳಾ ಡೊಳ್ಳು ಕುಣಿತ ಕಲಾ ತಂಡಗಳು ಭಾಗವಹಿಸಿ ವಿಶೇಷ ಮೆರಗು ನೀಡಿತು.

ಗಮನ ಸೆಳೆದ ಸ್ತಬ್ಧ ಚಿತ್ರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಗೃಹಲಕ್ಷ್ಮಿ ಯೋಜನೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಸ್ತಬ್ಧ ಚಿತ್ರ, ಆರೋಗ್ಯ ಇಲಾಖೆ ವತಿಯಿಂದ ಹೃದಯಾಘಾತ ತ್ವರಿತ ಚಿಕಿತ್ಸೆ ಯೋಜನೆ ಕುರಿತು ಸ್ತಬ್ಧ ಚಿತ್ರ, ರೇಷ್ಮೆ ಇಲಾಖೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ವತಿಯಿಂದ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡುವ ಸ್ತಬ್ಧ ಚಿತ್ರ ಪ್ರದರ್ಶಿಸಲಾಯಿತು. ಮೆರವಣಿಗೆಗೂ ಮುನ್ನ ಬನ್ನಿಮಂಟಪದಲ್ಲಿ ವಿಶೇಷ ಪುಷ್ಪಾಲಂಕಾರಗಳಿಂದ ಸಿಂಗರಿಸಿದ್ದ ನಾಡದೇವತೆ ಶ್ರೀಚಾಮುಂಡೇಶ್ವರಿ ದೇವಿಗೆ ವೇದಬ್ರಹ್ಮ ಡಾ.ಭಾನುಪ್ರಕಾಶ್‌ಶರ್ಮಾ ನೇತೃತ್ವದಲ್ಲಿ ಮೊದಲಿಗೆ ಸ್ಥಳಶುದ್ಧಿ, ಗಣಪತಿ ಹೋಮ, ಪುಣ್ಯಾಹ, ದುರ್ಗಾ ಸಪ್ತಸತಿ ಪಾರಾಯಣ, ಬನ್ನಿಪೂಜೆ, ಶತವೃದ್ರ ಪಾರಾಯಣ, ಕೂಷ್ಮಾಂಡ ಛೇದನ, ಮಹಾಮಂಗಳಾರತಿ ಸೇರಿದಂತೆ ಹಲವು ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಶಾಸಕ ರಮೇಶ ಬಂಡಿಸಿದ್ದೇಗೌಡ ದಂಪತಿ ಪೂಜೆಯಲ್ಲಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು. ಬನ್ನಿಮಂಟಪದ ಬಳಿ ವಿಶೇಷ ಪೂಜೆ ಹಾಗೂ ಅಂಬಾರಿ ಮೆರವಣಿಗೆಗೆ ಚಾಲನೆ ನೀಡುವುದನ್ನು ಕಣ್ತುಂಬಿಕೊಳ್ಳಲು ಸಾರ್ವಜನಿಕರಿಗೆ ಬೆಂಗಳೂರು–ಮೈಸೂರು ಹೆದ್ದಾರಿ, ಪಟ್ಟಣದ ಸಾರ್ವಜನಿಕ ಬಸ್ ನಿಲ್ದಾಣ, ಪುರಸಭೆ ವೃತ್ತ ಹಾಗೂ ತಾಲೂಕು ಕಚೇರಿ ಮುಂಭಾಗ ಆಸನದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಕದಲೂರು ಉದಯ್, ಮಾಜಿ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್. ಯತೀಶ್, ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಎಸಿ ನಂದೀಶ್, ಎಎಸ್ಪಿ ಸಿ.ತಿಮ್ಮಯ್ಯ, ಶ್ರೀರಂಗಪಟ್ಟಣ ತಹಸೀಲ್ದಾರ್ ಅಶ್ವಿನಿ, ಪುರಸಭೆ ಮುಖ್ಯಾಧಿಕಾರಿ ರಾಣಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಹೋರಾಟಗಾರರಿಂದ ದೆಹಲಿ ಚಲೋ

ಭೇಟಿಗಾಗಿ ಸಮಯ ಕೇಳಿದ್ದಾರೆ. ನಾರಾಯಣಗೌಡ ಮತ್ತು ದೆಹಲಿ ಕನ್ನಡ ಸಂಘದ ಅಧ್ಯಕ್ಷ ನಾಗರಾಜ್ ಅವರ ಮನವಿಗೆ ಪಿಎಂಒ ಸಕಾರಾತ್ಮಕವಾಗಿ ಸ್ಪಂದಿಸಿದ್ದರಿಂದ ಅ.18ರಂದು ಸಂಜೆ ಮೋದಿ ಅವರನ್ನು ಭೇಟಿ ಮಾಡ ಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅಲ್ಲದೆ ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಸಹ ಭೇಟಿ ಯಾಗಲಿದ್ದಾರೆ. ಜಲಾಶಯಗಳಲ್ಲಿ ಕಡಿಮೆ ನೀರಿನ ಸಂಗ್ರಹವಿದ್ದು, ಬೇಸಿಗೆ ಯಲ್ಲಿ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಕೆಯ ಮೇಲೆ ತೀವ್ರ ಪರಿ ಣಾಮ ಬೀರಲಿದೆ ಎಂಬ ರಾಜ್ಯದ ಮನವಿಯ ಹೊರತಾಗಿಯೂ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿ ದಿನ 3,000 ಕ್ಯೂಸೆಕ್ ನೀರು ಬಿಡುವಂತೆ ಕರ್ನಾಟಕಕ್ಕೆ ಆದೇಶಿಸಿದೆ.

ಹಿಂಪಡೆಯಲು 'ಸುಪ್ರೀಂ' ನಕಾರ

ವಿರುದ್ಧ ಸಿಬಿಐ ತನಿಖೆಗೆ ಮಧ್ಯಂತರ ತಡೆಯಾಜ್ಞೆ ನೀಡಿದ ಕರ್ನಾಟಕ ಹೈಕೋರ್ಟ್ ಆದೇಶಕ್ಕೆ ಮಧ್ಯಪ್ರವೇಶಿಸಲು ಸುಪ್ರೀಂಕೋರ್ಟ್ ನಿರಾಕರಿಸಿತ್ತು.

ಫೆಬ್ರವರಿಯಲ್ಲಿ, ಡಿಕೆ ಶಿವಕುಮಾರ್ ವಿರುದ್ಧದ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ವಿಚಾರಣೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿತು ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಕ್ರಮ ಕೈಗೊಂಡ ಬಗ್ಗೆ ವರದಿ ಸಲ್ಲಿಸುವಂತೆ ತನಿಖಾ ಸಂಸ್ಥೆಗೆ ಸೂಚಿಸಿತ್ತು.

ಏನಿದು ಪ್ರಕರಣ: ಡಿ.ಕೆ. ಶಿವಕುಮಾರ್ ಅವರು 2013 ರಿಂದ 2018ರ ನಡುವಿನ ಅವಧಿಯಲ್ಲಿ ತಮ್ಮ ಆದಾಯಕ್ಕೂ ಮೀರಿದ ಸಂಪತ್ತು ಗಳಿಸಿದ್ದಾರೆ ಎಂದು ಆರೋಪಿಸಿ ಸಿಬಿಐ, ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ವಿವಿಧ ಕಲಂಗಳ ಅಡಿಯಲ್ಲಿ 2020ರ ಅಕ್ಟೋಬರ್ 3 ರಂದು ಪ್ರಕರಣ ದಾಖಲಿಸಿದೆ. 2017ರಲ್ಲಿ ಆದಾಯ ತೆರಿಗೆ ಇಲಾಖೆ ನಡೆಸಿದ ಶೋಧದ ಬಳಿಕ ಶಿವಕುಮಾರ್ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಾಗಿತ್ತು.

ರಾಜಕೀಯ ಮಾಡಿದ್ದೇನೆ; ಮುಂದೆಯೂ ಮಾಡ್ತೇನೆ

ಸೃಷ್ಟಿಯಾ ಗುತ್ತವೆ. ಪ್ರತಿ ಅರ್ಹ ಫಲಾನುಭವಿ ಕುಟುಂಬಕ್ಕೆ ವಾರ್ಷಿಕವಾಗಿ 50 ರಿಂದ 60 ಸಾವಿರ ರೂ.ಗಳನ್ನು ಸರ್ಕಾರ ಒದಗಿ ಸುತ್ತಿದ್ದು, ಕುಟುಂಬದ ಆರ್ಥಿಕ ಸಬಲೀ ಕರಣಕ್ಕೆ ಕಾರಣವಾಗಿದೆ ಎಂದು ವಿವರಿಸಿದರು.

ಆರೋಪಗಳು ಆರೋಪಗಳಷ್ಟೇ: ಹಳ್ಳಿಗಳಲ್ಲಿ 2–3 ಸಾವಿರ ರೂ. ಇದ್ದರೆ ಸಾಕು, ಒಂದು ತಿಂಗಳು ಜೀವನ ಮಾಡುತ್ತಾರೆ. ಅದೇ 4–5 ಸಾವಿರ ರೂ. ದೊರೆತಾಗ ಅವರ ಜೀವನ ಉನ್ನತೀಕರಿಸಲು ಸಹಾಯವಾಗುತ್ತದೆ. ಮಕ್ಕಳ ಶಾಲಾ ಶುಲ್ಕ ಕಟ್ಟಲು ಅನುಕೂಲವಾಗುತ್ತದೆ. ಬಹಳಷ್ಟು ಜನಕ್ಕೆ ಸಕ್ಕರೆ ಕಾಯಿಲೆ. ಈಗ ಸರಿಯಾಗಿ ಮಕ್ಕಳು ತಮ್ಮ ತಂದೆ–ತಾಯಿಂದಿರನ್ನು ನೋಡಿಕೊಳ್ಳುವುದಿಲ್ಲ. ತಂದೆ–ತಾಯಿಯರನ್ನು ನೋಡಿಕೊಳ್ಳುವವರ ಸಂಖ್ಯೆಯೂ ಕಡಿಮೆ. ಆದ್ದರಿಂದ ಸರ್ಕಾರ ದಿಂದ ನೀಡುವ ಹಣ ಮಾತ್ರ ತೆಗೆದುಕೊಳ್ಳುವುದಕ್ಕಾದರೂ ಅನುಕೂಲ ವಾಗುತ್ತದೆ. ಆದ್ದರಿಂದ ಯಾರು ಎಷ್ಟೇ ಆರೋಪಗಳನ್ನು ಮಾಡಿದರೂ ಪರ ವಾಗಿಲ್ಲ. ರಾಜಕೀಯವಾಗಿ ಆರೋಪಗಳು ಸಹಜ. ಆದರೆ ಆರೋಪಗಳು ಆರೋಪ ಗಳಾಗಿರುತ್ತವೆಯೇ ಹೊರತು ನಿಜವಾಗಿ ರುವುದಿಲ್ಲ. ಸತ್ಯಾಂಶವೇ ಬೇರೆಯಾಗಿರುತ್ತದೆ ಎಂದರು.

ಸನ್ಮಾನ: ಇದೇ ವೇಳೆ ಶಾಸಕರಾದ ಪುಟ್ಟರಂಗಶೆಟ್ಟಿ, ಕೆ.ಹರೀಶ್‌ಗೌಡ, ಶ್ರೀವತ್ಸ ಗಣೇಶ್ ಪ್ರಸಾದ್, ಮಂಜುನಾಥ್, ರವಿಶಂಕರ್, ಬಿ.ಜೆ.ಗೋವಿಂದಪ್ಪ, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವ ರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಬಳಿಕ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಕುರುಬ ಸಮುದಾಯದ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶ್ರೀ ಕಾಗಿನೆಲೆ ಕನಕಗುರು ಪೀಠದ ಶಿವಾ ನಂದಪುರಿ ಸ್ವಾಮೀಜಿ, ಹೊಸದುರ್ಗ ಈಶ್ವರಾನಂದಪುರಿ ಸ್ವಾಮೀಜಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಕೆ.ಮರೀಗೌಡ, ರಾಜ್ಯ ಕುರುಬರ ಸಂಘದ ಪ್ರಭಾರ ಅಧ್ಯಕ್ಷ ಸುಬ್ರಹ್ಮಣ್ಯ, ಉಪ ಮೇಯರ್ ಡಾ.ರೂಪ, ಪಾಲಿಕೆ ಸದಸ್ಯ ಜೆಗೋಪಿ, ಮುಖಂಡರಾದ ಈರುಳ್ಳಿ ಕುಮಾರ್, ನಾಡನಹಳ್ಳಿ ಎಂ.ರವಿ, ಹೊಸ ಕಾಮನಕೊಪ್ಪಲು ಸ್ವಾಮಿ ಮತ್ತಿತರರಿದ್ದರು.

ವಾಚ್‌ಗಳು ವಶಕ್ಕೆ

ಹೇಳಿಕೆಯಲ್ಲಿ ತಿಳಿಸಿದೆ. ಪಂಚರಾಜ್ಯಗಳ ವಿಧಾನ ಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ನೇತೃತ್ವದ ಇಂಡಿಯಾ ನಾಗಾಲೋಟದಲ್ಲಿ ಮುನ್ನು ಗುತ್ತಿರುವ ಬೆನ್ನಲ್ಲೇ ಕಾಂಗ್ರೆಸ್ ಆಡಳಿತ ವಿರುವ ರಾಜ್ಯದಲ್ಲಿ ಈ ದಾಳಿ ನಡೆದಿ ರುವುದು ಸಂಘಟನೆಗೆ ತೀವ್ರ ಹಿನ್ನಡೆ ಯಾಗಿದೆ. ಚುನಾವಣಾ ಸಿದ್ಧತೆಯಲ್ಲಿ ಇಂತಹ ದಾಳಿ ಹಲವು ವಿಷಯಾಂತರಕ್ಕೆ ತಿರುಗಿ ಪಕ್ಷ ಮತ್ತು ಒಕ್ಕೂಟಕ್ಕೆ ಭಾರಿ ಹಿನ್ನಡೆಯಾಗಲಿದೆ ಎಂಬ ಉದ್ದೇಶ ದಿಂದ ವರಿಷ್ಠರ

ಸೂಚನೆಯಂತೆ ವೇಣುಗೋಪಾಲ್ ನಗರಕ್ಕೆ ದಿಢೀರನೆ ಆಗಮಿಸಿದ್ದಾರೆ. ದಾಳಿಯಿಂದ ಪಕ್ಷದ ಮೇಲಾಗುತ್ತಿರುವ ಡ್ಯಾಮೇಜ್ ಕಂಟ್ರೋಲ್ ಮಾಡುವುದು ಮತ್ತು ಕರ್ನಾಟಕದ ಪ್ರತಿಪಕ್ಷವಾಗಿರುವ ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ಪ್ರತಿ ಅಸ್ತ್ರಗಳನ್ನು ಪ್ರಯೋಗ ಮಾಡುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ವೇಣುಗೋಪಾಲ್ ಹಾಗೂ ಖರ್ಗೆ ಅವರು, ಕೆಪಿಸಿಸಿ ಅಧ್ಯಕ್ಷರಿಗೆ ಕೆಲವು ಕಿವಿಮಾತು ಗಳನ್ನು ಹೇಳಿದ್ದಾರೆ ಎಂದು ಹೇಳಲಾಗಿದೆ. ಇದೇ ಸಂದರ್ಭದಲ್ಲಿ ಲೋಕಸಭಾ ಚುನಾವಣೆ ಹಾಗೂ ತೆಲಂಗಾಣ ವಿಧಾನಸಭಾ ವಿಧಾನಸಭಾ ಚುನಾವಣೆ ಕುರಿತಂತೆ ಈ ಮೂವರು ನಾಯಕರು ಮಾತುಕತೆ ನಡೆಸಿದ್ದಾರೆ. ಆದರೆ, ಹೆಚ್ಚಿನ ವಿವರ ತಿಳಿದು ಬಂದಿಲ್ಲ. ಮಾತುಕತೆಯ ನಂತರ ಸುದ್ದಿಗಾರರೊಂದಿಗೆ ಮಾತ ನಾಡಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ನಾನು ಹೇಡಿ ಅಲ್ಲ, ಹೆದರಿ ಎಲ್ಲಿಯೂ ಓಡಿ ಹೋಗಲ್ಲ. ಮಾಜಿ ಮುಖ್ಯಮಂತ್ರಿ, ನಕಲಿ ಸ್ವಾಮಿ ಬ್ಲಾಕ್‌ಮೇಲ್, ಲೂಟಿ ರವಿ ಎಲ್ಲರಿಗೂ ತಕ್ಕ ಉತ್ತರ ಕೊಡುತ್ತೇನೆ. ಅವರದೆಲ್ಲ ಬಿಚ್ಚಿಡುತ್ತೇನೆ ಎಂದರು.

ನಾನು ಎಲ್ಲಿಯೂ ಓಡಿ ಹೋಗುವುದಿಲ್ಲ. ನ್ಯಾಯಾ ಲಯದ ವಿಚಾರಣೆ, ನೆಲದ ಕಾನೂನನ್ನು ನಾನು ಗೌರವಿ ಸುತ್ತೇನೆ. ಯಾರಿಗೆ ಏನು ಉತ್ತರ ನೀಡಬೇಕೋ ನೀಡು ತ್ತೇನೆ. ಅವರಿಗೆ ಐಟಿ ಇಲಾಖೆ ಪ್ರಕ್ರಿಯೆ ಗೊತ್ತಿಲ್ಲ. ಅವರು ಏಜೆಂಟರಂತೆ ಮಾತನಾಡುತ್ತಿದ್ದಾರೆ. ಅವರಂತೆ ನಾನು ಮಾತನಾಡುವುದಿಲ್ಲ. ನಾನು ಜವಾಬ್ದಾರಿಯುತ ಸ್ಥಾನದಲ್ಲಿ ನಿಂತು ಅವರಂತೆ ಮಾತನಾಡಲು ಸಾಧ್ಯವಿಲ್ಲ. ನ್ಯಾಯಾಲಯದ ವಿಚಾರದಲ್ಲಿ ಆ ರೀತಿ ಮಾತನಾಡಿದರೆ ತಪ್ಪಾಗುತ್ತದೆ. ಅವರಿಗೆ ಉತ್ತರ ನೀಡಲು ಮುಹೂರ್ತ ಫಿಕ್ಸ್ ಮಾಡುತ್ತೇನೆ ಎಂದು ತಿಳಿಸಿದರು.

ಪ್ರತಿಪಕ್ಷದವರ ಆರೋಪಕ್ಕೆ ಹೈವೋಲ್ಟೇಜೂ ಕೊಡ್ತಿನಿ, ಲೋವೋಲ್ಟೇಜೂ ಕೊಡ್ತಿನಿ, ನಕಲಿಗೂ ಕೊಡುವೆ, ಲೂಟಿಗೂ ಕೊಡುವೆ, ಸ್ವಲ್ಪ ತಾಳ್ಮೆಯಿಂದ ಕಾಯಿರಿ. ಬಿಜೆಪಿಯವರು ಪ್ರತಿಭಟನೆ ಮಾಡಬೇಕು, ಪ್ರತಿಭಟನೆ ಮಾಡಿದರೆ ಜನರಿಗೆ ಅವರ ಎಲ್ಲಾ ತರಹದ ಲೂಟಿ ಬಗ್ಗೆ ಗೊತ್ತಾಗುತ್ತದೆ, ಎಲ್ಲವನ್ನೂ ಬಿಚ್ಚಿಡುತ್ತೇವೆ ಎಂದೂ ಹೇಳಿದರು.

ವೇಣುಗೋಪಾಲ್ ಅವರ ಆಗಮನ ಹಾಗೂ ಪಕ್ಷದ ನಾಯಕರ ಸಭೆ ಕುರಿತು ಕೇಳಿದಾಗ, ಪಕ್ಷದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ನಾನು ಪಕ್ಷದ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಲೋಕಸಭಾ ಕ್ಷೇತ್ರಗಳಿಗೆ ಹೋಗಿ ವರದಿ ನೀಡುವಂತೆ ಮಂತ್ರಿಗಳಿಗೆ ಜವಾಬ್ದಾರಿ ನೀಡಿದ್ದೆವು. ಈ ಪ್ರಕ್ರಿಯೆ ತಡ ವಾಗುತ್ತಿರುವುದರಿಂದ ಅದನ್ನು ತ್ವರಿತವಾಗಿ ಮಾಡಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು. ನಿಗಮ–ಮಂಡಳಿಗಳಲ್ಲಿ ಶಾಸಕರಿಗೆ ಮಾತ್ರ ಸ್ಥಾನವೇ ಕಾರ್ಯಕರ್ತರಿಗೂ ಸ್ಥಾನ ಸಿಗುತ್ತದೆಯೋ ಎಂದು ಕೇಳಿದಾಗ, ಶಾಸಕರು ಹಾಗೂ ಕಾರ್ಯಕರ್ತರು ಇಬ್ಬರಿಗೂ ನೀಡಬೇಕು. ಪಕ್ಷ ಎಂದರೆ ಎಲ್ಲರೂ ಸೇರು ತ್ತಾರೆ. ಎಲ್ಲರಿಗೂ ಸ್ಥಾನಮಾನ ನೀಡಬೇಕು. ಈ ವಿಚಾರ ವಾಗಿ ನಾನು ಹಾಗೂ ಮುಖ್ಯಮಂತ್ರಿಗಳು ಒಂದೆರಡು ದಿನದಲ್ಲಿ ಚರ್ಚೆ ಮಾಡುತ್ತೇವೆ ಎಂದರು.

ಮಹಿಳಾ ದಸರಾ ಕಾರ್ಯಕ್ರಮಗಳಿಗೆ ಉಸ್ತುವಾರಿ ಸಚಿವ ಡಾ. ಮಹದೇವಪ್ಪ ಚಾಲನೆ

● ಅತ್ಯುತ್ಸಾಹದಿಂದ ಪಾಲ್ಗೊಂಡಿರುವ ಅಪಾರ ಸಂಖ್ಯೆಯ ಮಹಿಳೆಯರು
● ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಮಾರಾಟ ಮಳಿಗೆಗಳು

ಮೈಸೂರು,ಅ.16.(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಎರಡನೇ ದಿನವಾದ ಸೋಮವಾರ ಜೆ.ಕೆ.ಮೈದಾನದಲ್ಲಿ ಮಹಿಳಾ ದಸರಾ ಕಾರ್ಯಕ್ರಮ ಆರಂಭವಾಗಿದ್ದು, ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಮಹಿಳೆಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗಮನ ಸೆಳೆದರು.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಮಹಿಳಾ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಮಹಿಳಾ ದಸರಾ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು. ಅಲ್ಲದೆ, ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಮಾರಾಟ ಹಾಗೂ ಪ್ರದರ್ಶನ ಉದ್ಘಾಟಿಸಿದರು.

ಬಳಿಕ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಮಹಿಳೆಯರು ಸರ್ಕಾರದ ಯೋಜನೆಗಳ ಸೌಲಭ್ಯ ಪಡೆಯುವುದ ರೊಂದಿಗೆ ಕಡ್ಡಾಯ ಶಿಕ್ಷಣದ ಮೂಲಕ ಸ್ವಾವಲಂಬಿ ಜೀವನ ರೂಪಿಸಿಕೊಳ್ಳುವತ್ತ ಗಮನ ಹರಿಸಬೇಕು. ಮೈಸೂರು ದಸರಾ ಎಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸುವ ಕಾರ್ಯಕ್ರಮ. ನಾಲ್ವಡಿ, ಮಹಿಳೆಯರ ಶಿಕ್ಷಣಕ್ಕೆ ಒತ್ತು ನೀಡಿ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಸಾವಿತ್ರಿ ಬಾಫುಲೆ ಮತ್ತು ಜ್ಯೋತಿ ಬಾಫುಲೆ ಮಹಿಳೆಯರ ವಿರುದ್ಧದ ದೌರ್ಜನ್ಯವನ್ನು ಖಂಡಿಸಿ ಮಹಿಳಾ ಶಿಕ್ಷಣಕ್ಕಾಗಿ ಶ್ರಮಿಸಿದರು. 17ನೇ ಶತಮಾನದಲ್ಲಿ ಬಸವಣ್ಣನವರು ಲಿಂಗ ತಾರತಮ್ಯದ ವಿರುದ್ಧ ಹೋರಾಡಲು ಮನೆಯನ್ನು ಬಿಟ್ಟು ಹೊರ ನಡೆದರು. ಅದೇ ಮಾದರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮಹಿಳೆಯರ ಸಮಾನತೆಗಾಗಿ ತಮ್ಮ ಕಾನೂನು ಮಂತ್ರಿ ಪದವಿಯನ್ನೇ ತ್ಯಾಗ ಮಾಡಿದರು. ಇದರ ಪರಿಣಾಮವಾಗಿ ಇಂದು ಮಹಿಳೆಯರಿಗೆ ಉತ್ತಮವಾದ ಸೌಲಭ್ಯ ದೊರಕಲು ಕಾರಣ ಎಂದರು.

ಸರ್ಕಾರವು ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರಗಳನ್ನು ನೀಡುತ್ತಿದ್ದು ಇದನ್ನು ಬಳಸಿಕೊಂಡು ಆರೋಗ್ಯವಂತರಾಗಿ ರಬೇಕು. ನಮ್ಮ ಸರ್ಕಾರದ ಅನ್ನಭಾಗ್ಯ, ಸ್ತ್ರೀ ಶಕ್ತಿ, ಗೃಹಲಕ್ಷ್ಮಿ ಯೋಜನೆಗಳ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿದೆ. ಮಹಿಳೆಯರು ಕ್ರೀಡೆ, ಕಲೆ, ಸಾಹಿತ್ಯ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಲು ಮುಂದಾಗಬೇಕು. ಮಹಿಳೆಯರನ್ನು ಸಮಾಜದ ಬೆನ್ನೆಲುಬು ಎನ್ನುತ್ತಾರೆ. ಕುಟುಂಬ ಮತ್ತು ಸಮಾಜವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಜವಾಬ್ದಾರಿ ಮಹಿಳೆ ಯರ ಮೇಲಿದೆ. ಆರೋಗ್ಯ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಹಿಳೆಯರು ಮುಂದೆ ಬಂದು ಸರ್ವತೋಮುಖ ಅಭಿವೃದ್ಧಿಯತ್ತ ಸಾಗಬೇಕು ಎಂದರು.

> ಬದಲಾದ ವಾತಾವರಣದಲ್ಲಿ ಮಹಿಳೆಯರು ಅಭಿವೃದ್ಧಿಯತ್ತ ಸಾಗುತ್ತಿದ್ದಾರೆ. ಮಹಿಳೆಯರಲ್ಲಿರುವ ಪ್ರತಿಭೆ ಹೊರತರಲು ಅವಕಾಶ ಮತ್ತು ವೇದಿಕೆ ಕಲ್ಪಿಸುವ ಅಗತ್ಯವಿದೆ. ನಮ್ಮ ಸರ್ಕಾರ ಮಹಿಳೆಯರಿಗೆ ಅನೇಕ ಯೋಜನೆಗಳನ್ನು ರೂಪಿಸಿದ್ದು ಅದರಲ್ಲಿ ಕೌಶಲ್ಯ ತರಬೇತಿ ಕಾರ್ಯಕ್ರಮ ಬಳಸಿ ಕೊಂಡು ಸ್ವಾವಲಂಬಿ ಬದುಕು ನಡೆಸಬೇಕು.
> – ಡಾ.ಹೆಚ್.ಸಿ.ಮಹದೇವಪ್ಪ,
> ಜಿಲ್ಲಾ ಉಸ್ತುವಾರಿ ಸಚಿವ

ಮೇಯರ್ ಶಿವಕುಮಾರ್ ಮಾತನಾಡಿ, ಮಹಿಳೆಯರು ಸ್ವಾವಲಂಬಿಗಳಾದರೆ ದೇಶದ ಆರ್ಥಿಕತೆ ಸದೃಢತೆಗೆ ಸಹಾಯವಾಗುತ್ತದೆ. ಮಹಿಳೆಯರು ಗುಡಿ ಕೈಗಾರಿಕೆ ಮಾತ್ರ ವಲ್ಲದೆ, ಕಾರ್ಪೊರೇಟ್ ಕ್ಷೇತ್ರದಲ್ಲೂ ಹೆಸರು ಮಾಡುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಹುಣಸೂರು ಉಪ ವಿಭಾಗಾಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ದಸರಾ ಉಪ ಸಮಿತಿಯ ವಿಶೇಷಾಧಿಕಾರಿ ರುಚಿ ಬಿಂದಾಲ್, ಉಪಮೇಯರ್ ಡಾ.ರೂಪ, ಮಹಿಳಾ ಮತ್ತು ಮಕ್ಕಳ ದಸರಾ ಉಪ ಸಮಿತಿಯ ಅಧ್ಯಕ್ಷೆ ಸುಧಾ ಮಹದೇವಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜು, ಪಾಲಿಕೆಯ ಸದಸ್ಯೆ ಪ್ರಮೀಳಾ ಭರತ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಳೆಯಿಂದ ಮಹಾರಾಜ ಕಾಲೇಜು ಮೈದಾನದಲ್ಲಿ ಯುವ ದಸರಾ

ಖ್ಯಾತ ಚಲನಚಿತ್ರ ನಟ ಡಾ.ಶಿವರಾಜ್‌ಕುಮಾರ್ ಉದ್ಘಾಟನೆ

ಮೈಸೂರು, ಅ. 16(ಆರ್‌ಕೆ)– ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಯುವ ದಸರಾ ಕಾರ್ಯಕ್ರಮಗಳು ಅಕ್ಟೋಬರ್ 18ರಿಂದ 21ರವರೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿವೆ.

ಬುಧವಾರ ಸಂಜೆ 6 ಗಂಟೆಗೆ ಖ್ಯಾತ ಚಲನಚಿತ್ರ ನಟ ಶಿವರಾಜ್‌ಕುಮಾರ್ ಯುವ ದಸರಾ ಉದ್ಘಾಟಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಚಿವ ಕೆ. ವೆಂಕಟೇಶ್ ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಇಂದು ಡಾ. ಮಹದೇವಪ್ಪ ತಮ್ಮ ಗೃಹ ಕಚೇರಿಯಲ್ಲಿ 2023ರ ಯುವ ದಸರಾ ಪೋಸ್ಟರ್ ಅನ್ನು ಬಿಡುಗಡೆ ಮಾಡಿದರು. ಯುವ ದಸರಾ ಸಮಿತಿ ಉಪ ವಿಶೇಷಾಧಿಕಾರಿ ಸೀಮಾ ಲಾಟ್ಕರ್, ಕಾರ್ಯಾಧ್ಯಕ್ಷ ಕೆ.ಆರ್. ರಕ್ಷಿತ್, ಸಮನ್ವಯಾಧಿಕಾರಿ ಎಂ.ಕೆ. ಸವಿತಾ, ಸಹಕಾರ್ಯದರ್ಶಿ ಹೆಚ್. ಚೆನ್ನಪ್ಪ ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ಸೋಮವಾರ ಗೃಹ ಕಚೇರಿಯಲ್ಲಿ ಯುವ ದಸರಾ ಪೋಸ್ಟರ್ ಬಿಡುಗಡೆ ಮಾಡಿದರು. ಎಸ್ಪಿ ಸೀಮಾ ಲಾಟ್ಕರ್, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ, ಎಸಿ ಕೆ.ಆರ್.ರಕ್ಷಿತ್, ಹೆಚ್.ಚೆನ್ನಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಅಕ್ಟೋಬರ್ 18ರಂದು ಸಂಜೆ 7ರಿಂದ ರಾತ್ರಿ 10.30ರವರೆಗೆ ಸ್ಯಾಂಡಲ್‌ವುಡ್ ನೈಟ್, ಗುರುವಾರ ಸಂಜೆ 6ರಿಂದ ರಾತ್ರಿ 8 ಗಂಟೆವರೆಗೆ ಸಂಚಿತ್ ಹೆಗ್ಡೆ ಮತ್ತು ತಂಡ, ರಾತ್ರಿ 9.30ರಿಂದ 10.50 ಗಂಟೆವರೆಗೆ ಶಿಲ್ಪಾ ರಾವ್ ಮತ್ತು ತಂಡವು ಸಂಗೀತ, ನೃತ್ಯ ಕಾರ್ಯಕ್ರಮ ಪ್ರಸ್ತುತಪಡಿಸಲಿದೆ.

ಅಕ್ಟೋಬರ್ 20ರಂದು ಸಂಜೆ 7ರಿಂದ ರಾತ್ರಿ 8.30 ಗಂಟೆಯವರೆಗೆ All ok ಮತ್ತು ತಂಡ, ರಾತ್ರಿ 9ರಿಂದ 10.30 ಗಂಟೆವರೆಗೆ ಸಲೀಂ ಸುಲ್ಯೆಮಾನ್ ತಂಡ, ಅಕ್ಟೋಬರ್ 21ರಂದು ಸಂಜೆ 7.10ರಿಂದ 8.40 ಗಂಟೆವರೆಗೆ ಮೋಹನ ಸಿಸ್ಟರ್ಸ್ ತಂಡ ಹಾಗೂ ರಾತ್ರಿ 9ರಿಂದ 10.30 ಗಂಟೆವರೆಗೆ ಬೆನ್ನಿದಯಾಳ್ ಮತ್ತು ತಂಡದಿಂದ ಕಲಾ ಪ್ರದರ್ಶನ ನಡೆಯಲಿದೆ.

ಬಸ್–ಟಾಟಾ ಸುಮೋ ಮುಖಾಮುಖಿ ಡಿಕ್ಕಿ; ಮೂವರು ಮಹಿಳೆಯರು ಸೇರಿ ಐವರ ದುರ್ಮರಣ



ಗದಗ: ಕೆಎಸ್‌ಆರ್‌ಟಿಸಿ ಬಸ್ ಹಾಗೂ ಟಾಟಾ ಸುಮೋ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಮೂವರು ಮಹಿಳೆಯರು ಸೇರಿ ಐವರು ದುರ್ಮರಣವನ್ನಪ್ಪಿರುವ ಘಟನೆ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ನಿಡಗುಂದಿಕೊಪ್ಪ ಕ್ರಾಸ್ ಬಳಿ ಸೋಮವಾರ ನಡೆದಿದೆ.

ಮೃತರನ್ನು ಮಾದೇನ ಹಿಪ್ಪರಗಿ ನಿವಾಸಿಗಳಾದ ಶಿವಕುಮಾರ ಕಲಶೆಟ್ಟಿ(50), ಚಂದ್ರಕಲಾ ಕಲಶೆಟ್ಟಿ(42), ರಾಣಿ ಕಲಶೆಟ್ಟಿ(32) ಹಾಗೂ ಅಫಜಲಪುರ ನಿವಾಸಿಗಳಾದ ಸಚಿನ್ ಅಬ್ಬಾಸ್ ಕತ್ತಿ (31), ದ್ರಾಕ್ಷಾಯಣಿ ಕತ್ತಿ(33) ಎಂದು ಗುರುತಿಸಲಾಗಿದೆ.

ಕಲಬುರಗಿಯಿಂದ ಶಿರಹಟ್ಟಿ ಫಕ್ಕೀರೇಶ್ವರ ಮಠದ ದರ್ಶನಕ್ಕೆ ತೆರಳುತ್ತಿದ್ದ ಟಾಟಾ ಸುಮೋದ ಹಿಂಬದಿಯ ಟೈರ್ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ಎದುರಿಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ಹೊಡೆದ ರಭಸಕ್ಕೆ ಟಾಟಾ ಸುಮೋದಲ್ಲಿದ್ದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡ ನಾಲ್ವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ನರೇಗಲ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

26 ವಾರಗಳ ಗರ್ಭಪಾತಕ್ಕೆ ಸುಪ್ರೀಂಕೋರ್ಟ್ ನಕಾರ

ನವದೆಹಲಿ: ಕಾನೂನಿನಡಿ 32 ವಾರಗಳ ಗರ್ಭಪಾತಕ್ಕೆ ಅವಕಾಶವಿದ್ದರೂ, ವಿವಾಹಿತ ಮಹಿಳೆಯೊಬ್ಬರು 26 ವಾರಗಳ ಗರ್ಭಪಾತಕ್ಕೆ ಅವಕಾಶ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ವಜಾ ಮಾಡಿತು. ಮಹಿಳೆಗೆ ತಜ್ಞ ವೈದ್ಯರ ನಿಗಾದಲ್ಲಿ ಸುರಕ್ಷಿತವಾಗಿ ಹೆರಿಗೆ ಮಾಡಿಸಲು ನವದೆಹಲಿಯ ಏಮ್ಸ್ ಆಸ್ಪತ್ರೆಗೆ ಸೂಚಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಮೂರ್ತಿಗಳಾದ ಜೆ.ಬಿ.ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠವು ಈ ಆದೇಶ ನೀಡಿತು. ವೈದ್ಯಕೀಯವಾಗಿ ಗರ್ಭದಲ್ಲಿರುವ ಮಗುವನ್ನು ಹರಣ ಮಾಡಲು ಅನುಮತಿ ನೀಡಲಾಗುವುದಿಲ್ಲ. ಮಗು ಪೂರ್ಣವಾಗಿ ಬೆಳವಣಿಗೆ ಹೊಂದದೆಯೇ ಹೆರಿಗೆ ಮಾಡುವ ಆಯ್ಕೆಯನ್ನೂ ನಿರಾಕರಿಸಿತು. ಇದಲ್ಲದೇ, ತಾಯಿ ಬಯಸಿದಲ್ಲಿ ಶಿಶು ಹುಟ್ಟಿದ ನಂತರ ಅದನ್ನು ಸರ್ಕಾರದ ಸುಪರ್ದಿಗೆ ವಹಿಸಬಹುದು ಎಂದು ಪೀಠ ಹೇಳಿದೆ.

ಸಂವಿಧಾನದ 142ನೇ ವಿಧಿಯ ಅನುಸಾರ ಮಹಿಳೆ ಗರ್ಭಪಾತದ ಹಕ್ಕನ್ನು ಹೊಂದಿದ್ದಾಳೆ. ಆದರೆ, ಅದು ವಿಶೇಷ ಪ್ರಕರಣಗಳಲ್ಲಿ ಮಾತ್ರ, ಎಲ್ಲ ಕೇಸ್‌ಗಳಿಗೆ ಇದು ಅನ್ವಯವಾಗುವುದಿಲ್ಲ. ಮಹಿಳೆಯು ಯಾವುದೇ ಗಂಭೀರ ಸಮಸ್ಯೆ ಹೊಂದಿಲ್ಲ. ಆದಾಗ್ಯೂ ಮೂರನೇ ಮಗು ಬೇಡ ಎಂಬ ಕಾರಣಕ್ಕಾಗಿ, ಜನಿಸಬೇಕಿರುವ ಮಗುವನ್ನು ಕಾನೂನಿನಡಿ ಹತ್ಯೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿತು.

ಗರ್ಭಪಾತಕ್ಕೆ ನಿರಾಕರಿಸಿದ್ದೇಕೆ?: 26 ವಾರಗಳಿಗಿಂತ ಹೆಚ್ಚು ಕಾಲ ಗರ್ಭಿಣಿಯಾಗಿರುವ ವಿವಾಹಿತ ಮಹಿಳೆಯ ಭ್ರೂಣದಲ್ಲಿ ಯಾವುದೇ ಅಸಹಜತೆ ಇದೆಯೇ ಎಂದು ಪರೀಕ್ಷಿಸಲು ಏಮ್ಸ್ ವೈದ್ಯಕೀಯ ಮಂಡಳಿಗೆ ಕೋರ್ಟ್ ಈ ಹಿಂದಿನ ವಿಚಾರಣೆಯಲ್ಲಿ ಸೂಚಿಸಿತ್ತು. ಮಹಿಳೆಯು ಖಿನ್ನತೆ ಮತ್ತು ಪ್ರಸವಾನಂತರದ ಮನೋರೋಗದಿಂದ ಬಳಲುತ್ತಿರುವ ಬಗ್ಗೆಯೂ ಪರೀಕ್ಷೆ ನಡೆಸಿ ವರದಿ ನೀಡಲು ಹೇಳಿತ್ತು.

ಅರಮನೆ ಅಂಗಳದಲ್ಲಿ ಮೂಡಿದ ರಂಗೋಲಿ ಚಿತ್ತಾರ

● 100 ಮಂದಿ ಹೆಂಗಳೆಯರಿಂದ ಚಿತ್ತಾಕರ್ಷಕ ರಂಗೋಲಿ ● ಗ್ಯಾರಂಟಿ ಯೋಜನೆಗಳನ್ನು ಬಿಂಬಿಸಿದ ಮಹಿಳೆಯರು







ಮೈಸೂರು,ಅ.16.(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಅರಮನೆಯಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಮಹಿಳಾ ದಸರಾ ಉಪಸಮಿತಿ ವತಿಯಿಂದ ಸೋಮವಾರ ಅರಮನೆ ಪ್ರಾಂಗಣದಲ್ಲಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ನೂರಕ್ಕೂ ಹೆಚ್ಚು ಮಹಿಳೆಯರು ಬಗೆಬಗೆಯ ಚಿತ್ತಾಕರ್ಷಕ ರಂಗೋಲಿ ಬಿಡಿಸಿ, ಗಮನ ಸೆಳೆದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಹಿಳಾ ದಸರಾ ಉಪಸಮಿತಿ ವತಿಯಿಂದ ಅರಮನೆ ಮುಂಭಾಗ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ದಾವಣಗೆರೆ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ಮಹಿಳೆಯರು ವಿವಿಧ ಅಳತೆ ಹಾಗೂ ವಿವಿಧ ವಿನ್ಯಾಸದ ರಂಗೋಲಿ ಬಿಡಿಸಿ, ದಸರಾ ಮಹೋತ್ಸವಕ್ಕೆ ಮೆರಗು ತುಂಬಿದರು.

ಶಾಸಕ ಟಿ.ಎಸ್.ಶ್ರೀವತ್ಸ ರಂಗೋಲಿ ಸ್ಪರ್ಧೆಗೆ ಚಾಲನೆ ನೀಡಿ, ಶುಭ ಕೋರಿದರು. ಬಳಿಕ ವಿವಿಧ ಬಣ್ಣ ಬಳಸಿ ರಂಗೋಲಿ ಬಿಡಿಸಿದ ಮಹಿಳೆಯರು ತಮ್ಮ ಕೈಚಳಕ ಪ್ರದರ್ಶಿಸಿದರು. ಅದರಲ್ಲೂ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ ಅನ್ನಭಾಗ್ಯ, ಶಕ್ತಿ ಯೋಜನೆ, ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆಗಳನ್ನು ಬಿಂಬಿಸುವ ರಂಗೋಲಿಯನ್ನು ಬಿಡಿಸುವ ಮೂಲಕ ಜನಪರ ಕಾರ್ಯಕ್ರಮದ ಪ್ರಚಾರಕ್ಕೆ ರಂಗೋಲಿಯ ರೂಪ ನೀಡಿ ಗಮನ ಸೆಳೆದರು.

ಅಲ್ಲದೆ, ರಂಗೋಲಿಯಲ್ಲಿ ನಾಡದೇವಿ ಚಾಮುಂಡೇಶ್ವರಿ, ಆನೆ, ನವಿಲು, ಮಹಿಳೆ, ರೈತ, ಹಸು ಚಿತ್ರಗಳು ಮೂಡಿ ಬಂದದ್ದು ವಿಶೇಷ ಎನಿಸಿತು.

ವಿಜೇತರು: ಅತ್ಯುತ್ತಮವಾಗಿ ರಂಗೋಲಿ ಬಿಡಿಸಿದ ಐವರು ಬಹುಮಾನಕ್ಕೆ ಆಯ್ಕೆಯಾದರು. ಪ್ರಥಮ ಬಹುಮಾನ ಕುಂಬಾರಗೇರಿಯ ಹೇಮಲತಾ, ಯಾದವಗಿರಿಯ ಜಯಲಕ್ಷ್ಮೀ ದ್ವಿತೀಯ, ರಾಮಾನುಜ ರಸ್ತೆ ಎಂ.ಕುಸುಮ ತೃತೀಯ ಬಹುಮಾನ ಪಡೆದರೆ, ಸಮಾಧಾನಕರ ಬಹುಮಾನ ಗಳಿಗೆ ಅಶೋಕಪುರಂನ ಬಿ.ಹರ್ಷಿತ, ಚಾಮರಾಜ ಮೊಹಲ್ಲಾದ ಅರುಣ ಮಹೇಶ್, ಕೆ.ಎನ್.ಪುರದ ಸಾವಿತ್ರಮ್ಮ ಆಯ್ಕೆಯಾದರು. ಅ.20ರಂದು ನಡೆಯುವ ಮಹಿಳಾ ದಸರಾ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಗುತ್ತದೆ. ಈ ಸಂದರ್ಭದಲ್ಲಿ ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕ ಬಸವರಾಜು, ಮಹಿಳಾ ದಸರಾ ಉಪ ಸಮಿತಿಯ ಅಧ್ಯಕ್ಷೆ ಸುಧಾ ಮಹದೇವಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಮಂಗಳವಾರ 17 ಅಕ್ಟೋಬರ್ 2023

ಸೇವೆಯ ಮೂಲಕ ದಸರಾ ಸಂಭ್ರಮಾಚರಣೆ

ಆದಿವಾಸಿಗಳ ಹಾಡಿಗಳಲ್ಲಿ ವೈದ್ಯರಿಂದ ಚಾಮುಂಡೇಶ್ವರಿ ಸ್ವಾಸ್ಥ್ಯ ಸೇವಾ ಯಾತ್ರಾ



ಮೈಸೂರು, ಅ.16–ಜನತಾ ಸೇವೆಯೇ ಜನಾರ್ಧನ ಸೇವೆ ಎಂಬ ಮಾತಿನಂತೆ, ದಸರಾ ಹಬ್ಬವನ್ನು ಈ ವೈದ್ಯರು ಆಚರಿಸಲು ಆರಂಭಿಸಿದ್ದು ಆದಿವಾಸಿಗಳ ಹಾಡಿಗಳಲ್ಲಿ. ಚಾಮುಂಡೇಶ್ವರಿ ಸ್ವಾಸ್ಥ್ಯ ಸೇವಾ ಯಾತ್ರಾ ಕಾರ್ಯಕ್ರಮ ದಡಿಯಲ್ಲಿ ನ್ಯಾಷನಲ್ ಮೆಡಿಕೋಸ್ ಸಂಸ್ಥೆ ವತಿಯಿಂದ (ಎನ್‌ಎಂಒ), ವನವಾಸಿ ಕಲ್ಯಾಣ ಆಶ್ರಮ ಮೈಸೂರು ಜಿಲ್ಲಾ ಘಟಕದ ಸಹಯೋಗದೊಂದಿಗೆ ಜಿಲ್ಲೆಯ ಹುಣಸೂರು ತಾಲೂಕಿನ ವೀರನಹೊಸಹಳ್ಳಿ ವ್ಯಾಪ್ತಿಯ 10 ಗಿರಿಜನ ಹಾಡಿಗಳಲ್ಲಿ ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜು, ಬೆಂಗಳೂರಿನ ರಾಮಯ್ಯ ವೈದ್ಯಕೀಯ ಕಾಲೇಜು ಹಾಗೂ ಆದಿತ್ಯ ಆಸ್ಪತ್ರೆ, ಮೈಸೂರು ಇವರ ಸಹಯೋಗದೊಂದಿಗೆ ಭಾನುವಾರ ಇಡೀ ದಿನ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಯಲಾಯಿತು.

ಶಿಬಿರವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಉಪನ್ಯಾಸಕ ಡಾ. ಬಾಬು ಎಆರ್, ವಿಕ್ರಂ ಸ್ಕೂಲ್ ಆಫ್ ನರ್ಸಿಂಗ್‌ನ ಅಧ್ಯಕ್ಷ ಡಾ.ಸನಾತ್, ವನವಾಸಿ ಕಲ್ಯಾಣ ಕಾರ್ಯಕ್ರಮದ ರಾಜ್ಯ ಸಂಘಟನಾ ಸಂಚಾಲಕರಾದ ಮಣಿವಣ್ಣನ್, ನ್ಯಾಷನಲ್ ಮೆಡಿಕಲ್ ಸಂಸ್ಥೆ ಮೈಸೂರು ವಿಭಾಗದ ಸಂಯೋಜಕರಾದ ಪ್ರಸನ್ನ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ನ್ಯಾಷನಲ್ ಮೆಡಿಕೋಸ್ ಸಂಸ್ಥೆ (ಎನ್‌ಎಂಒ) ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಡಾ. ಚಂದ್ರಶೇಖರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಹಿಳಾ ಸರ್ಕಾರಿ ಕಾಲೇಜಿನ ಮರು ಉದ್ಘಾಟನೆ



ಮೈಸೂರು, ಅ. 16– ಮೂಲ ಸೌಕರ್ಯವನ್ನು ಪುನರ್‌ನಿರ್ಮಿಸುವ ಸಿಎಸ್‌ಆರ್ ಕಾರ್ಯಕ್ರಮವಾಗಿ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ಹಾಗೂ ಯುವ ಅನ್ ಸ್ಟಾಪೆಬಲ್ ಸಹಯೋಗದಲ್ಲಿ ಮಂಡ್ಯ ಮಹಿಳಾ ಸರ್ಕಾರಿ ಕಾಲೇಜನ್ನು ಉದ್ಘಾಟಿಸಲಾಯಿತು.

ಈ ವೇಳೆ ಮಾಜಿ ಉಪಮುಖ್ಯಮಂತ್ರಿ ಅಶ್ವಥ್ ನಾರಾಯಣ್, ಶಾಸಕ ರವಿ ಕುಮಾರ್ ಗೌಡ, ಪ್ರೆಸಿಡೆನ್ಸಿ ಯೂನಿವರ್ಸಿಟಿ ಉಪಾಧ್ಯಕ್ಷ ಸಲ್ಮಾನ್ ಅಹ್ಮದ್ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ ನಾರಾಯಣ್ ಮಾತನಾಡಿ, ಶಿಕ್ಷಣದಲ್ಲಿ ಹೂಡಿಕೆ ಮಾಡುವುದು ಭವಿಷ್ಯದಲ್ಲಿ ಹೂಡಿಕೆ ಮಾಡಿದಂತೆ. ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನ ಮೂಲ ಸೌಕರ್ಯ ಪುನರುಜ್ಜೀವನಗೊಳಿಸುವ ನಮ್ಮ ಸಹಯೋಗದ ಪ್ರಯತ್ನ ಶಿಕ್ಷಣದಲ್ಲಿ ಆಳವಾದ ನಂಬಿಕೆಯನ್ನು ಪ್ರತಿಧ್ವನಿಸುತ್ತದೆ. ಶಿಕ್ಷಣ ಮತ್ತು ಸಮುದಾಯ ಒಗ್ಗೂಡಿದಾಗ ಅಸಾಧಾರಣ ಪರಿವರ್ತನೆಗಳು ಸಂಭವಿಸಬಹುದು ಎಂದರು. ಪ್ರೆಸಿಡೆನ್ಸಿ ವಿವಿಶ್ವವಿದ್ಯಾನಿಲಯದ ಉಪಾಧ್ಯಕ್ಷ ಸಲ್ಮಾನ್ ಅಹಮದ್ ಮಾತನಾಡಿ, ಸಿಎಸ್ ಆರ್ ಕಾರ್ಯಕ್ರಮದ ಮೂಲಕ ನಾವು ಮೂಲಸೌಕರ್ಯ ಪುನರ್ನಿರ್ಮಿಸುವ ಹೆಜ್ಜೆ ಇಟ್ಟಿದ್ದೇವೆ. ಇದು ಶೈಕ್ಷಣಿಕ ಬೆಳವಣಿಗೆ ಮತ್ತು ಕಲಿಕೆಗೆ ಪೂರಕ ವಾತಾವರಣ ಸೃಷ್ಟಿಸುತ್ತದೆ ಎಂದರು.

ದಸರಾ ಅಂಗವಾಗಿ ಮಕ್ಕಳಿಗೆ ವೇಷಭೂಷಣ ಸ್ಪರ್ಧೆ; ಯುವತಿಯರು, ಮಹಿಳೆಯರಿಗೆ ದಸರಾ ಸೀರೆ ಸ್ಪರ್ಧೆ



ಮೈಸೂರು, ಅ. 16– ಶ್ರೀ ದುರ್ಗಾ ಫೌಂಡೇಶನ್ ಹಾಗೂ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಶನ್ ವತಿಯಿಂದ ಅ.21ರ ಶನಿವಾರ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಶಾಲೆಯಲ್ಲಿ ಮಕ್ಕಳಿಗೆ ದಸರಾ ವೇಷಭೂಷಣ ಸ್ಪರ್ಧೆ, ಯುವತಿಯರು ಹಾಗೂ ಮಹಿಳೆಯರಿಗೆ ದಸರಾ ಸೀರೆ ಸ್ಪರ್ಧೆ ಆಯೋಜಿಸಲಾಗಿದ್ದು, ಅದರ ಪ್ರಚಾರದ ಪೋಸ್ಟರ್ ಅನ್ನು ಚಾಮರಾಜಪುರಂನಲ್ಲಿರುವ ಶ್ರೀ ದುರ್ಗಾ ಫೌಂಡೇಶನ್ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್.ಎಸ್.ಪವಿತ್ರ ಬಿಡುಗಡೆ ಮಾಡಿದರು.

ದಸರಾ ಹಬ್ಬದಲ್ಲಿ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ದಸರಾ ಇತಿಹಾಸ ಹಾಗೂ ನಮ್ಮ ಪರಂಪರೆಯ ವಿಚಾರಗಳು ಹೆಚ್ಚು ಪ್ರಚಲಿಸುತ್ತದೆ. ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಮಕ್ಕಳಿಗೆ ನಮ್ಮ ಭಾರತೀಯ ಸಂಸ್ಕೃತಿ, ಸಂಸ್ಕಾರ ಹಾಗೂ ಪರಂಪರೆ ಉಳಿಸಿ ಬೆಳೆಸುವ ಜಾಗೃತಿ ಮೂಡುತ್ತದೆ ಎಂದು ಹೇಳಿದರು. ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹೇಮನಂದೀಶ್ ಮಾತನಾಡಿ, ಭಾರತದಲ್ಲಿ ಸೀರೆಗೆ ತನ್ನದೇ ಆದ ಮಹತ್ವ ಇದೆ. ಸೀರೆ ಹಿಂದು ಸಂಸ್ಕೃತಿಯ ಪ್ರತೀಕ. ಇಂತಹ ಸಂಸ್ಥೆಗಳು ಸೀರೆ ಉಡುವ ನಾರಿಗೆ ಸ್ಪರ್ಧೆ ಆಯೋಜಿಸುವ ಮೂಲಕ ಸೀರೆಯ ಮಹತ್ವ ತಿಳಿಸುತ್ತಿರುವುದು ಸಂತಸದ ಸಂಗತಿ ಎಂದರು.

ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್ ಮಕ್ಕಳಿಗಾಗಿ ದಸರಾಗೆ ಸಂಬಂಧಪಟ್ಟ ವೇಷಭೂಷಣ ಸ್ಪರ್ಧೆಯಲ್ಲಿ 1 ರಿಂದ 12 ವರ್ಷದ ಮೂರು ವಿಭಾಗದ ಇರುತ್ತದೆ. ನೋಂದಣಿ ಶುಲ್ಕ 250 ಇರುತ್ತದೆ. ಸ್ಪರ್ಧಿಸಿದ ಎಲ್ಲಾ ಮಕ್ಕಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುವುದು.

ಆನಂತರ 16 ವರ್ಷದಿಂದ 60 ವರ್ಷದವರ 4 ವಿಭಾಗದ ಯುವತಿಯರು ಹಾಗೂ ಮಹಿಳೆಯರಿಗೆ ಸೀರೆ ಸ್ಪರ್ಧೆ ಆಯೋಜಿಸಲಾಗಿದ್ದು, ಅದರ ನೋಂದಣಿ ಶುಲ್ಕ 499 ರೂ ಇರುತ್ತದೆ. 5 ವಿಜೇತರಿಗೆ ಬೆಳ್ಳಿ ನಾಣ್ಯ ಬಹುಮಾನವಿರುತ್ತದೆ ಎಂದು ತಿಳಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸುವವರು ಹಾಗೂ ಮಾಹಿತಿ ಪಡೆಯುವವರು 8971389539 / 88846 89700 ಸಂಪರ್ಕಿಸಬಹುದು. ಇದೇ ಸಂದರ್ಭದಲ್ಲಿ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಶನ್ ಅಧ್ಯಕ್ಷರಾದ ರಂಜಿತಾ ಸುಬ್ರಹ್ಮಣ್ಯ,ಸಮತ್ವ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರಾದ ವನಮಾಲ, ಪದ್ಮ, ವೀಣಾ, ನಂದಿನಿ ಎಂ ಜೆ, ಸ್ಫೂರ್ತಿ ಕೆ ಯಾದವ್, ಪೂಜಾ ಇನ್ನಿತರರು ಭಾಗವಹಿಸಿದ್ದರು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಅ. 16– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಅ. 19 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಸತತ ಪರಿಶ್ರಮ, ಸಾಮಾಜಿಕ ಬದ್ಧತೆ ಇದ್ದರೆ ಮೇಲೆ ಬರಬಹುದು; ನಾನೇ ಸಾಕ್ಷಿ

ಯುವರಾಜ ಕಾಲೇಜು ಹಳೇ ವಿದ್ಯಾರ್ಥಿಯೂ ಆದ ಸಿಎಂ ಸಿದ್ದರಾಮಯ್ಯರಿಗೆ ಸನ್ಮಾನ, ಕಾಲೇಜು ನವೀಕರಣಕ್ಕಾಗಿ 25 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ



ಮೈಸೂರು, ಅ. 16 (ಆರ್‌ಕೆ)– ಶತಮಾನೋತ್ಸವದತ್ತ ದಾಪುಗಾಲಿಡುತ್ತಿರುವ ಮೈಸೂರಿನ ಪ್ರತಿಷ್ಠಿತ ಯುವರಾಜ ಕಾಲೇಜಿನ ಹಳೇ ವಿದ್ಯಾರ್ಥಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಂದು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಯುವರಾಜ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಏರ್ಪಡಿಸಿದ್ದ 20ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯ ಅವರನ್ನು ಇಂದು ಸಂಘದ ವತಿಯಿಂದ ಅಭಿನಂದಿಸಲಾಯಿತು. 2028ನೇ ಸಾಲಿನಲ್ಲಿ ಶತಮಾನೋತ್ಸವ ಆಚರಿಸಿಕೊಳ್ಳಲಿರುವ ಯುವರಾಜ ಕಾಲೇಜಿಗೆ ಮೂಲ ಸೌಲಭ್ಯ ಒದಗಿಸಿ, ನವೀಕರಣಗೊಳಿಸಲು ಮುಂದಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಆಡಳಿತ ಮಂಡಳಿಯು 25 ಕೋಟಿ ರೂ. ಅನುದಾನ ಕೋರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ಹಳೇ ಪಾರಂಪರಿಕ ಕಟ್ಟಡದ ರೀ ಪ್ಲಾನಿಂಗ್, ರಿವೈರಿಂಗ್, ಪ್ಲಂಬಿಂಗ್ ಮಾಡಲು 10 ಕೋಟಿ ರೂ., ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣ, ಇರುವ ಕೊಠಡಿ ನವೀಕರಣಕ್ಕೆ 10 ಕೋಟಿ ರೂ. ಹಾಗೂ ಸೆಂಟ್ರಲ್ ಇನ್ಸ್ಟ್ರುಮೆಂಟೇಷನ್ ಸೌಲಭ್ಯದೊಂದಿಗೆ ಸಂಶೋಧನಾ ಘಟಕ ಸ್ಥಾಪನೆಗೆ 5 ಕೋಟಿ ರೂ. ಅಂದಾಜು ವೆಚ್ಚವಾಗಲಿದ್ದು, ಒಟ್ಟಾರೆ 25 ಕೋಟಿ ರೂ. ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಸಿದ್ದರಾಮಯ್ಯ ಅವರು, 1965 ರಿಂದ 68 ರವರೆಗೆ ಬಿ.ಎಸ್ಸಿಯಲ್ಲಿ ಬಾಟ್ನಿ, ಜೂವಾಲಜಿ ಹಾಗೂ ಕೆಮಿಸ್ಟ್ರಿ ವಿಷಯದಲ್ಲಿ ವ್ಯಾಸಂಗ ಮಾಡಿ ನಂತರ ಕಾನೂನು ಪದವಿ ಪಡೆದು ವಕೀಲನಾಗಿ ಕೆಲಸ ಮಾಡಿದೆ. ಬಳಿಕ ರಾಜಕೀಯ ಜೀವನ ಆರಂಭಿಸಿ, ಈಗ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಆಡಳಿತ ನಡೆಸುತ್ತಿದ್ದೇನೆ ಎಂದು ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು.

ನಾನು ಮುಖ್ಯಮಂತ್ರಿ ಆಗುವ ಕನಸು ಕಂಡಿರಲಿಲ್ಲ. ಸತತ ಪರಿಶ್ರಮ, ಸಾಮಾಜಿಕ ಬದ್ಧತೆ, ನಿರಂತರ ಪ್ರಯತ್ನವಿದ್ದರೆ ಸಾಧನೆಯ ತುತ್ತ ತುದಿಗೇರಬಹುದೆಂಬುದಕ್ಕೆ ನಾನು ಮುಖ್ಯಮಂತ್ರಿಯಾಗಿರುವುದೇ ನಿದರ್ಶನ ಎಂದ ಅವರು, ತಮ್ಮೊಂದಿಗೆ ಕಾಲೇಜಿನಲ್ಲಿ ಓದಿದ ಕೆಲವರನ್ನು ಇದೇ ಸಂದರ್ಭ ಸ್ಮರಿಸಿದರು.

ಹಣೆಬರಹ ತೋರಿಸಿ: ಈ ಮಧ್ಯೆ ಸಭೆಯಲ್ಲಿದ್ದವರ ಪೈಕಿ ಓರ್ವ ಹಣೆ ಬರಹ ಎಂದಾಗ ತಕ್ಷಣ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಯಾವುದು ಹಣೆಬರಹ, ಎಲ್ಲಿ ಬರೆದಿದೆ ತೋರಿಸಿ. ವಿಜ್ಞಾನದ ವಿದ್ಯಾರ್ಥಿಗಳಾಗಿ ನೀವು ಈ ರೀತಿ ಹೇಳಬಾರದು. ಮೂಢನಂಬಿಕೆ, ಜಾತಿ ಭೇದ, ಮತ ಇವುಗಳನ್ನು ನಾವು ಬಿಡಬೇಕು ಎಂದು ನುಡಿದರು.

ಸಾಮಾಜಿಕ ನ್ಯಾಯ, ಸಮಾನತೆ, ಸಹಬಾಳ್ವೆ, ಮಾನವೀಯತೆ, ಬಡವರ ಬಗ್ಗೆ ಅನುಕಂಪಗಳಿದ್ದರೆ ಮಾತ್ರ ಒಬ್ಬ ವ್ಯಕ್ತಿ ಪರಿಪೂರ್ಣನಾಗಲು ಸಾಧ್ಯ. ಪ್ರತಿಯೊಬ್ಬರೂ ಒಳ್ಳೆಯ ಮನಸ್ಸು, ಗುಣ ಉಳ್ಳವರಾದರೆ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದ ಅವರು, ನಾನು ಓದಿದ ಶಾಲಾ, ಕಾಲೇಜು, ವಿದ್ಯೆ ಕಲಿಸಿದ ಗುರುಗಳು, ಬೆಳೆಸಿ ಜೀವನ ಕೊಟ್ಟ ತಂದೆ ತಾಯಿ, ಸಲಹೆ, ಮಾರ್ಗದರ್ಶನ ನೀಡಿದ ಗೆಳೆಯರು, ಹಿತೈಷಿಗಳನ್ನು ನೆನೆಯಬೇಕು ಎಂದು ಇದೇ ಸಂದರ್ಭ ನುಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕುಲಸಚಿವರಾದ ಪಿ.ಆರ್. ಶೈಲಜಾ, ಯುವರಾಜ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ. ಹೆಚ್.ಸಿ.ದೇವರಾಜೇಗೌಡ, ಕಾರ್ಯದರ್ಶಿ ಪ್ರೊ. ಸಿ.ಸುಮಂಗಲ, ಕೋಶಾಧ್ಯಕ್ಷ ಪ್ರೊ. ಆರ್.ಶೇಖರ್ ನಾಯಕ, ಉಪಾಧ್ಯಕ್ಷ ಎ.ಜಿ. ದೇವರಾಜು, ಜಂಟಿ ಕಾರ್ಯದರ್ಶಿ ಪ್ರೊ. ಕೆ.ಎ.ಶರ್ವಾಣಿ, ಕಾಲೇಜು ಅಧೀಕ್ಷಕ ಎಸ್. ಮಹದೇವಪ್ಪ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾನು ಯಾವ ಜಾತಿ ವಿರೋಧಿಯಲ್ಲ, ನ್ಯಾಯದ ಪರ

ಮೈಸೂರು, ಅ. 16(ಆರ್‌ಕೆ)– ಜಾತಿ ವಿರೋಧಿ ಎಂಬ ಆರೋಪ ನನ್ನ ಮೇಲಿದೆ. ಆದರೆ ನಾನು ಯಾವ ಜಾತಿ ವಿರೋಧಿಯಲ್ಲ. ಸಾಮಾಜಿಕ ನ್ಯಾಯದ ಪರವಾಗಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಯುವರಾಜ ಕಾಲೇಜಿನಲ್ಲಿ ಆಯೋಜಿಸಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಕುವೆಂಪು ಹೇಳಿರುವಂತೆ ಹುಟ್ಟುವಾಗ ಎಲ್ಲರೂ ವಿಶ್ವಮಾನವರಾಗಿದ್ದು, ಬೆಳೆದಂತೆ ಅಲ್ಪ ಮಾನವರಾಗುತ್ತೇವೆ. ನಾವೆಲ್ಲರೂ ವಿಶ್ವಮಾನವರಾಗುವುದು ಶಿಕ್ಷಣದ ಗುರಿಯಾಗಬೇಕು. ಅವಕಾಶ ವಂಚಿತರಿಗೆ ಸಮಾನ ಅವಕಾಶ ಕಲ್ಪಿಸುವುದು ಶಿಕ್ಷಣದ ಮುಖ್ಯ ಧ್ಯೇಯವಾಗಬೇಕು ಎಂದರು.

ನಾವೂ ಅನಕ್ಷರಸ್ಥರಂತೆ ನಡೆದುಕೊಳ್ಳುವುದಾದರೆ, ಶಿಕ್ಷಣದ ಅಗತ್ಯವೇ ಇಲ್ಲ. ಜಾತಿಯಿಂದಲೇ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ. ವೈಚಾರಿಕ, ವೈಜ್ಞಾನಿಕ ಚಿಂತನೆಗೆ, ಜ್ಞಾನ ವಿಕಾಸಕ್ಕೆ ಸಮಾಜದ ಅಂಕು–ಡೊಂಕುಗಳನ್ನು ತಿದ್ದಲು ಶಿಕ್ಷಣ ಬೇಕು. ಶಿಕ್ಷಿತರು ಸಮಾಜದಲ್ಲಿ ಬದಲಾವಣೆ ತರಲು

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

ಸಾಧ್ಯ. ಸಾಮಾಜಿಕ ಸಬಲತೆ ಸಾಕಾರ ಮಾಡಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶತಮಾನ ತುಂಬಿದೆ. ಶಿಕ್ಷಣ, ಕೈಗಾರಿಕೆ, ಕಲೆ, ಸಾಹಿತ್ಯ, ಸಂಗೀತ, ಆರೋಗ್ಯ ಕ್ಷೇತ್ರಗಳ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರವಾದುದು. ಸರ್ ಮಿರ್ಜಾ ಇಸ್ಮಾಯಿಲ್, ಸರ್ ಎಂ. ವಿಶ್ವೇಶ್ವರಯ್ಯ ಅವರು ಪ್ರಗತಿಪರ ಕೆಲಸ ಮಾಡಿದರು. ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸದಿದ್ದರೆ ಕಾವೇರಿ ನೀರು ನಮಗೆ ದೊರೆಯುತ್ತಿರಲಿಲ್ಲ ಎಂದು ಮುಖ್ಯಮಂತ್ರಿಗಳು ನುಡಿದರು.

ಯುವರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ ನಾನು ಮುಖ್ಯಮಂತ್ರಿಯಾಗುತ್ತೇನೆಂಬ ಕಲ್ಪನೆ ಇರಲಿಲ್ಲ. ವೈದ್ಯನಾಗಬೇಕೆಂಬುದು ನನ್ನ ತಂದೆಯವರ ಆಸೆಯಾಗಿತ್ತು. ಲಾ ಮಾಡಿ ನಂತರ ರಾಜಕೀಯಕ್ಕೆ ಬಂದು ಮುಖ್ಯಮಂತ್ರಿಯಾದೆ ಎಂದು ಸಿದ್ದರಾಮಯ್ಯ ಇದೇ ಸಂದರ್ಭ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು.

ಬೆಂಗಳೂರಿನ ಐಟಿ ದಾಳಿಯಲ್ಲಿ ಸಿಕ್ಕ ಹಣ ಎಸ್‌ಎಸ್‌ಟಿ, ವೈಎಸ್‌ಟಿ ಕಲೆಕ್ಷನ್‌ಗೆ ಸೇರಿದೆ

● ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸ್ಫೋಟಕ ಹೇಳಿಕೆ ● ಜಿಎಸ್‌ಟಿಯಂತೆ ಎಸ್‌ಎಸ್‌ಟಿ, ವೈಎಸ್‌ಟಿ ಕೂಡ ಒಂದು ● ಇದು ಲೂಟಿ ಮಾಡಿ ಸಂಗ್ರಹಿಸುವ ಟ್ಯಾಕ್ಸ್ ಕಲೆಕ್ಷನ್ ● ಈಗ 100 ಕೋಟಿ ಹಣ ಪತ್ತೆಯಾಗಿರುವುದು ಸ್ಯಾಂಪಲ್ ಅಷ್ಟೆ ● ಸತ್ಯ ಹರಿಶ್ಚಂದ್ರ ಸಿದ್ದರಾಮಯ್ಯ ತನಿಖೆ ಮಾಡಿಸಲಿ



ಮೈಸೂರು, ಅ.16(ಬಿಎಲ್‌ಯು)– ಬೆಂಗಳೂರಿನಲ್ಲಿ ಆದಾಯ ತೆರಿಗೆ ಇಲಾಖೆಯವರು ದಾಳಿ ನಡೆಸಿದ ವೇಳೆ ಮೊದಲ ದಿನ ದೊರೆತ ಹಣ ಎಸ್‌ಎಸ್‌ಟಿ ಕಲೆಕ್ಷನ್, ಎರಡನೆ ದಿನ ಸಿಕ್ಕ ಹಣ ವೈಎಸ್‌ಟಿ ಕಲೆಕ್ಷನ್ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ದೇಶದಲ್ಲಿ ಕಾನೂನು ಪ್ರಕಾರ ಸಂಗ್ರಹಿಸುವ ಜಿಎಸ್‌ಟಿ ಕಲೆಕ್ಷನ್ ಇದೆ. ಇದು ಎಲ್ಲರಿಗೂ ತಿಳಿದಿರುವ ಟ್ಯಾಕ್ಸ್. ಆದರೆ ಐಟಿ ದಾಳಿ ವೇಳೆ ಸಿಕ್ಕಿರುವ ಹಣ ಖಾಸಗಿಯಾಗಿ ಸಂಗ್ರಹ ಮಾಡುತ್ತಿರುವ ಎರಡು ರೀತಿಯ ಟ್ಯಾಕ್ಸ್ ಹಣವಾಗಿದೆ. ಇದೇ ಎಸ್‌ಎಸ್‌ಟಿ ಹಾಗೂ ವೈಎಸ್‌ಟಿ ಕಲೆಕ್ಷನ್ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಆದರೆ ಎಸ್‌ಎಸ್‌ಟಿ ಹಾಗೂ ವೈಎಸ್‌ಟಿ ಕಲೆಕ್ಷನ್ ವಿವರವನ್ನು ಕುಮಾರಸ್ವಾಮಿ ಬಾಯ್ಬಿಡಲಿಲ್ಲ.

ಆದಾಯ ತೆರಿಗೆ ಇಲಾಖೆಯವರ ದಾಳಿ ವೇಳೆ ಗುತ್ತಿಗೆದಾರರಾದ ಕಾಂತರಾಜು ಹಾಗೂ ಸಂತೋಷ್ ಸಿಕ್ಕಿ ಬಿದ್ದಿದ್ದಾರೆ. ಇವರೇನು ದೊಡ್ಡ ಗುತ್ತಿಗೆದಾರರಲ್ಲ. ಆದರೆ ಇವರ ಹಿಂದಿರುವವರು ಪ್ರಭಾವಿಗಳು. ವಾಸ್ತವವಾಗಿ ಈ ಹಣ ಗುತ್ತಿಗೆದಾರರಿಗೆ ಸೇರಿಲ್ಲ. ಬದಲಿಗೆ ಅದು ರಾಜ್ಯದ ಜನರ ತೆರಿಗೆ ಹಣ. ಸರ್ಕಾರದಲ್ಲಿ ಲೂಟಿ ಮಾಡಿರುವ ಹಣ ಈಗ ಪತ್ತೆಯಾಗಿದೆ ಎಂದು ಆರೋಪಿಸಿದರು.

ಮೊದಲ ದಿನ ಸಿಕ್ಕಿರುವ ಹಣ ಎಸ್‌ಎಸ್‌ಟಿ ಕಲೆಕ್ಷನ್‌ನಿಂದ ಬಂದಿರುವ ಹಣವಾಗಿದೆ. ಇನ್ನು ಎರಡನೇ ದಿನ ಸಿಕ್ಕಿರುವ ಹಣ ಸರ್ಕಾರದ ಅಧಿಕಾರಿಗಳ ವರ್ಗಾವಣೆಯಿಂದ ಸಂಗ್ರಹಿಸಿರುವ ವೈಎಸ್‌ಟಿ ಕಲೆಕ್ಷನ್ ಹಣವಾಗಿದೆ. ಈಗ ದೊರೆತಿರುವ 100 ಕೋಟಿ ಹಣ ಸ್ಯಾಂಪಲ್ ಅಷ್ಟೆ. ಇದರ ಆಳ, ಉದ್ದ ಕೆದಕುತ್ತಾ ಹೋದರೆ ಮತ್ತಷ್ಟು ಸಂಗತಿಗಳು ಬಯಲಾಗುತ್ತವೆ ಎಂದು ಕುಮಾರಸ್ವಾಮಿ ತಿಳಿಸಿದರು.

ಸರ್ಕಾರ ಅಸ್ತಿತ್ವಕ್ಕೆ ಬಂದ ಕೇವಲ ಎರಡು ತಿಂಗಳ ಅವಧಿಯಲ್ಲಿ ಸರ್ಕಾರದ ಅಧಿಕಾರಿಗಳ ವರ್ಗಾವಣೆಯಲ್ಲಿ ಸಾವಿರ ಕೋಟಿ ರೂಪಾಯಿ ಸಂಗ್ರಹವಾಗಿದೆ ಎಂದು ಈ ಮೊದಲೇ ಹೇಳಿದ್ದೆ. ಈಗ ಮತ್ತೊಂದು ರೀತಿಯ ಖಾಸಗಿ ಟ್ಯಾಕ್ಸ್ ಮೂಲಕ ಹಣ ಸಂಗ್ರಹವಾಗಿದ್ದು, ಇದು ಬೆಂಗಳೂರಿನ ಐಟಿ ದಾಳಿ ವೇಳೆ ಸಿಕ್ಕಿರುವ ಹಣವಾಗಿದೆ. ಒಂದೊಂದು ಕೆಲಸಕ್ಕೂ ಇಷ್ಟಿಷ್ಟು ಅಂತ ರೇಟ್ ಫಿಕ್ಸ್ ಮಾಡಿ ಖಾಸಗಿಯಾಗಿ ಟ್ಯಾಕ್ಸ್ ಸಂಗ್ರಹಿಸಿ ಲೂಟಿ ಮಾಡುತ್ತಿದ್ದಾರೆ ಎಂದು ದೂರಿದರು.

ಎಲ್ಲಾ ವಿಚಾರಕ್ಕೂ ತನಿಖೆ ಮಾಡಿಸುವುದಾಗಿ ಸಿದ್ದರಾಮಯ್ಯ ಹೇಳುತ್ತಾರೆ. ಹಾಗಾದರೆ ಈ ಬಗ್ಗೆ ಕೂಡ ತನಿಖೆ ಮಾಡಿಸಲಿ ಎಂದು ಆಗ್ರಹಿಸಿದ ಕುಮಾರಸ್ವಾಮಿ, ನಾನು ಸತ್ಯ ಹರಿಶ್ಚಂದ್ರ, ಸಿದ್ಧ ಪುರುಷ ಎಂದೇಳುವ ಸಿದ್ದರಾಮಯ್ಯ ಐಟಿ ದಾಳಿ ಬಗ್ಗೆ ತನಿಖೆ ಮಾಡಿಸಲಿ. ಈ ಮೂಲಕ ಐಟಿ ದಾಳಿಯಲ್ಲಿ ಸಿಕ್ಕ ಹಣದ ಮೂಲದ ಬಗ್ಗೆ ಜನರಿಗೆ ಲೆಕ್ಕ ಕೊಡಲಿ ಎಂದು ಸವಾಲು ಹಾಕಿದರು.

ಯಾವುದೇ ರೀತಿಯ ಅಸೂಯೆ, ದ್ವೇಷದಿಂದ ಈ ರೀತಿಯ ಆರೋಪ ಮಾಡುತ್ತಿಲ್ಲ. ಹಿಟ್ ಅಂಡ್ ರನ್ ಹೇಳಿಕೆ ನೀಡದೆ ಇವರ ಪಾಪದ ಕೆಲಸವನ್ನು ನಾನು ಹೇಳುತ್ತಿದ್ದೇನೆ ಅಷ್ಟೆ. ರಾಜ್ಯದ ಜನರು ಇವರಿಗೆ ಅಭಿವೃದ್ಧಿ ಮಾಡಲು ಅಧಿಕಾರ ಕೊಟ್ಟಿದ್ದಾರೆಯೇ ಹೊರತು ಲೂಟಿ ಮಾಡಲು ಅಲ್ಲ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಪಂಚರಾಜ್ಯ ಚುನಾವಣೆಗೆ ಕಾಂಗ್ರೆಸ್ ಹೈಕಮಾಂಡ್ ಹಣ ಕೇಳಿಲ್ಲ ಅಂತ ಸಿದ್ದರಾಮಯ್ಯ ಹೇಳುತ್ತಾರೆ. ಹೈಕಮಾಂಡ್ ಕೇಳದೆ ಇಷ್ಟೊಂದು ಹಣ ಸಂಗ್ರಹ ಮಾಡಿದ್ದಾರೆ. ಇನ್ನು ಹಣ ಕೇಳಿದ್ದರೆ ಇನ್ನೆಷ್ಟು ಕಲೆಕ್ಷನ್ ಮಾಡುತ್ತಿದ್ದರು ಎಂದು ಪ್ರಶ್ನಿಸಿದರು.

ಒಟ್ಟಾರೆ ಕರ್ನಾಟಕದಲ್ಲಿ ಈಗ ಜಿಎಸ್‌ಟಿ ಕಲೆಕ್ಷನ್‌ಗಿಂತ ಎಸ್‌ಎಸ್‌ಟಿ ಹಾಗೂ ವೈಎಸ್‌ಟಿ ಕಲೆಕ್ಷನ್ ಜೋರಾಗಿದೆ. ಜನರ ತೆರಿಗೆ ಹಣ ಇವರ ಕಿಸೆ ಸೇರುತ್ತಿದೆ. ಈ ಮೂಲಕ ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ಸರ್ಕಾರ ಇದಾಗಿದೆ. ರಾಜ್ಯದ ಜನರು ಭಾರಿ ನಿರೀಕ್ಷೆಯಿಂದ ಇವರನ್ನು ಗೆಲ್ಲಿಸಿದರು. ಆದರೆ ಇವರ ಭ್ರಷ್ಟಾಚಾರ ನೋಡಿ ಜನರೇ ತಿರುಗಿ ಬೀಳುವ ಕಾಲ ದೂರವಿಲ್ಲ ಎಂದು ಕುಮಾರಸ್ವಾಮಿ ಎಚ್ಚರಿಸಿದರು.

ಮಾಡಬಾರದ ಕೆಲಸ ಮಾಡಿ, ಜನರಲ್ಲಿ ಕಣ್ಣೀರು, ರಕ್ತ ಸುರಿಸಿ ಈಗ ದೇವರೇ ರಕ್ಷಿಸು ಎಂದು ದೇವರನ್ನು ಬೇಡುತ್ತಾರೆ. ತಾಯಿ ಚಾಮುಂಡೇಶ್ವರಿಯೇ ಇವರನ್ನು ನೋಡಿಕೊಳ್ಳುತ್ತಾಳೆ ಎಂದರು.

ಜಾತಿ ಗಣತಿ ವರದಿ ನಾನು ಬಿಡುಗಡೆ ಮಾಡಲಿಲ್ಲ ಅಂತ ನನ್ನ ವಿರುದ್ಧ ಬೊಟ್ಟು ಮಾಡಿ ತೋರಿಸುತ್ತಾರೆ. ಸರ್ಕಾರದ ಸಮನ್ವಯ ಸಮಿತಿಯ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯ ಒಂದು ದಿನವಾದರೂ ಈ ಬಗ್ಗೆ ನನ್ನ ಬಳಿ ಚರ್ಚೆ ಮಾಡಿದ್ದರಾ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಜಾತಿ ಗಣತಿ ಮಾಡಿರುವ ಕಾಂತರಾಜು ಆಯೋಗ ಒಂದು ಮನೆಗಾದರೂ ಭೇಟಿ ನೀಡಿ ಅವರ ಬಗ್ಗೆ ಮಾಹಿತಿ ಪಡೆದಿತ್ತೆ ಎಂದು ಮರು ಪ್ರಶ್ನಿಸಿದರು.

ವ್ಯಾಪಕ ಭ್ರಷ್ಟಾಚಾರ : ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಬಿಲ್ ಪಾವತಿಗೆ ಅಧಿಕಾರಿಗಳು ಕಮಿಷನ್ ಕೇಳುತ್ತಿದ್ದಾರೆ ಎಂದು ಆರೋಪಿಸಿದರು. ಈ ಸರ್ಕಾರದಲ್ಲಿ ಇನ್ನೂ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದಕ್ಕೆ ಅವರ ಆರೋಪ ಕೂಡ ಒಂದು ಸ್ಪಷ್ಟ ನಿದರ್ಶನವಲ್ಲವೆ ಎಂದರು.

ಇವರ ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಹೊಸದಾಗಿ ಗೆಲುವು ಸಾಧಿಸಿರುವ ಶಾಸಕರು ಕ್ಷೇತ್ರದ ಕಡೆ ತಲೆ ಹಾಕದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ನಮ್ಮ ಹಳೆ ಸ್ನೇಹಿತರೊಬ್ಬರು ನನ್ನ ಬಗ್ಗೆ ದುರಹಂಕಾರದ ಮಾತುಗಳಾಡಿದ್ದಾರೆ. ನಾಗಮಂಗಲದ ಬಸ್ ಕಂಡಕ್ಟರ್ ವಿಷ ಕುಡಿದ ಪ್ರಕರಣದಲ್ಲಿ ಯಾರನ್ನು ಹೇಗೆ ಅಡ್ಜೆಸ್ಟ್ ಮಾಡಿಕೊಂಡರು ಎಂಬುದು ನನಗೆ ಗೊತ್ತಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ವಿರುದ್ಧ ಪರೋಕ್ಷ ಟೀಕಾಪ್ರಹಾರ ನಡೆಸಿದ ಕುಮಾರಸ್ವಾಮಿ, ಕೃಷಿ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ರಾಜ್ಯಪಾಲರಿಗೆ ಪತ್ರ ಬರೆದಿದ್ದ ಪ್ರಕರಣದಲ್ಲಿ ಬಂಧಿತರಾಗಿದ್ದ ಕೃಷಿ ಇಲಾಖೆ ಅಧಿಕಾರಿಗಳ ತನಿಖೆ ಏನಾಯಿತು ಎಂದು ಈ ಸತ್ಯ ಹರಿಶ್ಚಂದ್ರರು ಹೇಳಲಿ ಎಂದು ಒತ್ತಾಯಿಸಿದರು.

ಲಂಚ ಕೊಟ್ಟು ಬಂದವನು ಲಂಚ ಕೇಳಿದ್ದಾನೆ

ವಿಶ್ವ ವಿಖ್ಯಾತ ಮೈಸೂರು ದಸರಾ ವೇಳೆ ಅರಮನೆ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಪಂಡಿತ್ ರಾಜೀವ್ ತಾರಾನಾಥ್ ಬಳಿ ಲಂಚ ಕೇಳಿದ್ದ ಅಧಿಕಾರಿ ಕೂಡ ಲಂಚ ಕೊಟ್ಟೇ ಆ ಸ್ಥಾನಕ್ಕೆ ಬಂದಿದ್ದಾನೆ ಎಂದು ಕುಮಾರಸ್ವಾಮಿ ತಿಳಿಸಿದರು.

ಪಂಡಿತ್ ರಾಜೀವ್ ತಾರಾನಾಥ್ ಬಳಿ ಆ ಅಧಿಕಾರಿ 3 ಲಕ್ಷ ರೂಪಾಯಿ ಲಂಚ ಕೇಳಿದ್ದಾನೆ. ಸರ್ಕಾರದಲ್ಲಿ ಭ್ರಷ್ಟಾಚಾರ ಯಾವ ಹಂತ ತಲುಪಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ ಎಂದು ಪ್ರಶ್ನಿಸಿದರು. ಆ ಅಧಿಕಾರಿ ಕೂಡ ಭಾರಿ ಮೊತ್ತದ ಲಂಚ ಕೊಟ್ಟು ಸ್ಥಾನಕ್ಕೆ ಬಂದಿದ್ದಾನೆ. ಆ ಹಣ ಭರಿಸಲು ಅವನು ಲಂಚ ಕೇಳಿದ್ದಾನೆ. ಈ ಮೂಲಕ ಎಲ್ಲಾ ಇಲಾಖೆಗಳು ಭ್ರಷ್ಟಾಚಾರದಲ್ಲಿ ಮುಳುಗಿವೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಐಟಿ ದಾಳಿ ಹಣಕ್ಕೂ, ವಾಸ್ತುಶಿಲ್ಪಿಗೂ ಮೈಸೂರಿಗೂ ನಂಟು

ಬೆಂಗಳೂರಿನಲ್ಲಿ ಆದಾಯ ತೆರಿಗೆ ಇಲಾಖೆಯವರ ದಾಳಿ ವೇಳೆ ಸಿಕ್ಕಿರುವ ಕೋಟ್ಯಾಂತರ ರೂಪಾಯಿ ಹಣದ ಮೂಲದಲ್ಲಿ ವಾಸ್ತುಶಿಲ್ಪಿ ಹಾಗೂ ರಾಜಕಾರಣಿಯೊಬ್ಬರ ಹೆಸರು ತಳಕು ಹಾಕಿಕೊಂಡಿದೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಆ ವಾಸ್ತುಶಿಲ್ಪಿಗೂ, ರಾಜಕಾರಣಿಗೂ ಏನು ಸಂಬಂಧ ಎಂದು ಪ್ರಶ್ನೆ ಮಾಡಿದ ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೈಸೂರಿನ ಮನೆ ಹಾಗೂ ತೋಟದಲ್ಲಿ ನಿರ್ಮಿಸಿರುವ ಮನೆಯ ವಾಸ್ತುಶಿಲ್ಪಿ ಕೂಡ ಈತನೆ ಆಗಿದ್ದಾನೆ ಎಂದು ಆರೋಪ ಮಾಡಿದರು.

ಸದ್ಯ ಈಗ ಸಿದ್ದರಾಮಯ್ಯ ಇರುವ ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯ ನವೀಕರಣವನ್ನು ಇದೇ ವಾಸ್ತುಶಿಲ್ಪಿ ಮಾಡುತ್ತಿದ್ದಾನೆ ಎಂದು ತಿಳಿಸಿದ ಕುಮಾರಸ್ವಾಮಿ, ಹಣ ಸಿಕ್ಕಿರುವ ಆ ಗುತ್ತಿಗೆದಾರನಿಗೂ, ವಾಸ್ತುಶಿಲ್ಪಿಗೂ ಏನು ಸಂಬಂಧ ಆ ವಾಸ್ತುಶಿಲ್ಪಿಗೂ ರಾಜಕಾರಣಿಗೂ ಏನು ಸಂಬಂಧ, ಆ ವಾಸ್ತುಶಿಲ್ಪಿ ಯಾರ ಹತ್ತಿರವಿದ್ದಾನೆ. ಗುತ್ತಿಗೆದಾರನ ಮನೆಗೆ ಹಣ ತೆಗೆದುಕೊಂಡು ಹೋದವರು ಯಾರು ಎಂಬ ಬಗ್ಗೆ ಸಮಗ್ರ ತನಿಖೆಯಾದರೆ ಸತ್ಯಾಂಶ ಬಯಲಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಹಣ ಇಟ್ಟುಕೊಂಡಿದ್ದ ಗುತ್ತಿಗೆದಾರ ಈಗ ಸಂಕಷ್ಟಕ್ಕೆ ಸಿಲುಕಿದ್ದಾನೆ. ಆದಾಯ ತೆರಿಗೆ ಇಲಾಖೆಯವರಿಗೆ ಲೆಕ್ಕ ತೋರಿಸಲು ಸಾಲ ಕೊಟ್ಟಿದ್ದೇವೆಂದು ಪತ್ರ ಕೊಡಿ ಎಂದು ತಮ್ಮ ಸ್ನೇಹಿತ ಗುತ್ತಿಗೆದಾರರನ್ನು ಗೋಗರೆಯುತ್ತಿದ್ದಾನೆ ಎಂದು ಕುಮಾರಸ್ವಾಮಿ ಹೇಳಿದರು.

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರುವುದಕ್ಕೆ ಸಿ.ಎಂ.ಇಬ್ರಾಹಿಂ ವಿರೋಧ



ಬೆಂಗಳೂರು, ಅ.16(ಕೆಎಂಶಿ) –ಎನ್‌ಡಿಎ ಮೈತ್ರಿಕೂಟದ ಜತೆ ಕೈ ಜೋಡಿಸಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಇದೇ ಪರಿಸ್ಥಿತಿ ಮುಂದುವರೆದರೆ ಪಕ್ಷ ಇಬ್ಭಾಗವಾಗುವ ಮುನ್ಸೂಚನೆ ನೀಡಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ನಡೆಯಿಂದ ಬೇಸತ್ತ ಇಬ್ರಾಹಿಂ ಅವರು ಸಮಾನಮನಸ್ಕರ ಚಿಂತನಾ–ಮಂಥನ ಸಭೆ ನಡೆಸಿ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ ಅವರಿಗೆ ಎಚ್ಚರಿಕೆ ಸಂದೇಶ ನೀಡಿದ್ದಾರೆ.

ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ದೇವೇಗೌಡರ ಗಮನಕ್ಕೆ ತರುತ್ತೇನೆ. ಆನಂತರ ಪರದೆಯ ಮೇಲೆ ಮುಂದಿನ ಚಿತ್ರ ನೋಡಿ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ. ಚಿಂತನ ಮಂಥನ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್‌ನ ರಾಜ್ಯಾಧ್ಯಕ್ಷ ಈಗಲೂ ನಾನೇ. ನನ್ನನ್ನು ತೆಗೆಯಲು ಯಾರಿಂದಲೂ ಸಾಧ್ಯವಿಲ್ಲ. ನನ್ನನ್ನು ತೆಗೆಯುವುದೇ ಆದರೆ, ಮೂರನೇ ಎರಡು ಭಾಗ ಅಭಿಪ್ರಾಯ ಪಡೆದು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು. ಯಾರಿಗೂ ಹೇಳದೆ, ದೆಹಲಿಗೆ ಹೋಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿಯಾಗಿ ಮೈತ್ರಿ ಮಾಡಿಕೊಂಡರು. ದೇವೇಗೌಡರ ಮನೆಗೆ ಅಮಿತ್ ಷಾ ಬರಲಿ ಅಂತಾ ಹೇಳಿದೆ. ಎರಡೂ ಪಕ್ಷಗಳ ನಡುವೆ ಮೈತ್ರಿ ಆಗಬೇಕಿದ್ದರೆ, ನಮ್ಮ ತತ್ವ ಅವರು ಒಪ್ಪಿದ್ದಾರೆ ಅಥವಾ ಅವರ ತತ್ವ ನಾವು ಒಪ್ಪಿದ್ದೇವೆಯೋ ಎಂಬುದು ಸ್ಪಷ್ಟವಾಗಬೇಕು ಎಂದರು.

ಸಂವಿಧಾನದಲ್ಲಿ ಜಾತ್ಯತೀತ ಪದ ತೆಗೆದು ಹಾಕಿದ್ದಾರೆ. ಅವರ ನೀತಿ ಏನು, ಅಲ್ಲಿಗೆ ಹೋಗುವುದು ಬೇಡ. ಇಲ್ಲಿಗೆ ಕರೆಸಿ ಎಂದೇ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಅಮಿತ್ ಷಾ ಭೇಟಿಯಾಗಿ ಬಂದಿದ್ದಾರೆ. ಪಕ್ಷದಲ್ಲಿ ಚರ್ಚೆಯಾಗಿದೆಯೇ, ನಿರ್ಣಯವಾಗಿದೆಯೇ?

ಪಕ್ಷ ಕುಟುಂಬದ ಆಸ್ತಿಯಲ್ಲ. ಎಲ್ಲರ ಅಭಿಪ್ರಾಯ ಪಡೆದು ತೀರ್ಮಾನ ಕೈಗೊಳ್ಳಬೇಕು. ಸಭೆಯಲ್ಲಿ ಚರ್ಚಿತವಾದ ಎಲ್ಲಾ ಅಭಿಪ್ರಾಯವನ್ನು ಗೌಡರ ಗಮನಕ್ಕೆ ತರುತ್ತೇನೆ. ಅವರು ಒಪ್ಪದಿದ್ದರೆ ಮುಂದಿನ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ಮುಂದೆ ಯಾರ ಜತೆ ಹೋಗಬೇಕು. ಎಷ್ಟು ಸೀಟು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಕೋರ್ ಕಮಿಟಿ ರಚಿಸಲಾಗುವುದು. ನನ್ನ ಬಳಿ ಹಣವಿಲ್ಲ. ಒಂದು ಫೋನ್ ಕರೆಯಿಂದ ಇಷ್ಟು ಜನರು ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಅರಮನೆ ಮೈದಾನದಲ್ಲಿ ಸಮಾವೇಶ ನಡೆಸಲಾಗುವುದು.

ಪಕ್ಷ ವಿರೋಧಿ ಚಟುವಟಿಕೆ ಇದೇ ರೀತಿ ಮುಂದುವರೆದರೆ ಕುಮಾರಸ್ವಾಮಿ ಅವರನ್ನು ವಜಾ ಮಾಡಲಾಗುವುದು. ಮುಸ್ಲಿಂರನ್ನು ನಂಬಿ ರಾಜಕೀಯ ಮಾಡಿಲ್ಲ ಎನ್ನುತ್ತಾರೆ. ಆದರೆ, ಕುಮಾರಸ್ವಾಮಿ ಅವರಿಗೆ 20 ಸಾವಿರ ಮತಗಳು ಬಿದ್ದಿದ್ದರಿಂದಲೇ ಅಮಿತ್ ಷಾ ಅವರನ್ನು ದೆಹಲಿಗೆ ಕರೆಸಿಕೊಂಡರು.

ಜಿಲ್ಲಾ ಪ್ರವಾಸ ಮಾಡ್ತೀನಿ, ಸಂವಿಧಾನ ಉಳಿಯಬೇಕು, ಶರಣ ತತ್ವ ಉಳಿಯಬೇಕು. ದೇವೇಗೌಡರೇ ತಪ್ಪು ನಿರ್ಧಾರ ತೆಗೆದುಕೊಳ್ಳಬೇಡಿ ಎಂದರು.

ನೀವು ಪ್ರಧಾನಿಯಾಗಿ ಇನ್ನು ಸ್ವಲ್ಪ ದಿನ ಇದ್ದಿದ್ದರೆ ರಾಮ ಮಂದಿರ ಸಮಸ್ಯೆಯನ್ನು ನಾವೇ ಬಗೆಹರಿಸುತ್ತಿದ್ದೆವು. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ ವಿರುದ್ಧ ವೈಯಕ್ತಿಕ ದ್ವೇಷ ಇಲ್ಲ. ಆದರೆ, ಸಿದ್ಧಾಂತ ಭಿನ್ನವಾಗಿದೆ.

ಕಾಂಗ್ರೆಸ್‌ನವರು ಇಂದು ಮೇಲೆ ಬಂದಿದ್ದಾರೆ. ಆದರೆ ಅದನ್ನು ತಲೆಗೆ ತಗೊಬೇಡಿ ಎಂದು ಹೇಳಿದರು.

ಸಿ.ಎಂ.ಇಬ್ರಾಹಿಂ ಏನೇ ತೀರ್ಮಾನ ಕೈಗೊಳ್ಳಲು ಸ್ವತಂತ್ರರು: ಹೆಚ್.ಡಿ.ಕೆ

ಮೈಸೂರು, ಅ.16(ಬಿಎಲ್‌ಯು)–ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯನ್ನು ಒಪ್ಪದಿದ್ದರೆ ಸಿ.ಎಂ.ಇಬ್ರಾಹಿಂ ಏನೇ ತೀರ್ಮಾನ ಕೈಗೊಳ್ಳಲು ಅವರು ಸ್ವತಂತ್ರರು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಮೈಸೂರಿನ ನಂಜನಗೂಡು ದೇವಸ್ಥಾನದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಗೆ ತಮ್ಮ ಬೆಂಬಲವಿಲ್ಲ ಎಂದು ನಿರ್ಧಾರ ಮಾಡಿರುವ ಇಬ್ರಾಹಿಂ ಹೇಳಿಕೆಗೆ ಕುಮಾರಸ್ವಾಮಿ ಈ ಮೂಲಕ ತಿರುಗೇಟು ನೀಡಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಆಗಬೇಕೆಂಬುದು ನಮ್ಮ ಕಾರ್ಯಕರ್ತರ ತೀರ್ಮಾನವಾಗಿದೆ. ಈ ಸಂಬಂಧ ಕಾರ್ಯಕರ್ತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದರು. ಈ ವಿಚಾರದಲ್ಲಿ ಸಿ.ಎಂ.ಇಬ್ರಾಹಿಂ ಏನೇ ತೀರ್ಮಾನ ಕೈಗೊಳ್ಳಲೂ ಅದಕ್ಕೆ ಅವರು ಸ್ವತಂತ್ರರು. ಆದರೆ ಈ ವಿಚಾರದಲ್ಲಿ ಇಬ್ರಾಹಿಂ ತಮ್ಮ ಅಭಿಮಾನಿಗಳು ಹಾಗೂ ಹಿತೈಷಿಗಳ ಜೊತೆಗೂಡಿ ಅಂತಿಮವಾಗಿ ಏನು ತೀರ್ಮಾನ ಕೈಗೊಳ್ಳುತ್ತಾರೊ ಕಾದು ನೋಡೋಣ ಎಂದು ತಿಳಿಸಿದರು.

ವಾಲ್ಮೀಕಿ ಸಮುದಾಯ ಭವನ ನಿರ್ಮಾಣ ಸಂಬಂಧ ಸುಳ್ಳು ಮಾಹಿತಿ ನೀಡಿದ್ದೀರಾ ಎಂದು

ಎಇಇ ನಾಗರಾಜುಗೆ ಮಾಜಿ ಶಾಸಕ ಚಿಕ್ಕಣ್ಣ ತರಾಟೆ



ಹೆಚ್.ಡಿ.ಕೋಟೆ, ಅ.16–ಪಟ್ಟಣದಲ್ಲಿ 6 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ವಾಲ್ಮೀಕಿ ಸಮುದಾಯ ಭವನಕ್ಕೆ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಅವರ ತಂದೆ ಚಿಕ್ಕಮಾದು ಕೊಡುಗೆ ಅಷ್ಟೇ ಅಲ್ಲ. ನನ್ನ ಕೊಡುಗೆಯೂ ಇದೇ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಜಿಪಂ ಎಇಇ ನಾಗರಾಜು ಅವರನ್ನು ತರಾಟೆಗೆ ತೆಗೆದುಕೊಂಡರು.

ಪಟ್ಟಣದ ಜಿಪಂನ ಎಇಇ ಕಚೇರಿಗೆ ಸೋಮವಾರ ಬೆಂಬಲಿಗರೊಂದಿಗೆ ಮುತ್ತಿಗೆ ಹಾಕಿದ ಮಾಜಿ ಶಾಸಕರು, ಇತ್ತೀಚಿಗೆ ನಡೆದ ವಾಲ್ಮೀಕಿ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ನೀವು 2015ರಿಂದ ವಾಲ್ಮೀಕಿ ಭವನಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆ ಎಂದು ಸುಳ್ಳು ಮಾಹಿತಿ ನೀಡಿದ್ದೀರಾ ಎಂದು ತರಾಟೆಗೆ ತೆಗೆದುಕೊಂಡರು.

ವಾಲ್ಮೀಕಿ ಸಮುದಾಯ ಭವನಕ್ಕೆ ನನ್ನ ಶಾಸಕರ ಅವಧಿಯಲ್ಲಿ ಸರ್ಕಾರದಿಂದ 1.20 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಆದರೆ, ನನ್ನ ಅವಧಿಯಲ್ಲಿ ಯಾವುದೇ ಅನುದಾನ ನೀಡಿಲ್ಲ. ವಾಲ್ಮೀಕಿ ಭವನ ನಿರ್ಮಾಣಕ್ಕೆ ನನ್ನ ಶ್ರಮವೇ ಇಲ್ಲ ಎನ್ನುವ ರೀತಿ ತಪ್ಪು ಮಾಹಿತಿ ನೀಡಿದ್ದೀರಾ? 2010 ರಿಂದ ಇಲ್ಲಿಯವರೆಗೆ ಅನುದಾನ ಬಿಡುಗಡೆ ಆಗಿರುವ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕು. ಇಲ್ಲದಿದ್ದರೆ ಜಾಗ ಬಿಟ್ಟು ಕದಲುವುದಿಲ್ಲ ಎಂದು ಬೆಂಬಲಿಗರೊಂದಿಗೆ ಕಚೇರಿಯಲ್ಲಿ ಪಟ್ಟುಹಿಡಿದು ಕುಳಿತರು.

ವಾಲ್ಮೀಕಿ ಭವನ ನಿರ್ಮಿಸಲು ಒಂದು ಎಕರೆ 15 ಗುಂಟೆ ಜಾಗವನ್ನು 1.70 ಲಕ್ಷ ರೂ. ಅನ್ನು ಸರ್ಕಾರಕ್ಕೆ ಕಿಮ್ಮತ್ತು ನೀಡಿ ಜಿಲ್ಲಾಧಿಕಾರಿ ಕಚೇರಿಯಿಂದ ಆದೇಶ ಮಾಡಿಸಿ, ವಾಲ್ಮೀಕಿ ಭವನ ನಿರ್ಮಾಣಕ್ಕೆ ಅಂದೇ ಲೈಸನ್ಸ್ ಸಹ ಮಾಡಿಸಿದ್ದೇನೆ. 2013ರಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ರಾಮದಾಸ್, ವಿಧಾನಪರಿಷತ್ ಸದಸ್ಯ ಚಿಕ್ಕಮಾದು, ಸಮಾಜದ ಪ್ರಸನ್ನಾನಂದಪುರಿ ಸ್ವಾಮೀಜಿ, ತಾಲೂಕು ನಾಯಕ ಸಂಘದ ಅಧ್ಯಕ್ಷರು ಹಾಗೂ ಸಮಾಜದ ಮುಖಂಡರ ಸಮ್ಮುಖದಲ್ಲಿ ಭೂಮಿಪೂಜೆ ನೆರವೇರಿಸಲಾಗಿದೆ. ಸರ್ಕಾರದಿಂದ 1 ಕೋಟಿ ರೂ., ಶಾಸಕರ ನಿಧಿಯಿಂದ 15 ಲಕ್ಷ ರೂ., ಸಂಸದರ ನಿಧಿಯಿಂದ 5 ಲಕ್ಷ ರೂ. ಸೇರಿ ಒಟ್ಟು ಒಂದು ಕೋಟಿ ಇಪ್ಪತ್ತು ಲಕ್ಷ ರೂ. ಅನ್ನು ಮಂಜೂರು ಮಾಡಿಸಿ ಭೂಮಿ ಪೂಜೆ ನೆರವೇರಿಸಿದ್ದೇನೆ. ಆದರೆ, ನೀವು ಸುಳ್ಳು ಮಾಹಿತಿ ನೀಡುವುದು ಎಷ್ಟರ ಮಟ್ಟಿಗೆ ಸರಿ ಎಂದು ನಾಗರಾಜು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಎಇಇ ನಾಗರಾಜು ಮಾತನಾಡಿ, ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ವಾಲ್ಮೀಕಿ ಭವನ ನಿರ್ಮಾಣಕ್ಕೆ ಬಂದಿರುವ ಅನುದಾನ ಪಟ್ಟಿಯ ವಿವರಣೆ ಕೊಡಿ ಎಂದು ಕೇಳಿದಾಗ, ನನ್ನ ಬಳಿ ಇರುವ ಪಟ್ಟಿಯ ವಿವರಗಳನ್ನು ನೀಡಿದ್ದೇನೆ ಹೊರತು. ನಾನು ಯಾವುದೇ ಉದ್ದೇಶಪೂರ್ವಕವಾಗಿ ಮಾತನಾಡಿಲ್ಲ ಎಂದು ಸಮಜಾಯಿಷಿ ನೀಡಿದರು.

ನಂತರ ಚಿಕ್ಕಣ್ಣ, ಪೂರ್ಣ ಮಾಹಿತಿ ನೀಡಿ ವಿವರಣೆ ನೀಡಬೇಕು ಎಂದು ಹೇಳಿದರು. ಬಳಿಕ ಎಇಇ ನಾಗರಾಜ್, ನನಗೆ ಒಂದು ವಾರ ಅವಕಾಶ ನೀಡಿ ಅಷ್ಟರಲ್ಲಿ ನಿಮಗೆ ಸಂಪೂರ್ಣ ಮಾಹಿತಿಯನ್ನು ತರಿಸಿಕೊಡುತ್ತೇನೆ ಎಂದು ತಿಳಿಸಿದರು. ನಂತರ ಮಾಜಿ ಶಾಸಕರು ಬೆಂಬಲಿಗರೊಂದಿಗೆ ಕಚೇರಿಯಿಂದ ಹೊರ ನಡೆದರು.

ಇದೇ ಸಂದರ್ಭದಲ್ಲಿ ತಾಲೂಕು ನಾಯಕ ಸಂಘದ ಪ್ರಧಾನ ಕಾರ್ಯದರ್ಶಿ ಚಾಕಹಳ್ಳಿ ಕೃಷ್ಣ, ಕಾರ್ಯದರ್ಶಿ ಜಿಯಾರ ನಾಗನಾಯಕ, ಮುಖಂಡರಾದ ಗೋವಿಂದ ರಾಜು, ವೆಂಕಟಸ್ವಾಮಿ, ಕೃಷ್ಣನಾಯಕ, ರಾಜನಾಯಕ, ಸೂರಿ, ಸಿದ್ದರಾಜು, ವೆಂಕಟಸ್ವಾಮಿ, ಕೋಟೆ ಕೃಷ್ಣ ಸೋಮನಾಯಕ, ಪ್ರಸಾದಿ, ಭಾಸ್ಕರ್, ನಾಗೇಂದ್ರ ದೊಡ್ಡರಾಜು, ಸ್ವಾಮಿನಾಯಕ, ವೆಂಕಟಸ್ವಾಮಿ, ಸಿದ್ದನಾಯಕ, ನಿಂಗನಾಯಕ, ತಿಮ್ಮನಾಯಕ, ಚೆನ್ನಪ್ಪ, ನಾಗರಾಜು, ಕೃಷ್ಣ, ಕಾಳಸ್ವಾಮಿ ಮುಂತಾದವರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ರಾಜಮಾರ್ತಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದ್ರಮುಖಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಂತಿರಾಂ ಚಾಪ್ಟರ್–1 (ತೆ)	4 ಪ್ರದರ್ಶನಗಳು
ಸಂಗಂ	
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕಂದ (ತೆ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲಿವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, 800 (ತ): ಮ.1.15ಕ್ಕೆ, ಅಭಿರಾಮಚಂದ್ರ (ಕ): ಸಂ.4.25ಕ್ಕೆ, ದಿ ವ್ಯಾಕ್ಸಿನ್ ವಾರ್ (ಹಿಂ): ಸಂ.6.50ಕ್ಕೆ.
ಸ್ಕ್ರೀನ್ 2	ಕನ್ನೂರ ಸ್ಕ್ವಾಡ್ (ಮ): ಬೆ.10.40ಕ್ಕೆ, ರಥಂ (ತ): ಮ.1.45ಕ್ಕೆ, ರೂಲ್ಸ್ ರಂಜನ್ (ತೆ): ಸಂ.4.10ಕ್ಕೆ, ಮಿಷನ್ ರಾಣಿಗಂಜ್ (ಹಿಂ): ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ರಾಜಮಾರ್ತಾಂಡ (ಕ): ಬೆ.10.55ಕ್ಕೆ, ತೋತಾಪುರಿ 2 (ಕ): ಮ.1.35ಕ್ಕೆ, ಜವಾನ್ (ಹಿಂ): ಸಂ.4.05ಕ್ಕೆ, ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ): ರಾ.7.25ಕ್ಕೆ, ಚಾವರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (ಕ): ಬೆ.10.40ಕ್ಕೆ, ಬಾನ ದಾರಿಯಲ್ಲಿ (ಕ): ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮ್ಯಾಡ್ 2023 (ತೆ): ಸಂ.4.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಾನ ದಾರಿಯಲ್ಲಿ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	ಪಾವ್ ಪಟ್ರೋಲ್ (ಇಂ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ರಾ.8.15ಕ್ಕೆ, ಮಿಷನ್ ರಾಣಿಗಂಜ್ (ಹಿಂ): ಸಂ.5.15ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.11.55ಕ್ಕೆ, ಪಾವ್ ಪಟ್ರೋಲ್ (ಇಂ): ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 4	ಮಿಷನ್ ರಾಣಿಗಂಜ್ (ಹಿಂ): ಬೆ.11ಕ್ಕೆ, ಮಾರಕಾಸ್ತ್ರ (ಕ): ಮ.3ಕ್ಕೆ, ಅಭಿರಾಮಚಂದ್ರ (ಕ): ಸಂ.6.20ಕ್ಕೆ, ಮ್ಯಾಡ್ (ತೆ): ರಾ.9ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್** (ಕ): ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2** (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2** (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ** (ಕ): ರಾ.9.45ಕ್ಕೆ, **ಆಚಾರ್ & ಕೋ** (ಕ): ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ** (ಕ): ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ** (ಕ): ಬೆ.11.55ಕ್ಕೆ, **ರಾಖಿ ಔರ್ ರಾಣಿ** (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್** (ಇಂ): ಸಂ.6.35ಕ್ಕೆ, **ಭೋಳಾ ಶಂಕರ್** (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2** (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ತಿ.ನರಸೀಪುರ, ಅ.16–ತಾಲೂಕಿನ ಮಲಿಯೂರು ಗ್ರಾಮದ ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನ ಆವರಣದಲ್ಲಿ ತಾಲೂಕು ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ವತಿಯಿಂದ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ರಾಜ್ಯ ಪ್ರತಿಧ್ವನಿ ವೇದಿಕೆಯ ತಾಲೂಕು ಸಂಘಟನಾ ಕಾರ್ಯದರ್ಶಿ ಎಂ.ಆರ್.ಎಸ್. ಮೋಹನ್ ಚಾಲನೆ ನೀಡಿದರು.

ನಂತರ ಮೋಹನ್ ಮಾತನಾಡಿ, ನನಗೆ ಹೆಚ್ಚಾಗಿ ಪರಿಸರದ ಮೇಲಿನ ಕಾಳಜಿಯೇ ಮುಖ್ಯವಾಗಿದೆ. ನಾವಿರುವ ಕಡೆ ಪರಿಸರ ಸ್ವಚ್ಛವಾಗಿರಬೇಕು ಎಂಬ ಮಹತ್ತರ ಆಶಯದೊಂದಿಗೆ ಸಾಧ್ಯವಾಗುವ ಕಡೆ ಸಸಿ ನೆಟ್ಟು ಪೋಷಿಸುತ್ತಿದ್ದೇನೆ. ಆ ಮೂಲಕ ಪರಿಸರಕ್ಕೆ ನನ್ನ ಅಳಿಲು ಸೇವೆ ಮಾಡುತ್ತಿದ್ದೇನೆ. ನನಗೆ ತಿಳಿದ ಮಟ್ಟಿಗೆ ಕಾಲುವೆ ಬದಿಯಲ್ಲಿ ಸ್ವಚ್ಛಗೊಳಿಸಿ ಗಿಡ ಬೆಳೆಸಬೇಕೆಂಬ ಕಲ್ಪನೆಯೊಂದಿಗೆ ಬನ್ನೂರಿನ ಭೋವಿ ಕಾಲೋನಿ, ಧನಗೂರು ಸೇರಿದಂತೆ ಸ್ಮಶಾನಗಳಲ್ಲಿ ಸಸಿ ನೆಟ್ಟು ಪೋಷಿಸುತ್ತಾ ಬಂದಿದ್ದೇನೆ ಎಂದರು.

ತಾಲೂಕು ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್ ಮಾತನಾಡಿ, ಮೋಹನ್ ಅವರು ಸತತ 5 ವರ್ಷಗಳಿಂದಲೂ ದೇವಾಲಯ, ಸ್ಮಶಾನ ಹಾಗೂ ಮತ್ತಿತರೆಡೆ ಸಸಿಗಳನ್ನು ನೆಡುತ್ತಿದ್ದಾರೆ. ಇವರ ಪರಿಸರ ಮೇಲಿನ ಪ್ರೇಮ ಹಾಗೂ ಜಾಗೃತಿ ಕಂಡು ನಮ್ಮ ಸಂಘ ಈ ಬಾರಿ ಪುರಾತನವಾದ ಮಲಿಯೂರು ಬೀರೇಶ್ವರ ದೇವಸ್ಥಾನದಲ್ಲಿ ಗಿಡ ನೆಡುವ ಕಾರ್ಯಕ್ರಮ ಏರ್ಪಡಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ಶಿವಣ್ಣ, ಜನ ಕಲ್ಯಾಣ ಸಂಘದ ಪ್ರಧಾನ ಕಾರ್ಯದರ್ಶಿ ವಾಟಾಳು ಜಿ.ಎನ್.ಪುಟ್ಟಸ್ವಾಮಿ, ಮಲಿಯೂರು ಶಿವು, ಕಾಂಗ್ರೆಸ್ ಮುಖಂಡ ದೊಳ್ಳಯ್ಯ, ತಾಪಂ ಮಾಜಿ ಸದಸ್ಯ ಎಚ್.ಜವರಯ್ಯ, ಗ್ರಾಪಂ ಸದಸ್ಯ ಬಾಬು, ಶಿವು, ನಾರಾಯಣ, ಪ್ರಕಾಶ್, ನಂಜುಂಡ, ದೊರೆ, ರವಿ, ಪುನಿ, ಕಿರಣ್, ಚಾಮರಾಜು, ಬಸವರಾಜು, ಬಾಲು, ನಾಗರಾಜು, ರೋಷನ್, ಸುನಿ, ರಾವಿನ್, ರಾಜೇಶ್, ಭರತ್, ಯೋಗಿ, ಹರೀಶ್ ಮತ್ತಿತರರಿದ್ದರು.

ಹಲ್ಲರೆ ಗ್ರಾಮದಲ್ಲಿ ಬೆಳೆ ಕ್ಷೇತ್ರೋತ್ಸವ



ಮಲ್ಲುಂಡಿ, ಅ.16–ನಂಜನಗೂಡು ತಾಲೂಕಿನ ಮಲ್ಕುಂಡಿ ಸಮೀಪದ ಹಲ್ಲರೆ ಗ್ರಾಮದ ಪ್ರಗತಿಪರ ರೈತ ಶಿವು ಅವರ ಜಮೀನಿನಲ್ಲಿ ನಾಥ್ ಬಯೋಜೀನ್ಸ್ ಸೀಡ್ಸ್ ಕಂಪನಿ ವತಿಯಿಂದ ಮೆಣಸಿನಕಾಯಿ ಬೆಳೆ ಕ್ಷೇತ್ರೋತ್ಸವ ನಡೆಯಿತು.

ಕ್ಷೇತ್ರೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಕಂಪನಿಯ ವ್ಯವಸ್ಥಾಪಕ ಮನು ಕುಮಾರ್, ಬುಲೆಟ್ ಮೆಣಸಿನಕಾಯಿ ತಳಿ ಅತ್ಯುತ್ತಮವಾಗಿದೆ. ಆಕರ್ಷಕ ಕಾಯಿಗಳೊಂದಿಗೆ ಉತ್ತಮ ಇಳುವರಿ ಪಡೆಯಬಹುದು. ಈ ತಳಿಯನ್ನು ಬೆಳೆದರೆ ಉತ್ತಮ ಲಾಭ ಪಡೆಯಬಹುದು ಎಂದು ರೈತರಿಗೆ ಸಲಹೆ ನೀಡಿದರು.

ಕಂಪನಿಯ ಆರ್‌ಎಸ್‌ಎಂ ಇಮ್ತಿಯಾಜ್ ಪಟೇಲ್ ಮಾತನಾಡಿ, ನಾಥ್ ಸೀಡ್ಸ್ ಕಂಪನಿಯು 40 ವರ್ಷಗಳಿಂದ ರೈತರಿಗೆ ಕಡಿಮೆ ದರದಲ್ಲಿ ಉತ್ತಮ ಬಿತ್ತನೆ ಬೀಜಗಳನ್ನು ನೀಡುತ್ತಿದೆ. ಈ ಭಾಗದಲ್ಲಿ ಅಖಂಡ, ರಾಣಾ, ಮಹಿಮಾ, ಎನ್‌ಎನ್ ಹೆಚ್–1061, ವಿನ್–ಚೀ–ವಿನ್ ಮೆಣಸಿನ ಕಾಯಿ ತಳಿಗಳನ್ನು ಬೆಳೆಯಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನಾಥ್ ಸೀಡ್ಸ್ ಕಂಪನಿಯ ಚಾಮರಾಜನಗರ ವಿತರಕ ಮಹದೇಶ್ವರ ಎಂಟರ್ ಪ್ರೈಸಸ್ ಶಿವಕುಮಾರ್, ಮೈಸೂರು ವಿತರಕ ವಿನಾಯಕ ಎಂಟರ್ ಪ್ರೈಸಸ್ ಮಹೇಶ್, ಮಲ್ಕುಂಡಿ ನಂಜುಂಡಿ, ಪ್ರಸನ್ನ, ಮನೋಜ್, ಸೋಮಶೇಖರ, ಅಭಿ, ರೈತರು ಇದ್ದರು.

ಹಾವು ಕಚ್ಚಿ ಮಹಿಳೆ ಸಾವು

ನಂಜನಗೂಡು, ಅ.16–ಜಮೀನಿನಲ್ಲಿ ಕೃಷಿಯಲ್ಲಿ ತೊಡಗಿದ್ದ ರೈತ ಮಹಿಳೆ ಹಾವು ಕಚ್ಚಿ ಮೃತಪಟ್ಟಿರುವ ಘಟನೆ ಸೋಮವಾರ ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿಯ ಗೊದ್ದನಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಜಯಲಕ್ಷ್ಮೀ (42) ಮೃತ ಮಹಿಳೆ. ಈಕೆ ಭಾನುವಾರ ತಮ್ಮ ಜಮೀನಿನಲ್ಲಿ ಪತಿ ಸ್ವಾಮಿ ಮತ್ತು ಮಕ್ಕಳೊಂದಿಗೆ ಅವರೆಕಾಯಿ ಕೊಯ್ಯುವ ವೇಳೆ ಹಾವು ಕಚ್ಚಿದೆ. ತಕ್ಷಣ ಈಕೆಯನ್ನು ಹತ್ತಿರದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಮೈಸೂರಿನ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಆದರೆ, ಸೋಮವಾರ ಮೃತಪಟ್ಟಿದ್ದಾರೆ.

ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಧಾರ್ ಕಾರ್ಡ್ ಪಡೆದು ಕಾರ್ಮಿಕರನ್ನು ನೇಮಿಸಿಕೊಳ್ಳಿ



ಕೆ.ಆರ್.ನಗರ, ಅ.16–ಆಧಾರ್ ಕಾರ್ಡ್ ಹಾಗೂ ಭಾವಚಿತ್ರವನ್ನು ಕಡ್ಡಾಯವಾಗಿ ಪಡೆದು ಕಾರ್ಮಿಕರನ್ನು ನೇಮಿಸಿಕೊಳ್ಳುವಂತೆ ಅಂಗಡಿಗಳ ವರ್ತಕರಿಗೆ ವೃತ್ತ ನಿರೀಕ್ಷಕ ಪಿ.ಪಿ.ಸಂತೋಷ್ ಸೂಚನೆ ನೀಡಿದರು.

ಪಟ್ಟಣದ ಕೃಷ್ಣ ಮಂದಿರದಲ್ಲಿ ನಡೆದ ವರ್ತಕರು ಮತ್ತು ನಾಗರಿಕರ ಸಭೆಯಲ್ಲಿ ಮಾತನಾಡಿದ ಅವರು, ತಮ್ಮ ಅಂಗಡಿ ಮತ್ತು ಮನೆಯ ಸುತ್ತಮುತ್ತ ಅನುಮಾನಾಸ್ಪದವಾಗಿ ಓಡಾಡುವ ವ್ಯಕ್ತಿಯ ಚಲನವಲನಗಳನ್ನು ಗಮನಿಸಬೇಕು. ಅನುಮಾನ ಬಂದಲ್ಲಿ ತಕ್ಷಣ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಜತೆಗೆ ಪ್ರತಿಯೊಬ್ಬ ಮಾಲೀಕರು ತಮ್ಮ ಅಂಗಡಿಯ ಮುಂಭಾಗ ಸಿಸಿ ಕ್ಯಾಮರಾ ಅಳವಡಿಸುವಂತೆ ತಿಳಿಸಿದರು.

ವರ್ತಕರು ಹಣ ವಹಿವಾಟು ನಡೆಸುವಾಗ ಮುನ್ನೆಚ್ಚರಿಕೆ ವಹಿಸುವುದು ಕಡ್ಡಾಯ. ಬ್ಯಾಂಕ್‌ಗೆ ಹಣವನ್ನು ಕಟ್ಟಲು ಹೋಗುವಾಗ ಜೊತೆಯಲ್ಲಿ ಯಾರನ್ನಾದರೂ ಕರೆದುಕೊಂಡು ಹೋಗಿ. ಹಣ ತೆಗೆದುಕೊಂಡು ಹೋಗುವುದು ಅಂಗಡಿಯ ಕಾರ್ಮಿಕರು ಹಾಗೂ ಬೇರೆ ವ್ಯಕ್ತಿಗಳಿಗೆ ಗೊತ್ತಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮದಾಗಿರುತ್ತದೆ ಎಂದು ಹೇಳಿದರು.

ಪಟ್ಟಣದಲ್ಲಿ ಇತ್ತೀಚೆಗೆ ಕಳ್ಳತನ ಹೆಚ್ಚಾಗಿದ್ದು, ಎಚ್ಚರಿಕೆಯಿಂದ ವ್ಯವಹರಿಸಬೇಕು. ವರ್ತಕರು ಬೇರೆ ಊರುಗಳಿಗೆ ಹೋಗುವಾಗ ಠಾಣೆಗೆ ಮಾಹಿತಿ ನೀಡಿದರೆ, ಬಡಾವಣೆ ಮತ್ತು ರಸ್ತೆಗಳ ರಾತ್ರಿ ಗಸ್ತಿಗೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಇದರಿಂದ ಕಳ್ಳತನ ತಪ್ಪಿಸಲು ಮತ್ತು ಕಳ್ಳರನ್ನು ಹಿಡಿಯಲು ಸಹಾಯವಾಗುತ್ತದೆ. ಆದ್ದರಿಂದ ವರ್ತಕರು ಮತ್ತು ನಾಗರಿಕರು ಪೊಲೀಸರ ಸಂಪರ್ಕದಲ್ಲಿ ಇರಬೇಕು ಎಂದು ತಿಳಿಸಿದರು.

ವ್ಯಾಪಾರಿಗಳನ್ನು ಸ್ಥಳಾಂತರಿಸಿ: ಪಟ್ಟಣದ ಬಜಾರ್, ವಿವಿ, ಚಂದ್ರಮೌಳೇಶ್ವರ ರಸ್ತೆಗಳ ಅಂಗಡಿಗಳ ಮುಂಭಾಗ ಬೀದಿಬದಿ ವ್ಯಾಪಾರಿಗಳು ತಳ್ಳುವ ಗಾಡಿಗಳನ್ನು ನಿಲ್ಲಿಸಿಕೊಳ್ಳುತ್ತಾರೆ. ಇದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಜತೆಗೆ ಅಂಗಡಿಗಳಿಗೆ ಬರುವ ಗ್ರಾಹಕರಿಗೂ ತೊಂದರೆಯಾಗಿದೆ. ಆದ್ದರಿಂದ ಬೀದಿಬದಿ ವ್ಯಾಪಾರಿಗಳನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ವರ್ತಕರು ಮನವಿ ಮಾಡಿದರು.

ಸಭೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಧನರಾಜ್, ವರ್ತಕರ ಮುಖಂಡರಾದ ಕೃಷ್ಣಭಟ್, ಉಮಾರಾವ್, ರಾಜೇಂದ್ರ, ಚಂದ್ರು, ಕುಮಾರ್, ವಸಂತ್, ಪೊಲೀಸ್ ಬ್ಬಂದಿ ಮಂಜು, ಹರೀಶ್, ವರ್ತಕ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಕಿತ್ತೂರಿನಲ್ಲಿ ಸಿಲಿಂಡರ್ ಸ್ಫೋಟದಿಂದ ಮನೆಗೆ ಹಾನಿ



ಬೆಟ್ಟದಪುರ, ಅ.16–ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕಿತ್ತೂರು ಗ್ರಾಮದಲ್ಲಿ ಸೋಮವಾರ ಮುಂಜಾನೆ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಮನೆಯೊಂದು ಸಂಪೂರ್ಣವಾಗಿ ಹಾನಿಯಾಗಿದೆ.

ಗ್ರಾಮದ ಸುಬ್ಬರಾಯಶೆಟ್ಟಿ ಅವರ ಮನೆಯಲ್ಲಿ ಮುಂಜಾನೆ ಸುಮಾರು 3 ಗಂಟೆಯಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿದೆ. ಇದರಿಂದ ಮನೆಯ ಛಾವಣಿ ಛಿದ್ರಗೊಂಡು ಸಂಪೂರ್ಣ ಹಾನಿವಾಗಿದೆ. ಅದೃಷ್ಟವಶಾತ್ ಮನೆಯಲ್ಲಿ ಯಾರು ಇಲ್ಲದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಬೆಟ್ಟದಪುರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಡೆಂಘಿ ರಥ'ಕ್ಕೆ ಚಾಲನೆ

ಹುಣಸೂರು, ಅ.16–ತಾಲೂಕಿನ ಬನ್ನಿಕುಪ್ಪೆ ಸಮೀಪದ ಗೆರಸನಹಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಹಮ್ಮಿಕೊಂಡಿರುವ ಡೆಂಘಿ ಜ್ವರದ ಬಗ್ಗೆ ಅರಿವು ಮೂಡಿಸುವ 'ಡೆಂಘಿ ರಥ'ಕ್ಕೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಕೇಶವಮೂರ್ತಿ ಚಾಲನೆ ನೀಡಿದರು.

ಇದೇ ವೇಳೆ ಡೆಂಘಿ ಜ್ವರದ ನಿಯಂತ್ರಣ ಕ್ರಮ, ರೋಗ ಲಕ್ಷಣ, ಸ್ವಚ್ಛತಾ ಮತ್ತು ಸ್ವಯಂ ರಕ್ಷಣಾ ವಿಧಾನ, ಆರೋಗ್ಯ ಮತ್ತು ಶಿಕ್ಷಣದ ಮಾಹಿತಿ ನೀಡಿ, ಕರಪತ್ರಗಳನ್ನು ವಿತರಿಸಲಾಯಿತು. ನಂತರ ಆರೋಗ್ಯ ಕೇಂದ್ರ ವ್ಯಾಪ್ತಿಯ ಕೊಮ್ಮೇಗೌಡನಕೊಪ್ಪಲು, ಹುಸೇನಪುರ, ಗೆರಸನಹಳ್ಳಿ ಗ್ರಾಮಗಳಲ್ಲಿ ರಥ ವಾಹನದಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಲಾಯಿತು. ತಾಲೂಕು ಆರೋಗ್ಯ ಸಹಾಯಕರಾದ ಶಕುಂತಲಾ, ಮುಜಾಯಿದ್ ಆರೋಗ್ಯ ಕೇಂದ್ರದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಇದ್ದರು.

ಅಧ್ಯಕ್ಷರಾಗಿ ಸೀತಾರಾಮ್ ಅವಿರೋಧ ಆಯ್ಕೆ



ಸರಗೂರು: ತಾಲೂಕಿನ ಕಿತ್ತೂರು (ಬಸಾಪುರ) ವಿವಿದ್ದೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ವಿ.ಸೀತಾರಾಮ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಕೆ.ವಿ.ಸೀತಾರಾಮ್ ಮಾತನಾಡಿ, ಸಂಘ ಉತ್ತಮವಾಗಿ ಕಾರ್ಯನಿರ್ವಹಿಸಲು ಸದಸ್ಯರ ಸಹಕಾರ ಪ್ರಮುಖ. ಆದ್ದರಿಂದ ಎಲ್ಲಾ ಸದಸ್ಯರು ಸಂಘದ ಅಭಿವೃದ್ಧಿಗೆ ಒತ್ತು ಕೊಡಬೇಕು ಎಂದು ಮನವಿ ಮಾಡಿದರು.

ಸಂಘದ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎಂ.ಸುರೇಶ್ ವರದಿ ಮಂಡಿಸಿದರು. ಬಳಕ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಉಪಾಧ್ಯಕ್ಷ ಕಾಳಸ್ವಾಮಿ, ನಿರ್ದೇಶಕರಾದ ಕಾಡಮ್ಮ, ಪುಟ್ಟಮ್ಮ, ಸ್ವಾಮಿಗೌಡ, ಮೊಳ್ಳಬೋವಿ, ಬಿ.ಎಸ್.ರುದ್ರೇಶ್, ಕಮಲಮ್ಮ, ಶಿವಶಂಕರ್, ಪುಟ್ಟಸಿದ್ದನಾಯಕ, ಎನ್.ಶಂಕರ್, ಗ್ರಾಪಂ ಅಧ್ಯಕ್ಷೆ ರಾಣಿಸ್ವಾಮಿ ಇದ್ದರು.

ಅಧ್ಯಕ್ಷರಾಗಿ ಸ್ವಾಮಿ, ಸುಧಾ ಮಹದೇವಯ್ಯ ನೇಮಕ

ತಿ.ನರಸೀಪುರ, ಅ.16–ಮೈಸೂರು ದಸರಾ ಮಹೋತ್ಸವದ ಆಹಾರ ಮೇಳ ಉಪಸಮಿತಿಯ ಅಧ್ಯಕ್ಷರಾಗಿ ಚಾಮುನಹಳ್ಳಿಯ ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್. ಸ್ವಾಮಿ ಹಾಗೂ ಮಹಿಳಾ ಮತ್ತು ಮಕ್ಕಳ ಉಪ ಸಮಿತಿಯ ಅಧ್ಯಕ್ಷರಾಗಿ ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ ಅವರನ್ನು ದಸರಾ ವಿಶೇಷಾಧಿಕಾರಿಯಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನೇಮಕಗೊಳಿಸಿದ್ದಾರೆ.

ಅಧ್ಯಕ್ಷರಾಗಿ ನೇಮಕವಾಗಲು ಕಾರಣರಾದ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರಿಗೆ ಸ್ವಾಮಿ, ಸುಧಾ ಮಹದೇವಯ್ಯ ಅಭಿನಂದನೆ ಸಲ್ಲಿಸಿದ್ದಾರೆ.



ಎ.ಎನ್.ಸ್ವಾಮಿ,



ಸುಧಾ ಮಹದೇವಯ್ಯ

ಭಾರತೀಯ ಯೋಗಕ್ಕೆ ಜಾಗತಿಕ ಮನ್ನಣೆ

● ಶಾಸಕ ದರ್ಶನ್ ಧ್ರುವನಾರಾಯಣ್ ಮೆಚ್ಚುಗೆ ● ಶ್ರೀಕಂಠೇಶ್ವರ ದೇವಸ್ಥಾನ ಮುಂಭಾಗ ಶಿವ ನಮಸ್ಕಾರ



ನಂಜನಗೂಡು, ಅ.16–ವಿದೇಶಗಳಿಂದ ಭಾರತಕ್ಕೆ ಬಂದು ಯೋಗ ಕಲಿತು ವಿಶ್ವದೆಲ್ಲೆಡೆ ಪಸರಿಸುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಭಾರತೀಯ ಯೋಗ, ಧ್ಯಾನ, ಆಧ್ಯಾತ್ಮಕ್ಕೆ ಜಾಗತಿಕ ಮನ್ನಣೆಯಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯ ಮುಂಭಾಗ ಸೋಮವಾರ ನಾಡಹಬ್ಬ ದಸರಾ ಮಹೋತ್ಸವದ ಯೋಗ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಸಾಮೂಹಿಕ ಯೋಗಾಭ್ಯಾಸ ಹಾಗೂ ಶಿವ ನಮಸ್ಕಾರದಲ್ಲಿ ಮಾತನಾಡಿದ ಅವರು, ನಾನು ಚಿಕ್ಕವನಾಗಿದ್ದಾಗ ಮೈಸೂರಿನ ಗೋಕುಲಂನಲ್ಲಿ ವಾಸವಾಗಿದ್ದೆ. ಆ ಸಂದರ್ಭದಲ್ಲಿ ಬೇರೆ ಬೇರೆ ದೇಶಗಳಿಂದ ಬರುತ್ತಿದ್ದ ವಿದೇಶಿಗರು ಮೈಸೂರಿನಲ್ಲಿ ಯೋಗ ಕಲಿತು ತಮ್ಮ ತಮ್ಮ ದೇಶದಲ್ಲಿ ಯೋಗ ಪಸರಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಇತ್ತೀಚಿನ ವರ್ಷಗಳಲ್ಲಿ ಇದು ವ್ಯಾಪಕವಾಗಿದ್ದು, ಜಾಗತಿಕವಾಗಿ ಭಾರತೀಯ ಯೋಗ ಪದ್ಧತಿಗೆ ವಿಶ್ವ ಮನ್ನಣೆ ಸಿಕ್ಕಿದೆ ಎಂದರು.

ಆಯುಷ್ ಇಲಾಖೆಯ ಆಯುಕ್ತೆ ಡಾ.ಲೀಲಾವತಿ ಮಾತನಾಡಿ, ಆಯುರ್ವೇದ ಹಾಗೂ ಯೋಗ ಪದ್ಧತಿಗೂ ಅವಿನಾಭಾವ ಸಂಬಂಧವಿದೆ. ನಗರ ಪ್ರದೇಶಗಳಿಗೆ ಮಾತ್ರ ಯೋಗ ಸೀಮಿತವಾಗಬಾರದು. ಗ್ರಾಮೀಣ ಪ್ರದೇಶಗಳಿಗೂ ಅದರ ಮಹತ್ವದ ಅರಿವಾಗಬೇಕೆಂಬ ದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳ ಆಯುಷ್ ಕ್ಷೇಮ ಕೇಂದ್ರಗಳಲ್ಲಿ ನಿತ್ಯ ಯೋಗ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಯೋಗಬಂಧುಗಳು ಭಾಗಿ: ಸಾಮೂಹಿಕ ಶಿವ ನಮಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ, ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಮೈಸೂರು, ನಂಜನಗೂಡಿನ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಹಾಗೂ ಕೆಂಪಿಸಿದ್ದನಹುಂಡಿ ಆಯುಷ್ ಕ್ಷೇಮ ಕೇಂದ್ರದ ನೂರಾರು ಯೋಗ ಬಂಧುಗಳು ಗಮನ ಸೆಳೆದರು.

ಸಮಿತಿಯ ಯೋಗ ಶಿಕ್ಷಕರಾದ ವರಲಕ್ಷ್ಮೀ, ಪ್ರಕಾಶ್ ಜಿ. ಉಡಿಗಾಲ, ಕೆಂಪಿಸಿದ್ದನಹುಂಡಿ ಆಯುಷ್ ಕ್ಷೇಮ ಕೇಂದ್ರದ ಮಹಿಳೆಯರು ಸಾಮೂಹಿಕ ಯೋಗ ನೃತ್ಯ ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಪಡೆದರು. ಯೋಗ ದಸರಾ ಉಪಸಮಿತಿ ಅಧ್ಯಕ್ಷ ದೇವರಾಜು, ವಿಶೇಷಾಧಿಕಾರಿ ರಮ್ಯ, ಆಯುಷ್ ಜಿಲ್ಲಾಧಿಕಾರಿ ಡಾ.ಪುಷ್ಪಾ, ತಾಲೂಕು ಅಧಿಕಾರಿ ಡಾ.ಅಶೋಕ್ ಕುಮಾರ್, ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶ್‌ಮೂರ್ತಿ, ಸದಸ್ಯರಾದ ವಿಷ್ಣುಪ್ರಿಯ, ರಫೀಕ್, ಚನ್ನಗಿರಿ, ಪೌರಾಯುಕ್ತ ನಂಜುಂಡಸ್ವಾಮಿ ಇದ್ದರು.

ಪೌರಕಾರ್ಮಿಕರ ಕುಂದುಕೊರತೆ ಸಭೆ ನಡೆಸಿ



ಹುಣಸೂರು, ಅ.16–ಹುಣಸೂರು ಉಪ ವಿಭಾಗ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಕುಂದುಕೊರತೆ ಸಭೆ ನಡೆಸಿ, ಮಾಹಿತಿ ನೀಡಬೇಕು ಎಂದು ಜಾಗೃತಿ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಸೂಚಿಸಿದರು.

ಪಟ್ಟಣದ ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಉಪವಿಭಾಗ ಮಟ್ಟದ ಸಫಾಯಿ ಕರ್ಮಚಾರಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪೌರಕಾರ್ಮಿಕರ ಕುಂದುಕೊರತೆಗಳ ಕುರಿತು ಎಲ್ಲಾ ಸ್ಥಳೀಯ ಸಂಸ್ಥೆಗಳ ಜಾಗೃತಿ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳು ಸಭೆ ನಡೆಸಬೇಕು. ಅವರ ಬೇಡಿಕೆಗಳ ಈಡೇರಿಕೆಗೆ ಕ್ರಮವಹಿಸಬೇಕು. ಶೇ.24.10ರಡಿ ಸಫಾಯಿ ಕರ್ಮಚಾರಿಗಳು ಮತ್ತು ಪೌರಕಾರ್ಮಿಕರಿಗೆ ಅನುದಾನ ಮೀಸಲಿಡಬೇಕು. ಸಮುದಾಯ ಭವನ, ವಿಶ್ರಾಂತಿ ಕೊಠಡಿಗಳ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಸಫಾಯಿ ಕರ್ಮಚಾರಿ ಜಾಗೃತಿ ಸಮಿತಿ ಸದಸ್ಯ ಎಚ್.ಕೆ.ಮಹೇಶ್ ಮಾತನಾಡಿ, ಉಪ ವಿಭಾಗ ಮಟ್ಟದಲ್ಲಿ ಖಾಸಗಿ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಫಾಯಿ ಕರ್ಮಚಾರಿಗಳು ಮತ್ತು ಪೌರಕಾರ್ಮಿಕರ ಸಮೀಕ್ಷೆ ನಡೆಸಿ ಗುರುತಿನ ಚೀಟಿ ನೀಡಬೇಕು. ಈ ಸಂಬಂಧ ಕಳೆದ 3 ಸಭೆಗಳಲ್ಲೂ ಮನವಿ ಮಾಡುತ್ತಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಸಾಲಿಗ್ರಾಮದಲ್ಲಿ ಪೌರಕಾರ್ಮಿಕರು ವಾಸ ಮಾಡುತ್ತಿರುವ ಜಾಗದ ಸಮಸ್ಯೆಯನ್ನು ಪರಿಹರಿಸಬೇಕು. ಹುಣಸೂರು ಮತ್ತು ಸರಗೂರು ತಾಲೂಕು ಕೇಂದ್ರದಲ್ಲಿ ಸಮುದಾಯ ಭವನ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ನಂತರ ಮಾತನಾಡಿದ ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ಖಾಸಗಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಗುರುತಿಸಿ ಅವರಿಗೆ ಗುರುತಿನ ಚೀಟಿ ನೀಡಬೇಕು ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ತಹಸೀಲ್ದಾರ್‌ಗಳಾದ ಎಸ್.ಯು. ಅಶೋಕ್, ಕುಂಞ ಮೊಹಮ್ಮದ್, ಡಿವೈಎಸ್‌ಪಿ ಗೋಪಾಲಕೃಷ್ಣ, ಹುಣಸೂರು ತಾಪಂ ಇಒ ಬಿ.ಕೆ.ಮನು, ಪಿರಿಯಾಪಟ್ಟಣ ಕಂದಾಯಾಧಿಕಾರಿ ಆದರ್ಶ, ಅಬಕಾರಿ ಅಧಿಕಾರಿ ಧರ್ಮರಾಜ್, ಸಮಾಜ ಕಲ್ಯಾಣಾಧಿಕಾರಿಗಳಾದ ಸಿದ್ದರಾಜು, ರಾಮಸ್ವಾಮಿ, ಎಚ್.ಡಿ.ಕೋಟೆ, ಸರಗೂರು ತಾಲೂಕಿನ ಅಧಿಕಾರಿಗಳು ಹಾಜರಿದ್ದರು.

ಕಾಣೆಯಾಗಿದ್ದಾರೆ



ಮೈಸೂರಿನ ಕುಂಬಾರ ಕೊಪ್ಪಲಿನ ನಿವಾಸಿ ಶ್ಯಾಮ್ ಸುಂದರ್(48) ಎಂಬುವವರು ದಿ: 10.10.2023 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನಂಜನಗೂಡು ದೇವಸ್ಥಾನಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದವರೂ ಮತ್ತೆ ವಾಪಸ್ಸು ಬಂದಿರುವುದಿಲ್ಲ ಅಕ್ಕ ಪಕ್ಕದಲ್ಲಿ ಹುಡುಕಿದರು ಎಲ್ಲೂ ಸಿಕ್ಕಿಲ್ಲ ಯಾರಿಗಾದರೂ ಸಿಕ್ಕಲ್ಲಿ ಮೊ:
6363709466
9611322838
ಸಂಪರ್ಕಿಸಲು ಕೋರಿದೆ





ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ – 2023 ರ ದೀಪಾಲಂಕಾರ ಉಪ ಸಮಿತಿಯ ಉಪಾಧ್ಯಕ್ಷರಾಗಿ ಆಯ್ಕೆಯಾದ

ಶ್ರೀಯುತ ಹೆಚ್.ಜೆ. ರಾಘವೇಂದ್ರ (ರಘು ಹುಯಿಲಾಳು) ರವರಿಗೆ

ಅಭಿನಂದನೆಗಳು

ಶುಭಕೋರುವವರು :
ಹುಯಿಲಾಳು ಗ್ರಾಮಸ್ಥರು

ಅಭಿನಂದನೆಗಳು



ಐತಿಹಾಸಿಕ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾದ ಮೈಸೂರು ಮಾತ್ರವಲ್ಲ, ಹಳೇ ಮೈಸೂರು ಭಾಗದಲ್ಲಿ ಮನೆ ಮಾತಾಗಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ

ಶ್ರೀಯುತ ಕೆ.ಬಿ.ಗಣಪತಿ

ಅವರಿಗೆ ತುಂಬು ಹೃದಯದ **ಅಭಿನಂದನೆಗಳು.**



ನಮ್ರತಾ ರಮೇಶ್
ಮೈಸೂರು ಮಹಾನಗರ ಪಾಲಿಕೆ ಸದಸ್ಯರು



ರಮೇಶ್
ಜೆಡಿಎಸ್ ಮುಖಂಡರು


7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವೆವು
ದುಃಖತಪ್ತರು
ಕುಟುಂಬವರ್ಗದರು

ಎಸ್ ಮಧುಕರ್
ಜನನ: 28.03.1980, ಮರಣ: 16.10.2016

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ರಾಜು. ಎಸ್
(ನಿವೃತ್ತ ಗ್ರಾ.ಪಂ ಕಾರ್ಯದರ್ಶಿಗಳು)

ಇವರು ದಿನಾಂಕ: 07.10.2023 ಶನಿವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 17.10.2023 ಮಂಗಳವಾರ ಬೆಳಗ್ಗೆ 11.00ಕ್ಕೆ ಮೃತರ ಸ್ವಗೃಹ ಕೊರ್ಗಳ್ಳಿ, ಇಲವಾಲ ಹೋ, ಮೈಸೂರು ಜಿಲ್ಲೆ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಗಾಯತ್ರಿ ಮತ್ತು ಮಕ್ಕಳು ಹಾಗು ಕುಟುಂಬವರ್ಗದವರು.

17ನೇ ವರ್ಷದ ಸವಿನೆನಪು



ಶ್ರೀ ಬಿ.ಬೋರಯ್ಯನವರು
(ಅಡ್ಡೆಮರಿ ಸಿದ್ದಪ್ಪನವರ ಮಗ)
ಕೆ.ಜಿ. ಕೊಪ್ಪಲು, ಜಯನಗರ

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷಗಳು ಕಳೆದರೂ ನಿಮ್ಮ ಪ್ರೀತಿ, ಆದರ್ಶಗಳು ನಮಗೆ ದಾರಿದೀಪವಾಗಿದೆ. ಸದಾ ನಿಮ್ಮ ನೆನಪು ನಮ್ಮ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ.

ಸದಾ ನಿಮ್ಮನ್ನು ಸ್ಮರಿಸುತ್ತಿರುವ

ಗಂಡು ಮಕ್ಕಳಾದ: ಬಿ. ಮಹದೇವು ಮತ್ತು ಬಿ. ಕುಮಾರ್, ಸೊಸೆಯಂದಿರು: ಗಾಯಿತ್ರಿ ಮತ್ತು ಸೌಮ್ಯ, ಹೆಣ್ಣು ಮಕ್ಕಳು: ಪುಷ್ಪ ಮತ್ತು ಗೌರಿ, ಅಳಿಯಂದಿರು: ವಿಜಿಕುಮಾರ್ ಮತ್ತು ಬೋರಪ್ಪ, ಮೊಮ್ಮಕ್ಕಳಾದ: ಶರತ್,ಅರ್ಪಿತ,ಯುಕ್ತ,ಅಕ್ಷತ, ಅಭಿಷೇಕ್, ಅನುಶ್ರೀ, ಅನಿಲ್, ಹಾಸಿನಿ, ಬಂಧು-ಮಿತ್ರರು ಹಾಗೂ ಕುಟುಂಬ ವರ್ಗದವರು, ಕೆ.ಜಿ. ಕೊಪ್ಪಲು, ಜಯನಗರ, ಮೈಸೂರು.

ಪ್ರಕಟಣೆ: **ಬಿ.ಮಹದೇವು ಮತ್ತು ಬಿ.ಕುಮಾರ್, ಜೆಡಿಎಸ್ ಮುಖಂಡರು**
ಭೈರವ ಕಾಂಪ್ಲೆಕ್ಸ್ ಹಾಗೂ ಭೈರವ ಗ್ರೂಪ್ಸ್ ಮಾಲೀಕರು
ಕೆ.ಜಿ. ಕೊಪ್ಪಲ್, ಜಯನಗರ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಪಿ. ಪುಟ್ಟರಾಜು
(ಸುರೇಶ್ ಬಸ್ ಮಾಲೀಕರು ಹಾಗೂ ಅಧ್ಯಕ್ಷರು, ಖಾಸಗಿ ಬಸ್ ಏಜೆಂಟರ್ ಸಂಘ ತಿ.ನರಸೀಪುರ)

ಇವರು ದಿನಾಂಕ: 08.10.2023ನೇ ಭಾನುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 18.10.2022 ಬುಧವಾರ ಬೆಳಗ್ಗೆ 11.00ಕ್ಕೆ ತ್ರಿವೇಣಿ ನಗರದ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಕಾಂಚನ ಪುಟ್ಟರಾಜು, ಪಿ.ಸ್ವಾಮಿನಾಥ್ ಗೌಡ, ಪಿ.ನೀಲಕಂಠ, ನಂದಕುಮಾರ್, ವಸಂತ್‌ಕುಮಾರ್, ಸಂದೇಶ್, ಸಂತೋಷ್, ಹರ್ಷಕುಮಾರ್, ಅಭಿಲಾಶ್, ಕುಟುಂಬವರ್ಗದವರು ತಿರಮಕೂಡಲು ಗ್ರಾಮಸ್ಥರು ಹಾಗೂ ಬಂಧುಮಿತ್ರರು

ಭೋಜನ: ಮಧ್ಯಾಹ್ನ 1 ಗಂಟೆಗೆ